ವಾರ್ಷಿಕ ವರದಿ

2018–19

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ

BE BOUNDLESS

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು 560 001

ಜಾಲತಾಣ :https://www.bcu/ac.in

ವಾರ್ಷಿಕ ವರದಿಯ ಸಂಪಾದಕೀಯ ಮಂಡಳಿ

೧.	**ಪ್ರೊ. ರಮೇಶ್. ಬಿ** ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಅಧ್ಯಕ್ಷರು**
೨.	**ಡಾ. ಚೇತನ** ಪ್ರಾಧ್ಯಾಪಕರು,ರಸಾಯನಶಾಸ್ತ್ರ ವಿಭಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೩.	**ಡಾ. ಕೆ.ಆರ್. ಜಲಜ** ಸಹ– ಪ್ರಾಧ್ಯಾಪಕರು,ವಾಣಿಜ್ಯ ವಿಭಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೪.	**ಡಾ. ಜ್ಯೋತಿ ವೆಂಕಟೇಶ್** ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು. ಜಾಗತಿಕ ಭಾಷೆಗಳ ಕೇಂದ್ರ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೫.	**ಶ್ರೀಮತಿ. ಪದ್ಮ** ಅಧೀಕ್ಷಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**

ಈ ವಾರ್ಷಿಕ ವರದಿ ಸಿದ್ಧಪಡಿಸಲು ನೆರವಾದ ಕೆಳಗಿನ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ಕೃತಜ್ಞತೆಗಳು:–

೧. ಶ್ರೀ. ಮನೋಜ್. ಹೆಚ್.ಆರ್. ಅತಿಥಿ ಉಪನ್ಯಾಸಕರು, ಸಮಾಜಕಾರ್ಯ ವಿಭಾಗ

೨. ಡಾ. ನಾರಾಯಣಸ್ವಾಮಿ,

೩. ಶ್ರೀ. ಆಯನಾರ್ಡೊ ಡಿಸೋಜಾ

೪. ಡಾ. ಅಖ್ತರ್

೫. ಡಾ. ಅಸ್ಮ ಕೌಸರ್

ಪರಿವಿಡಿ

ಕ್ರ.ಸಂ.	ವಿಷಯ	ಪುಟ ಸಂಖ್ಯೆ
	ಮುನ್ನುಡಿ	೫–೧೩
೧	ಸಾಮಾನ್ಯ ಮಾಹಿತಿ	೧೪–೧೭
೨	ವಿಶ್ವವಿದ್ಯಾನಿಲಯದ ಅಧಿಕಾರಿಗಳು	೧೭–೩೨
೩	ಕಣ್ನೋಟ ಮತ್ತು ಧ್ಯೇಯ	೩೨–೩೩
೪	ಸಂಘಟನೆ ಮತ್ತು ಆಡಳಿತ	೩೩–೩೪
೫	2010ರ ಯುಜಿಸಿ ಅಧಿಸೂಚನೆ ಪ್ರಕಾರ ಐಕ್ಯೂಎಸಿ ನಿಯಮಾವಳಿಗಳು ಮತ್ತು ಅದರ ಕಾರ್ಯ ವೈಖರಿ	34–35
೬	ಕೆಎಸ್‌ಯು ಕಾಯ್ದೆ 2000ರ ಪ್ರಕಾರ ಕಾರ್ಯಕ್ರಮ ಸಂವೀಕ್ಷಣೆ ಮತ್ತು ಮೌಲ್ಯಮಾಪನ ಮಂಡಳಿ(ಪಿಎಂಇಬಿ)ಯ ರಚನೆ ಮತ್ತು ಅದರ ಕಾರ್ಯವೈಖರಿ	೩೫–೩೬
೭	ಕುಲಪತಿಯವರ/ಸರ್ಕಾರದ ನಿರ್ದೇಶನಗಳ ಅನುಷ್ಠಾನದ ವರದಿ	೩೬–೩೯
೮	ಕೆಎಸ್‌ಎಚ್‌ಇಸಿ ಶಿಫಾರಸ್ಸುಗಳಂತೆ ಸರ್ಕಾರ ಹೊರಡಿಸಿದ ಅಧಿಸೂಚನೆಗಳ ಅನುಷ್ಠಾನದ ವರದಿ	೩೯–೪೪
೯	ಸಾಮಾಜಿಕ ಹೊರಗುಳಿವಿಕೆ ಮತ್ತು ಒಳಗೊಳ್ಳುವಿಕೆ ನೀತಿಗಳ ಅಧ್ಯಯನ ಕೇಂದ್ರದ ವರದಿ	೪೪
೧೦	ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಅಧ್ಯಯನ ಕೇಂದ್ರ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸಬ್ಬಳಕೆ	೪೪
೧೧	ದಾಖಲಾತಿ ಪ್ರಕ್ರಿಯೆಗಳು	೪೪–೪೬
೧೨	ವಿದ್ಯಾರ್ಥಿಗಳ ಬೆಂಬಲ	೪೭–೫೦
೧೩	ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ	೫೦–೫೬
೧೪	ಹಳೆ ವಿದ್ಯಾರ್ಥಿಗಳ ಸಂಘ	೫೬–೫೭
೧೫	ಸಂಯೋಜನೆ	೫೭
೧೬	ಕಾಲೇಜು ಅಭಿವೃದ್ಧಿ ಮಂಡಳಿ	೫೭–೫೮
೧೭	ಪಠ್ಯಕ್ರಮದ ವಿನ್ಯಾಸ ಮತ್ತು ಪ್ರಗತಿ	೫೮–೫೯
೧೮	ಪ್ರಸಾರಾಂಗ ಮತ್ತು ಮುದ್ರಣಾಲಯ	೫೯–೬೦
೧೯	ಶುಲ್ಕದ ವಿವರಗಳು	೬೦–೬೪
೨೦	ಅಧ್ಯಾಪಕರ ವಿವರ	೬೪–೭೨
೨೧	ಸಹಾಯಕ ಸಿಬ್ಬಂದಿ	೭೨

೨೨	ಪರೀಕ್ಷೆ ಮತ್ತು ಮೌಲ್ಯಮಾಪನ	೭೨–೮೩
೨೩	ಘಟಿಕೋತ್ಸವ	೮೩–೮೪
೨೪	ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಕೋಶ	೮೪
೨೫	ಆಧುನಿಕ ಬೋಧನೆ–ಕಲಿಕೆ–ಸಂಶೋಧನಾ ಚಟುವಟಿಕೆಗಳ ಕೇಂದ್ರವಾಗಿ ಗ್ರಂಥಾಲಯ	೮೪
೨೬	ವಿಶ್ವವಿದ್ಯಾನಿಲಯ ಗ್ರಂಥಲಾಯ	೮೪
೨೭	ಭೌತಿಕ ಮೂಲಸೌಕರ್ಯ	೮೪–೮೮
೨೮	ಐಸಿಟಿ ಮೂಲಸೌಲಭ್ಯಗಳು	೮೮
೨೯	ಯುಜಿಸಿ– ಸಿಬ್ಬಂದಿ ತರಬೇತಿ ಕಾಲೇಜು	೮೮
೩೦	ಹಣಕಾಸು	೮೮–೯೨
೩೧	ಕ್ರೀಡೆ/ಎನ್‌ಎಸ್‌ಎಸ್/ಎನ್‌ಸಿಸಿ/ವೈಆರ್‌ಸಿ	೯೩–೯೭
೩೨	ಮಹಿಳಾ ಸಬಲೀಕರಣ, ಪಜಾ/ಪಪಂ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಲಿಂಗ ಸಮಾನತೆ ಮತ್ತು ಇತರ ಕೋಶಗಳ ರಚನೆ ಮತ್ತು ಪ್ರತಿ ಕೋಶದ ಹಣಕಾಸು ಅನುದಾನ, ಖರ್ಚುವೆಚ್ಚ ಮತ್ತು ಇತರ ಚಟುವಟಿಕೆಗಳ ವರದಿ	೯೭
೩೩	ಉತ್ತಮ ನಡವಳಿಕೆಗಳು	೯೭–೯೮
೩೪	ವಿನೂತನ/ನವೀನ ಬದಲಾವಣೆಗಳು	೯೮
೩೫	ದಾವೆಗಳು	೯೮
೩೬	ಲೋಕಾಯುಕ್ತ ಪ್ರಕರಣಗಳು, ಯಾವುದಾದರೂ ಇದ್ದರೆ	೯೮
೩೭	ಶಾಸಕಾಂಗ ಸಮಿತಿಯ ನಡಾವಳಿಗಳು	೯೮
೩೮	ದೂರ ಶಿಕ್ಷಣ	೯೮
೩೯	ಶೈಕ್ಷಣಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯವು ಪ್ರಸ್ತಾಪಿಸುವ ವಿಶೇಷ ಯೋಜನೆಗಳು	೯೮
೪೦	ವಿಶ್ವವಿದ್ಯಾನಿಲಯದ ಸಾಧನೆಗಳನ್ನು ತೋರಿಸುವ ಇತರ ಮಾಹಿತಿಗಳು	೯೮
೪೧	ಉಪಕುಲಪತಿಯವರ ಅನಿಸಿಕೆಗಳು	೯೯–೧೦೦

ಮುನ್ನುಡಿ:-

1) ವಿಶ್ವವಿದ್ಯಾನಿಲಯದ ಸ್ಥಾಪನೆ:

೨೦೧೮-೧೯ನೇ ಸಾಲಿನ ವಿಶ್ವವಿದ್ಯಾನಿಲಯದ ಮೊದಲ ವಾರ್ಷಿಕ ವರದಿಗಾಗಿ ಈ ಮುನ್ನುಡಿ ಬರೆಯುವುದು ಹೆಮ್ಮೆ ಮತ್ತು ಪ್ರತಿಷ್ಠೆಯ ವಿಷಯವಾಗಿದೆ. ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ ೨೦೦೦ ಕ್ಕೆ ತಿದ್ದುಪಡಿ ಮಾಡುವ ಮೂಲಕ ೧೩ ಆಗಸ್ಟ ೨೦೧೫ ರಂದು ಅಸ್ತಿತ್ವದಲ್ಲಿ ಬಂದಿರುತ್ತದೆ.ದಿನಾಂಕ ೨೬.೦೭.೨೦೧೭ ರಂದು ಕುಲಪತಿಗಳ ನೇಮಕ ಮಾಡುವುದರೊಂದಿಗೆ ಶೈಕ್ಷಣಿಕ ಚಟುವಟಿಕೆಗಳು ಅಧಿಕೃತವಾಗಿ ಪ್ರಾರಂಭಿಸಲಾಯಿತು. ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳ ವಿದ್ಯಾರ್ಥಿಗಳ ಪ್ರವೇಶಗಳನ್ನು ೨೦೧೮-೧೯ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಯಿತು. ಕರ್ನಾಟಕ ಸರ್ಕಾರದ ಸುಗ್ರಿವಾಜ್ಞೆ ಮತ್ತು ಗೆಜೆಟ್ ಅಧಿಸೂಚನೆ ಮೂಲಕ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹೆಸರನ್ನು ೨೦೨೦ರ ಜೂನ್ ೧೯ರಿಂದ ಜಾರಿಗೆ ಬರುವಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯವೆಂದು ಬದಲಾವಣೆ ಮಾಡಲಾಗಿದೆ. ಒಂದು ಅರ್ಥದಲ್ಲಿ ವಿಶ್ವವಿದ್ಯಾನಿಲಯದ ನೈಜ ಸ್ವರೂಪ ಹಾಗೂ ಪ್ರಾದೇಶಿಕ ಚಿತ್ರಣವನ್ನು ಪ್ರತಿಬಿಂಬಿಸುವಲ್ಲಿ ಈ ಬದಲಾವಣೆ ಸಹಕಾರಿಯಾಗಲಿದೆ.

ಒಂದು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಗರಿಷ್ಟ ೧೦೦ ರಿಂದ ೧೫೦ ಮಹಾವಿದ್ಯಾಲಯಗಳು ಇರಬೇಕೆಂಬ ಯು.ಜಿ.ಸಿ ಮತ್ತು ರೂಸಾ ಮಾರ್ಗಸೂಚಿಗಳ ಪ್ರಕಾರ, ಶೈಕ್ಷಣಿಕ ಮಾನದಂಡಗಳು, ಗುಣಮಟ್ಟದ ಶಿಕ್ಷಣ, ಉತ್ತಮ ಆಡಳಿತ ನಿರ್ವಹಣೆ ಹಾಗೂ ಶೈಕ್ಷಣಿಕ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಉದ್ದೇಶದಿಂದ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ತ್ರಿಭಜಿಸಿ ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ಈ ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಬೆಂಗಳೂರು ನಗರ ಜಿಲ್ಲೆಯ ೧೩ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಅವುಗಳು ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಹೆಬ್ಬಾಳ, ಮಲ್ಲೇಶ್ವರಂ, ಶಿವಾಜಿನಗರ, ಗಾಂಧಿನಗರ ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ, ರಾಜಾಜಿನಗರಗಳಾಗಿವೆ. ಈ ವಿಶ್ವವಿದ್ಯಾನಿಲಯದ ಅಡಿಯಲ್ಲಿ ೨೩೯ ಸಂಯೋಜಿತ ಕಾಲೇಜುಗಳು ಹಾಗೂ ಗಣಿತಶಾಸ್ತ್ರ, ರಸಾಯನಶಾಸ್ತ್ರ, ಜೇವರಸಾಯನಶಾಸ್ತ್ರ, ವಾಣಿಜ್ಯಶಾಸ್ತ್ರ, ನಿರ್ವಹಣೆ, ಸಂವಹನ, ಫ್ಯಾಶನ್‌ಮತ್ತು ಉಡುಪು ವಿನ್ಯಾಸ, ಮತ್ತು ಜಾಗತಿಕ ಭಾಷೆಗಳ ಎಂಟು ಸ್ನಾತಕೋತ್ತರ ವಿಭಾಗಗಳು ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಯಾಗಿ ಬಂದಿರುತ್ತವೆ.

ತ್ರಿಭಜನೆ ಪೂರ್ವದ ಬೆಂಗಳೂರು ವಿಶ್ವವಿದ್ಯಾಲಯದ ೧೬ ಸ್ವಾಯತ್ತ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಪ್ರಸಿದ್ಧ ಹತ್ತು ಸ್ವಾಯತ್ತ ಕಾಲೇಜುಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬಂದಿರುತ್ತವೆ. ಅವುಗಳಲ್ಲಿ ಎರಡು ಸ್ವಾಯತ್ತ ಕಾಲೇಜುಗಳು ವಿಶ್ವವಿದ್ಯಾಲಯಗಳಾಗಿ ಪರಿವರ್ತನೆ ಹೊಂದಿರುತ್ತವೆ.

1. ವಿಶ್ವವಿದ್ಯಾನಿಲಯದ ಪರಂಪರೆ:

ಉನ್ನತ ಶಿಕ್ಷಣದ ಆಶಯಗಳನ್ನು ಸಾಕ್ಷಾತ್ಕರಿಸಲು ಸರ್ಕಾರ , ಸ್ಥಾಪಿಸಿರುವ ಈ ವಿಶ್ವವಿದ್ಯಾನಿಲಯವು ಶ್ರೀಮಂತ ಮತ್ತು ಐತಿಹಾಸಿಕ ಪರಂಪರೆ ಹೊಂದಿದೆ. ೧೮೫೮ರಲ್ಲಿ ಐದು ವಿದ್ಯಾರ್ಥಿಗಳೊಂದಿಗೆ ಬೆಂಗಳೂರು ಪ್ರೌಢಶಾಲೆಯಾಗಿ ೧೯ನೇ ಶತಮಾನದ ಅಂತ್ಯದಲ್ಲಿ ಸೆಂಟ್ರಲ್ ಕಾಲೇಜಾಗಿ ಬೆಳೆದು ವಿಜ್ಞಾನ ಕಲೆಕೆ ಮತ್ತು ಸಂಶೋಧನೆಯ ದೊಡ್ಡ ಕೇಂದ್ರವಾಗಿ ಮಾತ್ರವಲ್ಲದೆ, ಕನ್ನಡ ಸಾಹಿತ್ಯ, ಸಾಮಾಜಿಕ ಚಟುವಟಿಕೆಗಳ ಹಾಗೂ ರಾಜಕೀಯ ಪ್ರಜ್ಞೆ ಹೊರಹೊಮ್ಮಿಸುವ ಪ್ರಬುದ್ಧ ಕೇಂದ್ರವಾಗಿ ಬೆಳೆಯಿತು. ಒಂದು ಶತಮಾನಕ್ಕೂ ಹೆಚ್ಚು ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯ (೧೯೧೬-೧೯೬೪) ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳ (೧೯೬೪-೨೦೧೭) ಘಟಕ ಮಹಾವಿದ್ಯಾಲಯವಾಗಿ, ಸೆಂಟ್ರಲ್ ಕಾಲೇಜು ಈ ವಿಶ್ವವಿದ್ಯಾನಿಲಯಕ್ಕೆ ಭದ್ರವಾದ ಭೌತಿಕ ಹಾಗೂ ಭೌದ್ಧಿಕ ತಳಹದಿಯನ್ನು ಒದಗಿಸಿದೆ.

2. ವಿಶೇಷ ಅಧಿಕಾರಿಯ ನೇಮಕ ಮತ್ತು ವಿಶ್ವವಿದ್ಯಾನಿಲಯದ ಪ್ರಾರಂಭ:

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ. ಇಡಿ ೩೮೫ ಯುಬಿವಿ ೨೦೧೫ ದಿನಾಂಕ ೧೦.೦೬.೨೦೧೬ ರಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೆ ಚಾಲನೆ ನೀಡಲು ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಯಿತು. ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗಬೇಕಾದ ಸಿಬ್ಬಂದಿಗಳು, ವಿಭಾಗಗಳು, ಕಟ್ಟಡ/ಜಮೀನು ಇತ್ಯಾದಿಗಳ ಕುರಿತು ಸ್ಪಷ್ಟತೆಯ ಕೊರತೆಯನ್ನು ಗಮನಿಸಿ, ಇವುಗಳ ವರ್ಗಾವಣೆಗಾಗಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟನಂತರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ಎ. ಕೋರಿ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಿ, ಈ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ಮೂಲಸೌಕರ್ಯ, ಮಾನವ ಸಂಪನ್ಮೂಲ, ಅನುದಾನ ಇತ್ಯಾದಿಗಳ ವರ್ಗಾವಣೆ ಅಗತ್ಯವಾದ ಹೆಚ್ಚುವರಿ ಭೂಮಿಯನ್ನು ಸಂಬಂಧಿಸಿದ ಇಲಾಖೆಯಿಂದ ಸ್ವಾಧೀನ ಪಡಿಸಿಕೊಳ್ಳುವ ಕುರಿತು ಕ್ರಿಯಾಯೋಜನೆ ರೂಪಿಸಲು ಸದರಿ ಸಮಿತಿಗೆ ಸೂಚಿಸಲಾಯಿತು. ಸದರಿ ಸಮಿತಿ ಸಲ್ಲಿಸಿದ ವರದಿಯ ಆಧಾರದ ಮೇಲೆ ದಿನಾಂಕ ೦೪-೦೨-೨೦೧೭ ರಂದು ಸರ್ಕಾರ ಆದೇಶ ಹೊರಡಿಸಿ ಅಗತ್ಯ ಮೂಲಸೌಕರ್ಯ, ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸಂಪನ್ಮೂಲ, ವಿಭಾಗಗಳ ವರ್ಗಾವಣೆ ಇತ್ಯಾದಿ ಕುರಿತು ಅಗತ್ಯ ಸೂಚನೆ ನೀಡಲಾಯಿತು. ಅದರ ಪ್ರಕಾರ ೩೭ ಬೋಧಕ ಹುದ್ದೆಗಳನ್ನು ಮತ್ತು ೧೦೦ ಬೋಧಕೇತರ ಹುದ್ದೆಗಳನ್ನು ವರ್ಗಾಯಿಸಲಾಯಿತು. ಈ ಆವರಣದಲ್ಲಿ ಕಾರ್ಯನಿರ್ವಹಿಸುತಿದ್ದ ೭ ಸ್ನಾತಕೋತ್ತರ ವಿಭಾಗಗಳಲ್ಲಿ ಒಟ್ಟು ೮೬ ಹುದ್ದೆಗಳು ಅಸ್ತಿತ್ವದಲ್ಲಿದ್ದರೂ ಕೇವಲ ೩೭ ಹುದ್ದೆಗಳನ್ನು ಮಾತ್ರ ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾಗಿದ್ದು, ೪೯ ಹುದ್ದೆಗಳು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಳಿಸಲಾಗಿದೆ. ಈ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಅಭಿಮತ ವ್ಯಕ್ತಪಡಿಸಿದ ಬೋಧಕ ಸಿಬ್ಬಂದಿಗಳ ಸಂಖ್ಯೆ ೧೮ ಹಾಗೂ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ೧೮ ಇರುತ್ತದೆ. ಈ ಹಿನ್ನೆಲೆಯಲ್ಲಿ ೨೦೧೭-೧೮ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶ ಹಾಗೂ ಪರೀಕ್ಷೆಗಳನ್ನು ಮತ್ತು ಆರ್ಥಿಕ ಅಗತ್ಯಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ನಿರ್ವಹಿಸಲಾಗಿದೆ ಹಾಗು ಹೊಸ

ವಿಶ್ವವಿದ್ಯಾಲಯದ ಶೈಕ್ಷಣಿಕ ಪಥದ ರೂಪುರೇಷೆಗಳ ಕುರಿತು ಚರ್ಚಿಸಲು ಬುದ್ಧಿ ಜೀವಿಗಳ ಮತ್ತು ತಜ್ಞರೊಂದಿಗೆ ಸಮಾಲೋಚನಾ ಪ್ರಕ್ರಿಯೆಗಳನ್ನು ನಡೆಸಲು ಕೆಲವು ಸಮಿತಿಗಳನ್ನು ರಚಿಸಲಾಯಿತು.

3. ಉಪಕುಲಪತಿಗಳ ನೇಮಕ:

ಕರ್ನಾಟಕ ಸರ್ಕಾರ ಅಧಿಸೂಚನೆ ಸಂ. ಇಡಿ ೧೧೫ ಯುಬಿವಿ ೨೦೧೭ ದಿನಾಂಕ: 25.07.2017 ರ ಮೂಲಕ ನನ್ನನ್ನು ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯನ್ನಾಗಿ ನೇಮಕ ಮಾಡಿದ್ದು ಅದರಂತೆ ದಿನಾಂಕ ೨೬.೦೭.೨೦೧೭ರಂದು. ಅಧಿಕಾರ ವಹಿಸಿಕೊಂಡಿರುತ್ತೇನೆ.

4. ಶಾಸನಬದ್ಧ ಅಧಿಕಾರಿಗಳ ನೇಮಕ:

i) ದಿನಾಂಕ 07-08-2017 ರಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ: ಸಿ.ಎಂ. ತ್ಯಾಗರಾಜ ರವರನ್ನು ವಿಶ್ವವಿದ್ಯಾನಿಲಯದ ಪ್ರಥಮ ಕುಲಸಚಿವರು (ಆಡಳಿತ) ಆಗಿ ಸರ್ಕಾರ ನೇಮಕ ಮಾಡಿರುತ್ತದೆ. ಅವರ ಸೇವೆಯನ್ನು ಮಾತೃ ವಿಶ್ವವಿದ್ಯಾನಿಲಯಕ್ಕೆ ಮರಳಿಸಿದ ನಂತರ ಇದೇ ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ: ಎಂ. ರಾಮಚಂದ್ರಗೌಡ ರವರನ್ನು ದಿನಾಂಕ ೧೦-೧೧-೨೦೧೭ರಂದು ಕುಲಸಚಿವರು (ಆಡಳಿತ) ಆಗಿ ನೇಮಕ ಮಾಡಿರುತ್ತದೆ. ಪ್ರೊ. ಎಂ. ರಾಮಚಂದ್ರಗೌಡ ಅವರು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ದಿನಾಂಕ ೦೩.೦೭.೨೦೧೯ ರಂದು ನೇಮಕ ಹೊಂದಿರುತ್ತಾರೆ.

ii) ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ ವಿಭಾಗದ ಪ್ರಾಧ್ಯಾಪಕ ಹಾಗೂ ಯೋಜನೆ, ಉಸ್ತುವಾರಿ ಹಾಗೂ ಮೌಲ್ಯಮಾಪನ ನಿರ್ದೇಶಕರಾದ ಡಾ: ಲಿಂಗರಾಜ ಗಾಂಧಿಯವರು ದಿನಾಂಕ.೧೧.೦೮.೨೦೧೭ ರಂದು ಕುಲಸಚಿವರು (ಮೌಲ್ಯಮಾಪನ)ರಾಗಿ ನೇಮಕಗೊಂಡು ಒಂದು ವರ್ಷ ಆರು ತಿಂಗಳ ಸೇವೆ ಸಲ್ಲಿಸಿದ ನಂತರ ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕುಲಸಚಿವರಾಗಿ ನೇಮಕವಾಗಿ ವರ್ಗಾವಣೆಗೊಂಡು, ಅವರ ಸ್ಥಾನದಲ್ಲಿ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಎನ್. ಚಂದ್ರಪ್ಪ ಅವರು ದಿನಾಂಕ ೨೦.೦೨.೨೦೧೯ ರಂದು ಈ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ರಾಗಿ ನೇಮಕಗೊಂಡಿರುತ್ತಾರೆ.

iii) ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯ ಜಂಟಿ ನಿಯಂತ್ರಕರಾದ ಶ್ರೀ ವಿ.ಡಿ. ನಿಶ್ಚಿತ್ ರವರನ್ನು ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾಗಿ ನಿಯೋಜನೆ ಮಾಡಿದ್ದು ಇವರ ವರ್ಗಾವಣೆಯ ನಂತರ ದಿನಾಂಕ; ೧೬.೦೪.೨೦೨೦ರಂದು ಶ್ರೀ ಪಿ.ಎಲ್. ವೆಂಕಟೇಶಮೂರ್ತಿಯವರನ್ನು ನಿಯೋಜನೆ ಮಾಡಲಾಗಿದೆ.

5. ವಿಶ್ವವಿದ್ಯಾನಿಲಯದ ಉದ್ಘಾಟನೆ:

ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಯಾದ ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ರಾಜ್ಯದ ಅಂದಿನ ಗೌರವಾನ್ವಿತ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ನವರು ಮಾರ್ಚ ೭, ೨೦೧೮ ರಂದು ಅಧಿಕೃತವಾಗಿ ಉದ್ಘಾಟಿಸಿದರು. ಅಂದಿನ ಉನ್ನತ ಶಿಕ್ಷಣ ಸಚಿವರು ಹಾಗೂ ವಿಶ್ವವಿದ್ಯಾನಿಲಯದ ಸಮ ಕುಲಾಧಿಪತಿಗಳಾಗಿದ್ದ, ಸನ್ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ವಿಶ್ವವಿದ್ಯಾನಿಲಯದ ಪ್ರಾರಂಭವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ ಪ್ರಮುಖ ಪಾಲುದಾರ ಸಂಸ್ಥೆಗಳಾದ ಸಂಯೋಜಿತ/ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರು, ಅಧ್ಯಾಪಕ ವೃಂದ, ವಿದ್ಯಾರ್ಥಿಗಳು, ಸಾರ್ವಜನಿಕರು, ಸಹವರ್ತಿ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಕುಲಸಚಿವರು, ಅಧಿಕಾರಿಗಳು, ಮಾಧ್ಯಮದವರು, ಸರಕಾರಿ ಅಧಿಕಾರಿಗಳು, ಹಿಂದಿನ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಯನ ಮಾಡಿದ, ಈ ಕಾಲೇಜಿನೊಂದಿಗೆ ಸಂಬಂಧ ಹೊಂದಿದ ಖ್ಯಾತನಾಮರನ್ನು ಅಹ್ವಾನಿಸಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರೊ. ಸಿ.ಎನ್. ಆರ್. ರಾವ್., ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಕವಿ ನಿಸಾರ್ ಅಹ್ಮದ್, ಪ್ರೊ. ರೊಡ್ಡಮ್ ನರಸಿಂಹ, ಶಾಸಕರಾದ ಶ್ರೀ ರೇವಣ್ಣ, ಶ್ರೀ ರೋಷನ್ ಬೇಗ್, ಶ್ರೀ ರಾಮಲಿಂಗಾರೆಡ್ಡಿ, ಮುಂತಾದವರನ್ನು ವಿಶೇಷ ಅತಿಥಿಗಳಾಗಿ ಆಮಂತ್ರಿಸಲಾಗಿತ್ತು. ಈ ಬೃಹತ್ ಸಮಾರಂಭವನ್ನು ವಿಶ್ವವಿದ್ಯಾಲಯದ ಆಟದ ಮೈದಾನ (ಕ್ರಿಕೆಟ್ ಪೆವಿಲಿಯನ್) ದಲ್ಲಿ ಆಯೋಜಿಸಲಾಗಿತ್ತು. ಈ ಐತಿಹಾಸಿಕ ಸಮಾರಂಭದಲ್ಲಿ ಸುಮಾರು 10,000 ಜನರು ಭಾಗವಹಿಸಿ ಯಶ್ವಸಿಗೊಳಿಸಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಲಾಂಛನ (ಲೋಗೋ) ಹಾಗೂ ಧ್ಯೇಯ ವಾಕ್ಯ (ವಿಷನ್ ಹಾಗೂ ಮಿಷನ್) ಗಳನ್ನು ಬಿಡುಗಡೆ ಮಾಡಲಾಯಿತು.

6. ಕಲಾ ನಿಕಾಯದ ವಿಭಾಗಗಳಿಗಾಗಿ ನವೀಕೃತ ಕಟ್ಟಡದ ಉದ್ಘಾಟನೆ.

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಆಯಾ ಕಟ್ಟಡಗಳನ್ನು ಅಸ್ತಿತ್ವದಲ್ಲಿರುವ ವಿಭಾಗಗಳು ಉಪಯೋಗಿಸುತ್ತಿರುವುದರಿಂದ,ಕಲಾ ನಿಕಾಯದ ಅಡಿಯಲ್ಲಿ ಪ್ರಾರಂಭಿಸಿದ ಹೊಸ ವಿಭಾಗಗಳ ಪಾಠ ಪ್ರವಚನಗಳಿಗೆ ಕಟ್ಟಡ ಅಗತ್ಯವಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯ ಖಾಲಿ ಇರುವ ಕಟ್ಟಡಗಳನ್ನು ಹಸ್ತಾಂತರಿಸಲು ಸಹಕಾರ ನೀಡದಿರುವ ಹಿನ್ನೆಲೆಯಲ್ಲಿ, ಅಂದಿನ ಕುಲಸಚಿವರಾದ ಪ್ರೊ ರಾಮಚಂದ್ರಗೌಡರವರ ಆಸಕ್ತಿ ಹಾಗೂ ಒತ್ತಾಯದಿಂದಾಗಿ, ಹಿಂದಿನ ಭೌತಶಾಸ್ತ್ರ ವಿಭಾಗದ ಕಟ್ಟಡವನ್ನು ತೆರವುಗೊಳಿಸಲು ಕ್ರಮಕೈಕೊಂಡು, ನವೀಕರಿಸಿ ಅದನ್ನು ದಿನಾಂಕ ೦೫-೦೯-೨೦೧೮ ರಂದು ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ. ಹೆಚ್. ಡಿ. ಕುಮಾರಸ್ವಾಮಿ ಯವರ ಹಸ್ತದಿಂದ ಉದ್ಘಾಟಿಸಲಾಯಿತು.

7. **ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭ:**

ಅ) ಹೊಸದಾಗಿ ಪ್ರಾರಂಭವಾದ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ ಪ್ರಾರಂಭದಲ್ಲಿ ಕೇವಲ ಮೂರು ಅಧಿಕಾರಿಗಳು, ಹಾಗೂ ಇಬ್ಬರು ಶಿಕ್ಷಕೇತರ ಸಿಬ್ಬಂದಿ, ಒಬ್ಬರು ವಾಹನ ಚಾಲಕರು ಹಾಗೂ ಇಬ್ಬರು ನಿವೃತ್ತ ಅಧಿಕಾರಿಗಳೊಂದಿಗೆ ಕಾರ್ಯ ಪ್ರಾರಂಭಿಸಿದೆ. ಬೆಂಗಳೂರು ವಿಶ್ವವಿದ್ಯಾನಿಲಯ ಅಧಿಕಾರಿಗಳ ಸಂಬಳ ಸಾರಿಗೆ, ಕುಲಪತಿಗಳ ಬಳಕೆಗೆ ಒಂದು ವಾಹನ ಹಾಗೂ ಸಾದಿಲ್ವಾರು ವೆಚ್ಚಗಳನ್ನು ನಿರ್ವಹಿಸುತ್ತಿತ್ತು. ರಾಜ್ಯ ಸರ್ಕಾರ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ, ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರಬೇಕಾದ ಮಹಾವಿದ್ಯಾಲಯಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸುವುದರ ಮೂಲಕ ಶೈಕ್ಷಣಿಕ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು. ಅದರಂತೆ ೨೦೧೮-೧೯ನೇ ಸಾಲಿನ ಸಂಯೋಜನೆಯ ಪ್ರಕ್ರಿಯೆಗಳು ಪ್ರಾರಂಭಿಸಿ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಲಾಯಿತು.

ಆ) ವಿಶ್ವವಿದ್ಯಾನಿಲಯ ಪ್ರಾರಂಭದಲ್ಲಿ ವಿಜ್ಞಾನ ನಿಕಾಯದಲ್ಲಿ, ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಗಣಿತ, ಫ್ಯಾಶನ್ ಮತ್ತು ಉಡುಪು ವಿನ್ಯಾಸ ವಾಣಿಜ್ಯ ನಿಕಾಯದಲ್ಲಿ, ವಾಣಿಜ್ಯ ಶಾಸ್ತ್ರ ಹಾಗೂ ನಿರ್ವಹಣೆ (ಸಿ.ಬಿ.ಎಸ್.ಎಂ.ಎಸ್) ಮತ್ತು ಕಲಾ ನಿಕಾಯದಲ್ಲಿ, ಸಂವಹನ ಮತ್ತು ಜಾಗತಿಕ ಭಾಷೆಗಳು ಹೀಗೆ ಕೇವಲ ೮ಸ್ನಾತಕೋತ್ತರ ವಿಭಾಗಗಳನ್ನು ಹೊಂದಿತ್ತು. ಕಲೆ ಮತ್ತು ವಿಜ್ಞಾನ ನಿಕಾಯಗಳಲ್ಲಿ ಅಗತ್ಯವಾದ ಮೂಲಭೂತ ವಿಭಾಗಗಳನ್ನು ಪ್ರಾರಂಭಿಸುವ ಉದ್ದೇಶದಿಂದ ಹೊಸ ವಿಭಾಗಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಸರ್ಕಾರ ಪೂರಕವಾಗಿ ಸ್ಪಂದಿಸಿ, ಹೊಸದಾಗಿ ಕನ್ನಡ, ಇಂಗ್ಲೀಷ, ಸಮಾಜಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ಸಮಾಜಕಾರ್ಯ, ರಾಜ್ಯಶಾಸ್ತ್ರ ವಿಷಯದ ಏಳು ವಿಭಾಗಗಳನ್ನು ಪ್ರಾರಂಭಿಸಲು ಅನುಮತಿ ನೀಡಿತು. ಅದರಂತೆ ಈ ವಿಭಾಗಗಳನ್ನು ೨೦೧೮-೧೯ನೇ ಸಾಲಿನಿಂದ ಪ್ರಾರಂಭಿಸಲಾಯಿತು.

ಇ) ಹೊಸ ಸ್ನಾತಕೋತ್ತರ ಕೋರ್ಸುಗಳಿಗಾಗಿ ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಅಗತ್ಯವಾದ ಹಾಗೂ ವಿನೂತನ ಪಠ್ಯಕ್ರಮವನ್ನು ಜಾರಿಗೊಳಿಸಬೇಕೆಂಬ ಉದ್ದೇಶದಿಂದ ಖ್ಯಾತ ವಿದ್ವಾಂಸರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಲಾಯಿತು. ಸದರಿ ತಜ್ಞರ ಸಮಿತಿ ಯು.ಜಿ.ಸಿ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ಪಠ್ಯಕ್ರಮವನ್ನು ಮರುವಿನ್ಯಾಸಗೊಳಿಸಿ ಅದಕ್ಕನುಗುಣವಾಗಿ ಸ್ನಾತಕೋತ್ತರ ಪರಿನಿಯಮಗಳಿಗೆ ಕೆಲವು ತಿದ್ದುಪಡಿ ಮಾಡುವ ಅಗತ್ಯ ಮನಗಂಡು, ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ: ಎಸ್. ಆರ್. ಕೇಶವ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಿ, ಸಮಿತಿ ಶಿಫಾರಸ್ಸು ಮಾಡಿದ ಕರಡು ಪರಿನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರ ಸೂಚಿಸಿದ ಕೆಲವು ತಿದ್ದುಪಡಿಗಳನ್ನು ಮಾಡಿ ಪುನ: ಸಲ್ಲಿಸಲಾಗಿದೆ.

ಈ) ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟ, ವಿಶ್ವಾಸರ್ಹತೆ ಮತ್ತು ಸಾಧನೆ, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕವರ್ಗದ ಮೇಲೆ ಅವಲಂಬಿತವಾಗಿದೆ. ದುರದೃಷ್ಟವಶಾತ್, ವಿಶ್ವವಿದ್ಯಾನಿಲಯ ಕೇವಲ ೧೮ ಜನ ಖಾಯಂ ಬೋಧಕರನ್ನು ಹೊಂದಿದೆ. ಇಷ್ಟು ಕಡಿಮೆ ಸಂಖ್ಯೆಯ ಬೋಧಕ ವರ್ಗ ತಮ್ಮ ಶೈಕ್ಷಣಿಕ ಹಾಗೂ ಸಂಶೋಧನಾ ಜವಾಬ್ದಾರಿ ಜೊತೆಗೆ ಹೆಚ್ಚಿನ ಒಟ್ಟಾರೆ ಜವಾಬ್ದಾರಿ ವಹಿಸಿಕೊಳ್ಳುವುದು ಕಷ್ಟಸಾಧ್ಯವಾದ ವಿಷಯವಾಗಿದೆ. ಈ ಎಲ್ಲ ವೈರುಧ್ಯಗಳ ಮಧ್ಯೆ ನನ್ನ ಶಿಕ್ಷಕ ಸಹೋದ್ಯೋಗಿಗಳು ತಮಗೆ ವಹಿಸಿದ ಪಾಠಪ್ರವಚನ, ಸಂಶೋಧನೆ, ಹಾಗೂ ಆಡಳಿತ ನಿರ್ವಹಣೆಯ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ ಹಾಗೂ ಸಮಯಕ್ಕೆ ವಿಶ್ವವಿದ್ಯಾನಿಲಯದಆಡಳಿತದ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿ ವಿಶ್ವವಿದ್ಯಾನಿಲಯದೊಂದಿಗೆ ಸಹಕರಿಸಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪಾಠಪ್ರವಚನ ನಿರ್ವಹಣೆಯಲ್ಲಿ ಅತಿಥಿ ಉಪನ್ಯಾಸಕರು ಕೂಡ ತಮ್ಮ ಶಕ್ತಿಮೀರಿ ಸಹಕಾರ ನೀಡಿದ್ದಾರೆ. ಕಲಾ ನಿಕಾಯದ ಎಲ್ಲಾ ಕಾರ್ಯಭಾರವನ್ನು ಮತ್ತು ಅಸ್ತಿತ್ವದಲ್ಲಿರುವ ವಿಭಾಗಗಳ ಹೆಚ್ಚುವರಿ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರು ನಿರ್ವಹಿಸಿದ್ದಾರೆ. ನಿವೃತ್ತ ಪ್ರಾಧ್ಯಾಪಕರ ಅನುಭವ ವಿದ್ಯಾರ್ಥಿಗಳಿಗೆ ಸಹಕಾರಿಯಾಗುವುದರಿಂದ ಕೆಲವು ವಿಭಾಗಗಳಿಗೆ ನಿವೃತ್ತ ಪ್ರಾಧ್ಯಾಪಕರನ್ನು ಪಾಠಪ್ರವಚನ ನೀಡಲು ಆಮಂತ್ರಿಸಿ ಸಹಕಾರಪಡೆಯಲಾಗಿದೆ. ಅವರ ಸೇವೆ ಸಹ ಅಭಿನಂದನಾರ್ಹ.

ಉ) ಶೈಕ್ಷಣಿಕ ಚಟುವಟಿಕೆಗಳು ಮಹಾವಿದ್ಯಾಲಯಗಳ ಸಂಯೋಜನಾ ಪ್ರಕ್ರಿಯೆಯೊಂದಿಗೆ ಪ್ರಾರಂಭವಾಗುತ್ತವೆ. ವಿಶ್ವವಿದ್ಯಾನಿಲಯ ಯಶಸ್ವಿಯಾಗಿ ಸಂಯೋಜನಾ ಪ್ರಕ್ರಿಯೆ ಮುಗಿಸಿ, ತನ್ಮೂಲಕ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವೇಶಗಳಿಗೆ ಚಾಲನೆ ನೀಡಲಾಯಿತು. ಸಂಯೋಜಿತ ಮಹಾವಿದ್ಯಾಲಯಗಳ ಸುಮಾರು ೩೨೦೦೦ವಿದ್ಯಾರ್ಥಿಗಳ ಪ್ರವೇಶಗಳಿಗೆ ಅನುಮೋದನೆ ನೀಡುವುದು ಸವಾಲಿನ ಕೆಲಸವಾಗಿತ್ತು. ಇದಲ್ಲದೆ, ಸ್ನಾತಕೋತ್ತರ ವ್ಯಾಸಂಗಗಳಿಗೆ ಪ್ರವೇಶ ನೀಡಲು ಕೇಂದ್ರೀಕೃತ ಪ್ರವೇಶ ಘಟಕ ರಚಿಸಿ, ವಿಶ್ವವಿದ್ಯಾನಿಲಯದ ವಿಭಾಗಗಳಿಗೆ ಮತ್ತು ಸಂಯೋಜಿತ ಮಹಾವಿದ್ಯಾಲಯಗಳ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ನೀಡುವುದು ಎರಡನೆಯ ಸವಾಲಿನ ಕೆಲಸವಾಗಿತ್ತು. ಮಾನವ ಸಂಪನ್ಮೂಲದ ಕೊರತೆ, ಬೋಧಕ ಸಿಬ್ಬಂದಿಯ ಕೊರತೆ, ಮೂಲಸೌಕರ್ಯಗಳ ಅಭಾವ ಗಂಭೀರ ವಿಷಯವಾಗಿದ್ದವು. ಈ ಸಂದರ್ಭದಲ್ಲಿ ತಂತ್ರಜ್ಞಾನ ನೆರವಿಗೆ ಬಂದು ಕೆಲಸ ಸುಗಮಗೊಳಿಸಿತು.

ಊ) ಬೆಂಗಳೂರು ನಗರ ವಿಶ್ವವಿದ್ಯಾನಿಲಯ ತನ್ನ ಮೂಲ ವಿಶ್ವವಿದ್ಯಾನಿಲಯದಿಂದ ೩೧ ಸಂಶೋಧನಾ ಕೇಂದ್ರಗಳನ್ನು ಬಳುವಳಿಯಾಗಿ ಪಡೆದಿದೆ. ಈ ಕೇಂದ್ರಗಳಲ್ಲಿ ಲಭ್ಯವಿರುವ ಸ್ಥಾನಗಳಿಗೆ ಪ್ರವೇಶ ಪರೀಕ್ಷೆ ನಡೆಸಿ, ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ಎ) ವಿಶ್ವವಿದ್ಯಾನಿಲಯವು ಕಾನಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿ.ಐ.ಐ) ಜೊತೆಗೆ ಒಡಂಬಡಿಕೆ ಮಾಡಿಕೊಂಡು, ವಿದ್ಯಾರ್ಥಿಗಳಿಗೆ ಕೈಗಾರಿಕಾ ಸಂಸ್ಥೆಗಳೊಂದಿಗೆ ಸಂವಹನ ಸೇರಿದಂತೆ ಔಟರೀಚ್ ಕಾರ್ಯಕ್ರಮ ಜರುಗಿಸಲು ಸಹಕಾರಿಯಾಗಿದೆ.

8. **ಪರೀಕ್ಷಾ ಚಟುವಟಿಕೆಗಳು:** ವಿಶ್ವವಿದ್ಯಾನಿಲಯದ ವಿಶ್ವಾಸಾರ್ಹತೆ ಪರೀಕ್ಷಾ ವಿಭಾಗದ ಕಾರ್ಯ ನಿರ್ವಹಣೆಯ ಮೇಲೆ ಅವಲಂಬಿತವಾಗಿದೆ. ಕುಲಸಚಿವರು (ಮೌಲ್ಯಮಾಪನ) ಸೇರಿದಂತೆ ಮೂರು ಜನರೊಂದಿಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗ ಪ್ರಾರಂಭವಾಗಿ, 239 ಮಹಾವಿದ್ಯಾಲಯಗಳ ಸುಮಾರು 32000 ವಿದ್ಯಾರ್ಥಿಗಳ ಪರೀಕ್ಷಾ ಕೆಲಸ ನಿರ್ವಹಿಸಿದೆ. ಇಂದಿಗೂ ಸಹ ಪರೀಕ್ಷಾ ವಿಭಾಗದಲ್ಲಿ ಅಧಿಕಾರಿಗಳು ಸೇರಿದಂತೆ ಒಟ್ಟು 15 ಜನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಪರೀಕ್ಷಾ ಚಟುವಟಿಕೆಗಳು ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಪ್ರಾರಂಭವಾಗುತ್ತದೆ. ಪರೀಕ್ಷೆಗಳ ಪೂರ್ವ ಸಿದ್ಧತೆ, ಪರೀಕ್ಷೆ ನಡೆಸುವುದು, ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಸವಾಲಿನ ಕೆಲಸವಾಗಿತ್ತು. ತಂತ್ರಜ್ಞಾನ ಅಳವಡಿಸಿಕೊಂಡು ಎಲ್ಲ ಕೆಲಸಗಳನ್ನು ಯಾಂತ್ರೀಕರಣಗೊಳಿಸುವುದು ಈ ಸವಾಲನ್ನು ಎದುರಿಸಲು ಇರುವ ಏಕೈಕ ಮಾರ್ಗವೆಂದು ಅರಿತು, ಪರೀಕ್ಷಾ ಚಟುವಟಿಕೆಗಳನ್ನು ಇ-ಗವರ್ನನ್ಸ್ ಹಾಗೂ ಪರೀಕ್ಷಾ ನಿರ್ವಹಣೆ ಪದ್ಧತಿ (ಎಕ್ಸಾಮಿನೇಷನ್ ಮ್ಯಾನೇಜಮೆಂಟ್ ಸಿಸ್ಟೆಮ್) ಯನ್ನು ಹೊರಗುತ್ತಿಗೆ ಮುಖಾಂತರ ಪಡೆದು, ಪರೀಕ್ಷೆಗಳಿಗೆ ಸಂಬಂಧಿಸಿದ ಹೆಚ್ಚಿನ ಎಲ್ಲ ಕೆಲಸಗಳನ್ನು ಯಾಂತ್ರೀಕರಣಗೊಳಿಸಲಾಯಿತು. ಈ ವ್ಯವಸ್ಥೆಯಿಂದ ಅನುಕೂಲವಾಗಿ, ವಿದ್ಯಾರ್ಥಿಗಳಿಂದ, ಪೋಷಕರಿಂದ, ಕಾಲೇಜುಗಳ ಪ್ರಾಂಶುಪಾಲರಿಂದ, ಅಧ್ಯಾಪಕರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ. ಯಾಂತ್ರೀಕರಣದಿಂದ ತಪ್ಪುಗಳು ಕಡಿಮೆಯಾಗಿನಿಗದಿತ ಸಮಯಕ್ಕೆ ಪರೀಕ್ಷೆಗಳನ್ನು ನಡೆಸಲು ಹಾಗೂ ನಿಗದಿತ ಸಮಯದಲ್ಲಿ ಫಲಿತಾಂಶಗಳನ್ನು ಘೋಷಿಸಲು ಅನುಕೂಲವಾಗಿದೆ. ವಿದ್ಯಾರ್ಥಿಗಳ, ಶಿಕ್ಷಕರ, ಪ್ರಾಂಶುಪಾಲರ ಮತ್ತು ಸಿಬ್ಬಂದಿಗಳ ಸಹಕಾರದೊಂದಿಗೆ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

9. **ಮೂಲಸೌಕರ್ಯ ಮತ್ತು ಕಟ್ಟಡಗಳು:**

ಅ) ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ದಿನಲ್ಲಿದ್ದ ಕಟ್ಟಡಗಳನ್ನು ಹೊಸ ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡುವಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯ ತೋರಿಸಿದ ಅಸಹಕಾರದಿಂದಾಗಿ ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳುವಲ್ಲಿಬಹಳ ಕಷ್ಟ ಎದುರಿಸಬೇಕಾಯಿತು. ಇನ್ನು ಕೆಲವು ಕಟ್ಟಡಗಳು ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ದಿನಲ್ಲಿಯೇ ಇವೆ. ಆವರಣದಲ್ಲಿರುವ ಬಹುತೇಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ. ಈ ಕಟ್ಟಡಗಳನ್ನು ಸಂಪೂರ್ಣವಾಗಿ ನವೀಕರಿಸಬೇಕಾಗಿದೆ. ಕೆಲವು ಕಟ್ಟಡಗಳನ್ನು ಪುನರ್‌ನಿರ್ಮಾಣ ಮಾಡ ಬೇಕಾಗುತ್ತದೆ. ವಿಶ್ವವಿದ್ಯಾನಿಲಯದ ನೀಲನಕ್ಷೆ ಸಿದ್ಧಪಡಿಸಲು ಮಾಸ್ಟರ್ ಪ್ಲಾನ್ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ವಿಶ್ವವಿದ್ಯಾನಿಲಯದಲ್ಲಿ ಸ್ವತಂತ್ರವಾದ ಇಂಜಿನಿಯರಿಂಗ್ ವಿಭಾಗ ಇಲ್ಲದಿರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಇಂಜಿನಿಯರ ಹಾಗೂ ಒಬ್ಬರು ಕಿರಿಯ ಇಂಜಿನಿಯರ್ ಸೇವೆಗಳನ್ನು ಪಡೆಯಲಾಗುತ್ತಿದೆ.

ಆ) ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಮತ್ತು ಪ್ರಸನ್ನ ಕುಮಾರ ಬ್ಲಾಕ್ ನಲ್ಲಿರುವ ಅನೇಕ ಕಟ್ಟಡಗಳನ್ನು ಯುಜಿಸಿ, ಎಐಸಿಟಿಇ, ಐಸಿಹೆಚ್ಆರ್, ಸೆಂಟ್ರಲ್ ಸಾಹಿತ್ಯ ಅಕಾಡೆಮಿ, ಕರ್ನಾಟಕದ ಮಾಜಿ ಕುಲಪತಿಗಳ ವೇದಿಕೆ, ಸೆಂಟ್ರಲ್ ಕಾಲೇಜು ಹಿಂದಿನ ವಿದ್ಯಾರ್ಥಿ ಸಂಘ, ಹಂಪಿ ವಿಶ್ವವಿದ್ಯಾನಿಲಯ ಮುಂತಾದ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಹೀಗಾಗಿ ಹೊಸ ಸ್ನಾತಕೋತ್ತರ ವಿಭಾಗಗಳಿಗೆ ಮತ್ತು ಕಛೇರಿಗಳಿಗೆ ಸ್ಥಳಾವಕಾಶದ ಕೊರತೆಯಾಗಿದೆ. ಮೇಲಿನ ಸಂಸ್ಥೆಗಳಿಗೆ ಕಟ್ಟಡಗಳನ್ನು ತೆರವು ಮಾಡಲು ಹಲವಾರು ಸಲ ವಿನಂತಿಸಿದರೂ ಯಾವುದೇ ಪ್ರತಿಕ್ರಿಯೆ ಬಾರದಿರುವ ಕಾರಣ, ಕಟ್ಟಡಗಳನ್ನು ತೆರವುಗೊಳಿಸಲು ಕಾನೂನು ಕ್ರಮ ಕೈಗೊಳ್ಳಲು ವಿಶ್ವವಿದ್ಯಾನಿಲಯ ಕ್ರಮಕೈಗೊಂಡಿದೆ.

ಇ) ಹೊಸಕೋರ್ಸುಗಳನ್ನು ಪ್ರಾರಂಭಿಸಲು ಸ್ಥಳದ ಕೊರತೆ ಇರುವುದರಿಂದ ಹಾಗೂ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸಲು, ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯಲ್ಲಿ ೫೦ ಎಕರೆ ಭೂಮಿ ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಲಾಗಿದೆ.

10. ಪರಿಶಿಷ್ಟ ಜಾತಿ/ಪಂಗಡ/ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳು:

ರಾಜ್ಯ/ಕೇಂದ್ರ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಬುಡಕಟ್ಟು ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಇಲಾಖೆಗಳಲ್ಲಿ ಲಭ್ಯವಿರುವ ಪರಿಶಿಷ್ಟ ಜಾತಿ/ಪಂಗಡ/ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳನ್ನು ವಿಶ್ವವಿದ್ಯಾನಿಲಯ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಒಬ್ಬ ಅಧಿಕಾರಿಯನ್ನು ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಿ ಸದರಿ ವಿದ್ಯಾರ್ಥಿಗಳಿಗೆ ದೊರೆಯ ಬೇಕಾದ ಸೌಲಭ್ಯಗಳನ್ನು ಕಾಲಕಾಲಕ್ಕೆ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಸರ್ಕಾರ ಮಂಜೂರು ಮಾಡಿರುವ ಎಸ್‌ಸಿಪಿ–ಟಿಎಸ್‌ಪಿ ಅನುದಾನದಡಿಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡಲಾಗಿದೆ.

11. ಪ್ರಸಾರಾಂಗ:

ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಮುಖ ಅಂಗವಾಗಿದ್ದು, ವಿವಿಧ ಪಠ್ಯಪುಸ್ತಕಗಳ ಪ್ರಕಟಣೆ, ಸಂಶೋಧನಾ ಪತ್ರಿಕೆಗಳ ಪ್ರಕಾಶನ, ಆಕರಗ್ರಂಥಗಳ ಪ್ರಕಾಶನ, ವಿಸ್ತರಣಾ ಚಟುವಟಿಕೆಗಳನ್ನು ಈ ವಿಭಾಗದ ಮೂಲಕ ಜರುಗಿಸಬೇಕಾಗಿದೆ. ಇದರ ನಿರ್ವಹಣೆಗೆ ಒಬ್ಬರು ತಾತ್ಕಾಲಿಕ ಸಂಯೋಜಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಅವರು ರಾಜೀನಾಮೆ ನೀಡಿದ್ದು ಬೇರೊಬ್ಬ ಸಂಯೋಜಕರನ್ನು ನೇಮಕ ಮಾಡಬೇಕಾಗಿದೆ. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅಗತ್ಯವಾದ ಆಕರ ಗ್ರಂಥಗಳು ಆಂಗ್ಲ ಮಾಧ್ಯಮದಲ್ಲಿರುವುದರಿಂದ, ಅವುಗಳನ್ನು ಕನ್ನಡದಲ್ಲಿ ಬರೆಸಿ ಮುದ್ರಿಸುವ ಅಗತ್ಯವಿದೆ. ಇದಲ್ಲದೆ ವಿವಿಧ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಕೆಲಸವಾಗಬೇಕಾಗಿದೆ. ಪೂರ್ಣಪ್ರಮಾಣದ ಪ್ರಸಾರಾಂಗದ ಆಸ್ತಿತ್ವಕ್ಕೆ ಬಂದ ನಂತರ ಈ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ.

12. ಎನ್.ಎಸ್.ಎಸ್. ಚಟುವಟಿಕೆಗಳು:

ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಘಟಕ, ಮೌಂಟ ಕಾರ್ಮೆಲ್ ಕಾಲೇಜಿನ ಸಹಪ್ರಾಧ್ಯಾಪಕರಾದ ಡಾ: ಹೆಚ್. ಜಿ. ಗೋವಿಂದೆ ಗೌಡರ ನೇತೃತ್ವದಲ್ಲಿ ಕೆಲಸ ನಿರ್ವಹಿಸುತ್ತಿದೆ. ರಾಜ್ಯ ಸರ್ಕಾರದ ವಿವಿಧ ಎನ್.ಎಸ್.ಎಸ್. ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲಾಗುತ್ತಿದೆ. ವಿಶ್ವವಿದ್ಯಾನಿಲಯ ಆಚರಿಸುವ ವಿವಿಧ ಕಾರ್ಯಕ್ರಮ/ಜಯಂತಿಗಳ ಆಚರಣೆಯನ್ನು ಆಯೋಜಿಸುವಲ್ಲಿ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಹಾಯ ಮಾಡುವುದರ ಜೊತೆಗೆ ವಿವಿಧ ಕ್ಯಾಂಪ್ ಇತ್ಯಾದಿ ಗಳನ್ನು ಯಶಸ್ವಿಯಾಗಿ ಜರುಗಿಸಲಾಗಿದೆ.

13. ದೈಹಿಕ ಶಿಕ್ಷಣ ಮತ್ತು ಕ್ರೀಡೆ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ತನ್ನ ಮಿತಿಯೊಳಗೆ, ಕ್ರೀಡಾಪಟುಗಳಿಗೆ, ಉತ್ತಮ ಅವಕಾಶಗಳನ್ನು ಒದಗಿಸುವ ಪ್ರಯತ್ನ ಮಾಡಿದೆ. ಸಂಯೋಜಿತ ಕಾಲೇಜಿನ ದೈಹಿಕ ಶಿಕ್ಷಣದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಇಲಿಯಾಸ್ ಮೊಹಮ್ಮದ ಅವರು ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದಾರೆ.ನಿಯಮಿತವಾಗಿ ಅಂತರ ಕಾಲೇಜು ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ. ದಕ್ಷಿಣ ವಲಯ ಮತ್ತು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಲ್ಲಿ ಕ್ರೀಡಾಪಟುಗಳಿಗೆ ಮತ್ತು ತಂಡಗಳಿಗೆ ಭಾಗವಹಿಸಲು ಪ್ರೋತ್ಸಾಹ ನೀಡುತ್ತಿದೆ. ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಪದಕಗಳನ್ನು ಮತ್ತು ಟ್ರೋಫಿಗಳನ್ನು ಗೆದ್ದಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮುಂಬರುವ ವರ್ಷಗಳಲ್ಲಿ ಶ್ರೇಷ್ಠ ಶೈಕ್ಷಣಿಕ ಸಂಸ್ಥೆಯಾಗಿ ಹೊರಹೊಮ್ಮುವ ಎಲ್ಲಾ ಅವಕಾಶ ಹಾಗೂ ಸಾಮರ್ಥ್ಯ ಹೊಂದಿದ್ದು, ವಿವಿಧ ವಿಷಯಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಒತ್ತು ಕೊಡುವ ಕೆಲಸವಾಗಬೇಕಾಗಿದೆ. ಬೆಂಗಳೂರು ನಗರದಲ್ಲಿರುವ ವಿವಿಧ ಖಾಸಗಿ ವಿಶ್ವವಿದ್ಯಾಲಯಗಳ ಪೈಪೋಟಿ ಎದುರಿಸುವುದರ ಜೊತೆಗೆ ಇದರ ನಿರ್ವಹಣೆಯನ್ನು ವೃತ್ತಿಪರಗೊಳಿಸುವ ಅಗತ್ಯವಿದೆ. ಪ್ರತಿಭಾವಂತ ಬೋಧಕ ವರ್ಗವನ್ನು ಗುರುತಿಸಿ ನಿಯಮಿತವಾಗಿ ನೇಮಕ ಮಾಡುವುದು ಮೂಲಸೌಕರ್ಯಗಳನ್ನು ಒದಗಿಸುವುದು ಹಾಗೂ ಹೆಚ್ಚಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆ ನೀಡುವ ಪ್ರಯತ್ನವಾಗಬೇಕು.

ಕ್ಯಾಂಪಸ್‌ನಲ್ಲಿರುವ ಕಟ್ಟಡಗಳನ್ನು ನವೀಕರಿಸಿ, ಆವರಣದಲ್ಲಿ ಕಲಿಕೆಗೆ ಪೂರಕವಾದ ಪರಿಸರ ನಿರ್ಮಾಣ ಮಾಡಬೇಕು. ಕ್ಯಾಂಪಸ್ ಸುಂದರೀಕರಣ ಮಾಡಿ ವಿದ್ಯಾರ್ಥಿಗಳು, ಅಧ್ಯಾಪಕರು, ಆಡಳಿತ ಸಿಬ್ಬಂದಿ ಮತ್ತು ವಿವಿಧ ಪ್ರಾಧಿಕಾರಗಳ ಸದಸ್ಯರು ಇಲ್ಲಿಯ ಶಿಕ್ಷಣ ಮತ್ತು ಪರಿಸರದ ಉತ್ಕೃಷ್ಠತೆ ಅನುಭವಿಸುವಂತಾಗಬೇಕು.

ಪ್ರೊ. ಎಸ್. ಜಾಫೆಟ್
ಕುಲಪತಿಗಳು.

1. ಸಾಮಾನ್ಯ ಮಾಹಿತಿಗಳು:

ಎ. ವಿಶ್ವವಿದ್ಯಾನಿಲಯದ ಹೆಸರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಬಿ. ಸ್ಥಾಪನೆಯಾದ ವರ್ಷ, ವೆಬ್‌ಸೈಟ್ ವಿಳಾಸ ಮತ್ತು ನ್ಯಾಕ್ ಗ್ರೇಡ್:

ಸ್ಥಾಪನೆಯಾದ ವರ್ಷ: ೨೦೧೫ರ ಆಗಸ್ಟ್ ೧೩, ಕೆಎಸ್‌ಯು(ತಿದ್ದುಪಡಿ) ಕಾಯಿದೆ ೨೦೧೫

ಜಾಲತಾಣ ವಿಳಾಸ: **www.bcu.ac.in**

ನ್ಯಾಕ್ ಗ್ರೇಡ್ : ನ್ಯಾಕ್ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬೇಕಾಗಿದೆ.

ಸಿ. ನಿಯಂತ್ರಕರು ನೀಡುವ ವಿಶೇಷ ಸ್ಥಾನಮಾನ (ಯುಪಿಇ ಇತ್ಯಾದಿ): ಯಾವುದೂ ಇಲ್ಲ

ಕುಲಪತಿಗಳ ಹೆಸರು: ಪ್ರೊ. ಎಸ್. ಜಾಫೆಟ್

ಡಿ. ಕುಲಸಚಿವರು (ಆಡಳಿತ), ಕುಲಸಚಿವರು (ಮೌಲ್ಯಮಾಪನ),ವಿತ್ತಾಧಿಕಾರಿಗಳ ಹೆಸರು:

ಕುಲಸಚಿವರು : ಪ್ರೊ: ಸಿ.ಎಂ. ತ್ಯಾಗರಾಜ, 07.08.2017 - 10.11.2017
ಪ್ರೊ: ಎಂ. ರಾಮಚಂದ್ರ ಗೌಡ 10.11.2017 - 03.07.2019

ಕುಲಸಚಿವರು (ಮೌಲ್ಯಮಾಪನ): ಪ್ರೊ: ಅಂಗರಾಜ ಗಾಂಧಿ 11.08.2017 - 20.02.2019
ಪ್ರೊ: ಎಂ. ಚಂದ್ರಪ್ಪ 21.02.2019 - 30.12.2019

ವಿತ್ತಾಧಿಕಾರಿಗಳ ಹೆಸರು: ಪ್ರೊ: ಎಸ್. ಜಾಫೆಟ್ 26.07.2017 - 31.12.2017
ಪ್ರೊ: ಎಂ. ರಾಮಚಂದ್ರ ಗೌಡ 01.01.2018 - 15.01.2018
ಪ್ರೊ: ಎಸ್. ಜಾಫೆಟ್. 16.01.2018 - 24-06-2018
ಪ್ರೊ: ಎಂ. ರಾಮಚಂದ್ರ ಗೌಡ 25.06.2018 - 03.07.2019

ಇ. ವಿಶ್ವವಿದ್ಯಾನಿಲಯದ ವ್ಯಾಪ್ತಿ:

ಬೆಂಗಳೂರು ನಗರ ಜಿಲ್ಲೆಯ 13 ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿ. ಕ್ರಮವಾಗಿ ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಂ, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ,ಚಿಕ್ಕಪೇಟೆ, ಬಸವನಗುಡಿ, ಬಿಟಿಎಂ. ಬಡಾವಣೆ, ಮತ್ತು ರಾಜಾಜಿನಗರ.

ಎಫ್. ಕ್ಯಾಂಪಸ್‌ಗಳು/ಸ್ನಾತಕೋತ್ತರ ಕೇಂದ್ರಗಳ ಸಂಖ್ಯೆ ಭೂಮಿ, ಕಟ್ಟಡ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳು:

- **ಸೆಂಟ್ರಲ್ ಕಾಲೇಜು ಆವರಣ,**
- ಪರೀಕ್ಷಾ ವಿಭಾಗ (ನ್ಯಾಚುರಲ್ ಸೈನ್ಸ ಕಟ್ಟಡ), ಗಣಿತಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರ ಕಟ್ಟಡ, ರಸಾಯನಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ ಕಟ್ಟಡ, ಆಡಳಿತ ಕಟ್ಟಡ, ಮಾನವಿಕ ವಿಭಾಗ, ವಿಜ್ಞಾನ ವಿಭಾಗ, ವ್ಯವಹಾರ ವಿಭಾಗ, ಜೀವವಿಜ್ಞಾನ ವಿಭಾಗ, ಗ್ರಂಥಾಲಯ, ಕನ್ನಡ ಅಧ್ಯಯನ

ವಿಭಾಗ, ಫ್ಯಾಶನ್ ಮತ್ತು ಉಡುಪು ವಿನ್ಯಾಸ ವಿಭಾಗ, ಹಳೆಯ ಭೌತಶಾಸ್ತ್ರ ಪ್ರಸ್ತುತ ಕಲಾನಿಕಾಯದ ವಿಭಾಗಗಳು,ಗ್ರಂಥಾಲಯ ಕಟ್ಟಡ, ಕೆನರಾಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಇತ್ಯಾದಿ.

ಪ್ರಸನ್ನಕುಮಾರ ಬ್ಲಾಕ್. ಸಂವಹನ ವಿಭಾಗ, ವಾಣಿಜ್ಯ ವಿಭಾಗದ ಹೊಸ ಕಟ್ಟಡ, ಜಾಗತಿಕ ಭಾಷಾ ಕೇಂದ್ರ, ಇದಲ್ಲದೆ, ಶಿಥಿಲಾವಸ್ಥೆಯಲ್ಲಿರುವ ಸಿಬ್ಬಂದಿ ವಸತಿಗೃಹಗಳು, ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಾನೂನು ಮಹಾವಿದ್ಯಾಲಯದ ಕಟ್ಟಡ, ಶಿಥಿಲಾವಸ್ಥೆಯಲ್ಲಿರುವ ಹಳೆಯ ವಿದ್ಯಾರ್ಥಿನಿಯರ ವಸತಿನಿಲಯ, ಎಐಸಿಟಿಇ ಕಛೇರಿ, ಯುಜಿಸಿ ಕಛೇರಿ, ಐಸಿಹೆಚ್‌ಆರ್, ಆಟದ ಮೈದಾನ, ಕ್ಯಾಂಟೀನ್.ಫಿ

ಜಿ. ನಿಕಾಯಗಳು/ಶಾಲೆಗಳ ಸಂಖ್ಯೆ: ನಾಲ್ಕು

ಕಲಾ ನಿಕಾಯ,

ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ,

ವಾಣಿಜ್ಯ ನಿಕಾಯ,

ಶಿಕ್ಷಣ ನಿಕಾಯ,

ಹೆಚ್.ವಿಭಾಗಗಳ ಸಂಖ್ಯೆ: 15 ಸ್ನಾತಕೋತ್ತರ ವಿಭಾಗಗಳು

ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ	**ಕಲಾ ನಿಕಾಯ**	**ವಾಣಿಜ್ಯ ನಿಕಾಯ**
ಗಣಿತಶಾಸ್ತ್ರ	ಸಂಹವನ ಮತ್ತು ಪತ್ರಿಕೋದ್ಯಮ	ವಾಣಿಜ್ಯಶಾಸ್ತ್ರ
ರಸಾಯನಶಾಸ್ತ್ರ	ಜಾಗತಿಕಭಾಷೆಗಳ ಕೇಂದ್ರ	ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್
ಜೀವರಸಾಯನಶಾಸ್ತ್ರ	ಕನ್ನಡ	
ಫ್ಯಾಶನ್ ಮತ್ತು ಉಡುಪು ತಂತ್ರಜ್ಞಾನ	ಇಂಗ್ಲೀಷ	
	ಇತಿಹಾಸ	
	ಅರ್ಥಶಾಸ್ತ್ರ	
	ರಾಜ್ಯಶಾಸ್ತ್ರ	
	ಸಮಾಜಶಾಸ್ತ್ರ	
	ಸಮಾಜಕಾರ್ಯ	

ಐ. ಒಟ್ಟು ಕಾಲೇಜುಗಳ ಸಂಖ್ಯೆ (ಘಟಕ/ವಿಶ್ವವಿದ್ಯಾನಿಲಯ/ಸ್ವಾಯತ್ತ/ಸಂಯೋಜಿತ): ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು ಮತ್ತು/ ಅಥವಾ ಸಂಶೋಧನಾ ಕೇಂದ್ರಗಳು:

ಘಟಕ ಕಾಲೇಜುಗಳು: ಯಾವುದೂ	:	ಇಲ್ಲ
ಸ್ವಾಯತ್ತ ಕಾಲೇಜುಗಳು	:	10
ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು	:	46
ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು(ವಿಭಾಗಗಳು)	:	15
ಸಂಶೋಧನಾ ಕೇಂದ್ರಗಳು	:	32
ಸಂಯೋಜಿತ ಕಾಲೇಜುಗಳು	:	183

ಜೆ. ಒಟ್ಟು ಕೋರ್ಸುಗಳ ಸಂಖ್ಯೆ:

ಎ. ಪದವಿ ಕೋರ್ಸುಗಳ: ಸಂಖ್ಯೆ: 11

ಬಿ. ಸ್ನಾತಕೋತ್ತರ ಕೋರ್ಸುಗಳ ಸಂಖ್ಯೆ: 11

ಸಿ. ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ/ಡಿಪ್ಲೊಮಾ ಕೋರ್ಸುಗಳು: 06

ಡಿ. ಸರ್ಟಿಫಿಕೇಟು ಕೋರ್ಸುಗಳು: 01

ಪದವಿ ಕೋರ್ಸುಗಳು	ಸ್ನಾತಕೋತ್ತರ ಕೋರ್ಸುಗಳು	ಸ್ನಾತಕೋತ್ತರ ಡಿಪ್ಲೊಮಾ ಕೋರ್ಸುಗಳು:	ಸರ್ಟಿಫಿಕೇಟು ಕೋರ್ಸುಗಳು:
1. **B.A** 2. B.V.A **3. B.Sc** **4. B.Com** **5. BBA** **6. BSW** **7. BCA** **9. B.Voc** **10. B.Ed.** **11. B.P.Ed** **12. BHM**	**1. M.A** **2. M.V.A** **3. M.Sc** **4. M.Com** **5. MTTB** **6. MBA** **7. MSW** **8. MCA** **9. M.Ed.** **10.MMS** **11.MIB**	**1.Business Administration** **2.Diploma in industrial and construction safety management** **3.Human Resources Management** **4.Marketing Management** **5.Film Acting** **6.Yoga Studies**	**Certificate Course-1 (Yoga)**

ಕೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: ಪದವಿ/ಸ್ನಾತಕೋತ್ತರ ಪದವಿ/ಎಂ.ಫಿಲ್/ಪಿಹೆಚ್.ಡಿ/ದೂರಶಿಕ್ಷಣ (ಹೆಣ್ಣು/ಗಂಡು ಎಸ್‌ಸಿ/ಎಸ್‌ಟಿ – ಸಮುದಾಯವಾರು)

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಸ್ನಾತಕೋತ್ತರ ಪದವಿ ೨೦೧೮

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧.	ಆವರಣ/ ಕ್ಯಾಂಪಸ್	238	349	58	69	14	15	220	122	57	32	**587**
೭.	ಸಂಯೋಜಿತ ಕಾಲೇಜುಗಳು	2485	2873	422	265	92	57	1540	1116	819	1047	**5358**
ಒಟ್ಟು												

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಪಿ.ಜಿ ಡಿಪ್ಲೋಮೋ ಕೋರ್ಸುಗಳು

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	ಸಂಯೋಜಿತ ಕಾಲೇಜುಗಳು	68	31	05	06	01	04	04	04	21	32	**99**

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	ಸಂಯೋಜಿತ ಕಾಲೇಜುಗಳು	14931	16815	2704	2112	435	375	8513	7194	5163	5250	**31746**

೨. ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳು

ಅಕಾಡೆಮಿಕ್ ಕೌನ್ಸಿಲ್ ಸದಸ್ಯರು

ಕ್ರ. ಸಂ	ಗೌರವಾನ್ವಿತ ಸದಸ್ಯರ ಹೆಸರು	ಸ್ಥಾನಮಾನ	ಅವಧಿ
೧.	**ಉಪಕುಲಪತಿಯವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬೆಂಗಳೂರು – ೫೬೦ ೦೦೧	**ಅಧ್ಯಕ್ಷರು**	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೧೫(೨) ಪ್ರಕಾರ ಖಾಯಂ ಸದಸ್ಯರು
೨.	**ಆಯುಕ್ತರು** ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(೧)(ii) ಪ್ರಕಾರ ಖಾಯಂ ಸದಸ್ಯರು
೩.	**ನಿರ್ದೇಶಕರು, ತಾಂತ್ರಿಕ** ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(iii) ಪ್ರಕಾರ ಖಾಯಂ ಸದಸ್ಯರು

ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(iv) ಪ್ರಕಾರ ಕರ್ನಾಟಕ ವಿಧಾನ ಸಭೆಯ ಸಭಾಪತಿಗಳಿಂದ ವಿಧಾನ ಸಭೆಯ ಸದಸ್ಯರೊಬ್ಬರು/ಶಾಸಕರೊಬ್ಬರು ನಾಮನಿರ್ದೇಶನಗೊಂಡಿರುತ್ತಾರೆ.			
೧.	**ಶ್ರೀಮತಿ, ಸೌಮ್ಯ ರೆಡ್ಡಿಯವರು,** ಮಾನ್ಯ ಶಾಸಕರು ೪೫೫/೭, ೧೫ನೇ ಕ್ರಾಸ್, ಲಕ್ಕಸಂದ್ರ, ಬೆಂಗಳೂರು–೫೬೦ ೦೩೦	**ಸದಸ್ಯರು**	26.12.2018 ರಿಂದ 25.12.2021
ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(೧)(v) ಪ್ರಕಾರ ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿಗಳಿಂದ ವಿಧಾನ ಪರಿಷತ್‌ನ ಇಬ್ಬರು ಸದಸ್ಯರು ನಾಮನಿರ್ದೇಶನಗೊಂಡಿರುತ್ತಾರೆ.			
೧	**ಶ್ರೀ ಎಂ ಎ ಗೋಪಾಲಸ್ವಾಮಿ,** ಮಾನ್ಯ ವಿಧಾನ ಪರಿಷತ್ ಸದಸ್ಯರು, #೧೦, ಎರಡನೇ ಮಹಡಿ, ವೈಯಾಲಿಕಾವಲ್, ಬೆಂಗಳೂರು– ೫೬೦ ೦೦೩	**ಸದಸ್ಯರು**	30-06-2018 ರಿಂದ 02-07-2020
೨	**ಶ್ರೀ ಎಂ ನಾರಾಯಣಸ್ವಾಮಿ,** ಮಾನ್ಯ ವಿಧಾನ ಪರಿಷತ್ ಸದಸ್ಯರು, #೪೯೦, ಪ್ರಕೃತಿ, ೭ನೇ ಕ್ರಾಸ್, ೫ನೇ ಮುಖ್ಯ ರಸ್ತೆ ಜಗದೀಶ್‌ನಗರ, ಬೆಂಗಳೂರು–೫೬೦ ೦೭೫	**ಸದಸ್ಯರು**	30-06-2018 ರಿಂದ 02-07-2020
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(vi)ರ ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಸಂಯೋಜಿತ ಕಾಲೇಜುಗಳ ಹತ್ತು ಪ್ರಾಶುಂಪಾಲರುಗಳನ್ನು ರೊಟೇಷನ್ ಮಾದರಿಯಲ್ಲಿ ಮಾನ್ಯ ಉಪ ಕುಲಪತಿಗಳು ಎರಡು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡುತ್ತಾರೆ.			
೧.	**ಡಾ. ಶಾಂತಿ ರಾಜೇಂದ್ರಕುಮಾರ್,** ಪ್ರಾಂಶುಲಪಾಲರು, ಡಾ. ಅಂಬೇಡ್ಕರ್ ಪದವಿ ಕಾಲೇಜು, ಬೆಂಗಳೂರು	**ಸದಸ್ಯರು**	30-10-2018 ರಿಂದ 31-12-2019
೨.	**ಡಾ. ತೇಜಸ್ವಿನಿ,** ಪ್ರಾಂಶುಲಪಾಲರು, ಎಸ್‌ಜೆಆರ್‌ಸಿ ಮಹಿಳಾ ಪದವಿ ಕಾಲೇಜು, ಬೆಂಗಳೂರು.	**ಸದಸ್ಯರು**	30-10-2018 ರಿಂದ 31-12-2019
೩.	**ಡಾ. ಹರೀಶ್ ಎಸ್,** ಪ್ರಾಂಶುಲಪಾಲರು, ವಿಜಯಾ ಸಂಜೆ ಕಾಲೇಜು, ಆರ್‌ವಿ ರಸ್ತೆ, ಬಸವನಗುಡಿ, ಬೆಂಗಳೂರು–೫೬೦ ೦೦೪	**ಸದಸ್ಯರು**	30-10-2018 ರಿಂದ 29-10-2020
೪.	**ಡಾ. ಆಶಾ ಗಣೇಶ್** ಪ್ರಾಂಶುಲಪಾಲರು, ಸಿ ಬಿ ಬಂಡಾರಿ ಜೈನ್ ಕಾಲೇಜು ೮೪, ಕೆ ಕೆ ರೋಡ್, ಶಂಕರಪುರಂ ಬೆಂಗಳೂರು– ೫೬೦ ೦೦೪	**ಸದಸ್ಯರು**	
೫.	**ಡಾ. ಲತಾ ಕುಮಾರಿ,** ಪ್ರಾಂಶುಲಪಾಲರು,	**ಸದಸ್ಯರು**	

	ಸಂಜಯ್‌ಗಾಂಧಿ ಶಿಕ್ಷಣ ಕಾಲೇಜು, ಚೋಳ ನಗರ, ಹೆಬ್ಬಾಳ, ಬೆಂಗಳೂರು– ೫೬೦ ೦೩೨		
೬.	**ಡಾ. ಬಿ ಎ ಅನುರಾಧ,** ಪ್ರಾಂಶುಪಾಲರು, ಆಲ್ ಅಮೀನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಲಾಲ್‌ಭಾಗ್ ಮುಖ್ಯ ದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–೫೬೦ ೦೨೭	**ಸದಸ್ಯರು**	
೭.	**ಡಾ. ಪಾರ್ವತಿ** ಪ್ರಾಂಶುಪಾಲರು, ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು ೧೪ ನೇ ಮುಖ್ಯ ರಸ್ತೆ, ೨ನೇ ಹಂತ, ಜೆ ಪಿ ನಗರ, ಬೆಂಗಳೂರು–೫೬೦ ೦೭೮	**ಸದಸ್ಯರು**	
೮.	**ಡಾ. ರಾಜೇಶ್ ಈ ಬಿ.** ಪ್ರಾಂಶುಪಾಲರು, ಕಾವೇರಿ ಬಿಇಡಿ ಕಾಲೇಜು ನಂ.೩/೧, ಕೊಡಿಗೆಹಳ್ಳಿ ಮುಖ್ಯ ರಸ್ತೆ, ಸಹಕಾರ ನಗರ, ಬೆಂಗಳೂರು–೫೬೦ ೦೯೨	**ಸದಸ್ಯರು**	
೯.	**ಪ್ರೊ. ಡಿ. ಜಿ ಶ್ರೀನಿವಾಸಮೂರ್ತಿ** ಪ್ರಾಂಶುಪಾಲರು, ವಿವೇಕಾನಂದ ಶಿಕ್ಷಣ ಕಾಲೇಜು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ೨ನೇ ಹಂತ, ಬೆಂಗಳೂರು – ೫೬೦ ೦೫೫	**ಸದಸ್ಯರು**	
೧೦.	**ಪ್ರೊ. ಕೆ ರಮೇಶ್** ಪ್ರಾಂಶುಪಾಲರು, ಆಲ್ ಅಮೀನ್ ಶಿಕ್ಷಣ ಕಾಲೇಜು, ಲಾಲ್‌ಭಾಗ್ ಮುಖ್ಯ ದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–೫೬೦ ೦೨೭	**ಸದಸ್ಯರು**	

ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(vii)ಪ್ರಕಾರ ಕೈಗಾರಿಕೋದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರೆ ವೃತ್ತಿ ನಿರತರನ್ನು ಕರ್ನಾಟಕ ಸರ್ಕಾರ ಮೂರು ವರ್ಷಗಳ ಅವಧಿ ಮೀರದಂತೆ ನಾಮನಿರ್ದೇಶನ ಮಾಡಿದ ಮೂವರು ಗಣ್ಯ ವ್ಯಕ್ತಿಗಳು.

೧.	**ಪ್ರೊ. ಕೆ ಎನ್ ಗೋದಾಮಣಿ, # ೭೪೯,** 'ಸಂಪಿಗೆ', ೬ನೇ ಬ್ಲಾಕ್, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–೫೬೦ ೦೧೦	**ಸದಸ್ಯರು**	26.12.2018 ರಿಂದ 25.12.2021
೨.	**ಶ್ರೀಮತಿ ಅನುಪಮ ಎಸ್ ಬಿ** ಏಜೆನ್ಸೀಸ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–೫೬೦ ೦೬೦	**ಸದಸ್ಯರು**	26.12.2018 ರಿಂದ 25.12.2021

೩.	**ಡಾ. ಬಿ ಎನ್ ಉಮೇಶ್** #೧೪೪,೧೦ ಡೌನಿಂಗ್, ಕನ್ನಮಂಗಲ,ವೈಟ್‌ಫೀಲ್ಡ್ ಬೆಂಗಳೂರು–೫೬೦ ೦೬೭	**ಸದಸ್ಯರು**	26.12.2018 ರಿಂದ 25.12.2021

ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(viii)ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಐವರು ಪ್ರಾಧ್ಯಾಪಕರು.	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(ix)ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಎರಡು ವರ್ಷ ಅವದಿಗೆ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಡೀನ್‌ರು	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(x)ರಪ್ರಕಾರ ಎರಡು ವರ್ಷ ಅವದಿಗೆ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಆರು ವಿದ್ಯಾರ್ಥಿಗಳು	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(xi)ರಪ್ರಕಾರ ಮೂರು ವರ್ಷಗಳ ಅವದಿಗೆ ಕರ್ನಾಟಕ ಸರ್ಕಾರದಿಂದ ನಾಮ ನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಆರು ವ್ಯಕ್ತಿಗಳು	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(xii)ರಪ್ರಕಾರ ಗ್ರಂಥಪಾಲಕರು	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೩೦(೧)(xiii)ರಪ್ರಕಾರ ವಿದ್ಯಾರ್ಥಿ ಕಲ್ಯಾಣ ಸಂಸ್ಥೆಯ ನಿರ್ದೇಶಕರು	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(೧)(xiv)ರ ಪ್ರಕಾರ ಯೋಜನೆ, ಶಿಸ್ತು ಪಾಲನಾ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು.	**ಖಾಲಿಯಿದೆ**
ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(೧)(xv) ರ ಪ್ರಕಾರ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು.	**ಖಾಲಿಯಿದೆ**

ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦(೧)(xvi) ರ ಪ್ರಕಾರ ದೈಹಿಕ ಶಿಕ್ಷಣ ನಿರ್ದೇಶಕರು.		**ಖಾಲಿಯಿದೆ**	
೦೧	**ಕುಲಸಚಿವರು(ಮೌಲ್ಯಮಾಪನ)** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೧೮(೨) ಪ್ರಕಾರ ಖಾಯಂ ಸದಸ್ಯರು**
೦೨	**ಹಣಕಾಸು ಅಧಿಕಾರಿ** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೧೯(೩) ಪ್ರಕಾರ ಖಾಯಂ ಸದಸ್ಯರು**
೦೩	**ಕುಲಸಚಿವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯ ಕಾರ್ಯದರ್ಶಿ**	**ಕೆಎಸ್‌ಯು ಕಾಯಿದೆ ೨೦೦೦ ರಸೆಕ್ಷನ್ ೧೭(೨) ಪ್ರಕಾರ ಖಾಯಂ ಸದಸ್ಯರು**

ಸಿಂಡಿಕೇಟ್ ಸದಸ್ಯರು

ಕ್ರ. ಸಂ	ಗೌರವಾನ್ವಿತ ಸದಸ್ಯರ ಹೆಸರು	ಸ್ಥಾನಮಾನ	ಅವಧಿ
೧.	**ಉಪಕುಲಪತಿಯವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬೆಂಗಳೂರು – ೫೬೦ ೦೦೧	**ಅಧ್ಯಕ್ಷರು**	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೧೫(೨)ಪ್ರಕಾರ ಖಾಯಂ ಸದಸ್ಯರು
೨.	**ಆಯುಕ್ತರು** ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಬಿ)ರ ಪ್ರಕಾರ ಖಾಯಂ ಸದಸ್ಯರು
೩.	**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ,** ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ ೨೦೦೦ ಸೆಕ್ಷನ್ ೨೮(೧)(ಸಿ)ರ ಪ್ರಕಾರ ಖಾಯಂ ಸದಸ್ಯರು
	ಕೆಎಸ್‌ಯು ಕಾಯಿದೆ ೨೦೦೦೨೮(೧)(ಡಿ) ರ ಪ್ರಕಾರ ಮಾನ್ಯ ಉಪಕುಲಪತಿಯವರಿಂದ ಒಂದು ವರ್ಷದ ಕಾಲಾವಧಿಗೆ ರೊಟೇಷನ್ ಆಧಾರದಲ್ಲಿ ನಾಮನಿರ್ದೇಶನಗೊಂಡ ಡೀನ್‌ರು		
೧.	**ಡಾ. ಎನ್. ನರಸಿಂಹಮೂರ್ತಿ** ಕಲಾ ನಿಖಾಯದ ಡೀನ್‌ರು, ಸಂವಹನ ಪತ್ರಿಕೋದ್ಯಮ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	21-03-2019 ರಿಂದ 29-10-2019
	ಕೆಎಸ್‌ಯು ಕಾಯಿದೆ ೨೦೦೦೨೮(೧)(ಇ) ರ ಪ್ರಕಾರ ಕುಲಾಧಿಪತಿಯವರಿಂದ ನಾಮನಿರ್ದೇಶನಗೊಂಡ ಶಿಕ್ಷಣ ತಜ್ಞರು ಅಥವಾ ಕೈಗಾರಿಕೋದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರೆ ವೃತ್ತಿನಿರತ ಇಬ್ಬರು ಗಣ್ಯ ವ್ಯಕ್ತಿಗಳು.		
೧.	**ಡಾ. ಅರವಿಂದ್ ಹೆಚ್ ಟಿ** ನಂ. ೯೯, ಶ್ರೀ ಛಾಯಾ ನಿಲಯ, ೧ನೇ ಮುಖ್ಯ ರಸ್ತೆ, ಕನಕ ಲೇಔಟ್, ಬಿಎಸ್‌ಕೆ ೨ನೇ ಹಂತ, ಬೆಂಗಳೂರು – ೫೬೦ ೦೭೦.	**ಸದಸ್ಯರು**	31-07-2018 ರಿಂದ 30-07-2021

೨.	**ಶ್ರೀ ಹೆಚ್. ಆರ್. ಸತೀಶ್** ನಂ. ೧೫, ೧ನೇ ಅಡ್ಡ ರಸ್ತೆ, ಸಿದ್ಧಿ ವಿನಾಯಕ ಲೇಔಟ್, ಸಂಜಯ್‌ನಗರ ಬೆಂಗಳೂರು –೫೬೦ ೦೯೪.	**ಸದಸ್ಯರು**	31-07-2018 ರಿಂದ 30-07-2021
	ಕೆಎಸ್‌ಯು ಕಾಯಿದೆ ೨೦೦೦ ೨೮(೧)(ಎಫ್) ರ ಪ್ರಕಾರ ಮಾನ್ಯ ಉಪ ಕುಲಪತಿಯವರಿಂದ ಸೇವಾ ಹಿರಿತನದ ಆಧಾರದಲ್ಲಿ ರೊಟೇಷನ್ ಮಾದರಿಯಲ್ಲಿ ಒಂದು ವರ್ಷ ಅವದಿಗೆ ನಾಮನಿರ್ದೇಶನಗೊಂಡ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರುಗಳು– ಇವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗಿರಬೇಕು.		
೧.	**ಡಾ. ಶಾಂತಿ ರಾಜೇಂದ್ರಕುಮಾರ್** ಪ್ರಾಂಶುಪಾಲರು, ಡಾ. ಅಂಬೇಡ್ಕರ್ ಪದವಿ ಕಾಲೇಜು, ಬೆಂಗಳೂರು	**ಸದಸ್ಯರು**	30-10-2018 ರಿಂದ 29-10-2019
೨.	**ಡಾ. ಹರೀಶ್ ಎಸ್** ಪ್ರಾಂಶುಪಾಲರು, ವಿಜಯ ಸಂಜೆ ಕಾಲೇಜು, ಆರ್ ವಿ ರಸ್ತೆ, ಬಸವನಗುಡಿ, ಬೆಂಗಳೂರು–೫೬೦ ೦೦೪	**ಸದಸ್ಯರು**	
೩.	**ಡಾ. ಆಶಾ ಗಣೇಶ್,** ಪ್ರಾಂಶುಪಾಲರು, ಸಿ ಬಿ ಬಂಡಾರಿ ಜೈನ್ ಕಾಲೇಜು, ೮೪, ಕೆ ಆರ್ ರಸ್ತೆ, ಶಂಕರಪುರಮ್, ಬೆಂಗಳೂರು–೫೬೦ ೦೦೪	**ಸದಸ್ಯರು**	
೪.	**ಡಾ. ಲತಾ ಕುಮಾರಿ,** ಪ್ರಾಂಶುಪಾಲರು, ಸಂಜಯ್‌ಗಾಂಧಿ ಶಿಕ್ಷಣ ಕಾಲೇಜು, ಚೋಳ ನಗರ, ಹೆಬ್ಬಾಳ ಬೆಂಗಳೂರು–೫೬೦ ೦೩೨	**ಸದಸ್ಯರು**	
೪.	**ಕೆಎಸ್‌ಯು ಕಾಯಿದೆ ೨೦೦೦೨೮(೧)(ಜಿ) ರ ಮೂರು ವರ್ಷಗಳ ಅವಧಿ ಮೀರದಂತೆ ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶನಗೊಂಡ ಆರು ಗಣ್ಯವ್ಯಕ್ತಿಗಳ ಈ ಮುಂದಿನ ಅಂಶಗಳಿಗೆ ಅನ್ವಯಿಸಿದವರಾಗಿರಬೇಕು.** **ಅ) ಒಬ್ಬರು ಪ. ಜಾತಿ ಅಥವಾ ಪ. ಪಂಗಡಕ್ಕೆ ಸೇರಿದ ವ್ಯಕ್ತಿಯಾಗಿರಬೇಕು** **ಆ) ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಯಾಗಿರಬೇಕು.** **ಇ) ಒಬ್ಬರು ಮಹಿಳೆಯಾಗಿರಬೇಕು** **ಈ) ಒಬ್ಬರು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರದ ವ್ಯಕ್ತಿಯಾಗಿರಬೇಕು** **ಉ) ಇಬ್ಬರು ಇತರೆಯವರಾಗಿರಬೇಕು.**		

೧.	ಡಾ:ಅಬ್ರಹಾಂ ಎಬಿನೇಜರ್		**ಸರ್ಕಾರವು**30-06-2018 ರಿಂದ 19-07-2018 **ರವರೆಗೆ ನಾಮನಿರ್ದೇಶನ ಮಾಡಿ, ಕೂಡಲೇ ಅವರ ನಾಮನಿರ್ದೇಶನ ವನ್ನು ಹಿಂಪಡೆದಿರುತ್ತದೆ.**
೨.	ಡಾ: ಹೆಚ್.ಜಿ.ಜಯಕೃಷ್ಣ		
೩.	ಶ್ರೀ ದೊಡ್ಡ ಯಲ್ಲಪ್ಪ		
೪.	ಶ್ರೀಮತಿ.ಹೆಚ್.ಪಾರ್ವತಿ		
೫.	ಪ್ರೊ: ವಿ. ಸದಾಶಿವ		
೬	ಶ್ರೀ ಆರ್.ರಾಮೇಗೌಡ		
೧.	ಡಾ:ಎ.ಸೋಮಶೇಖರ ಮೂರ್ತಿ		**ಸರ್ಕಾರವು**30-06-2018 ರಿಂದ 19-07-2018 **ರವರೆಗೆ ನಾಮನಿರ್ದೇಶನ ಮಾಡಿ, ಕೂಡಲೇಅವರ ನಾಮನಿರ್ದೇಶನ ವನ್ನು ಹಿಂಪಡೆದಿರುತ್ತದೆ.**
೨.	ಡಾ:ತಾಸ್ಮಿನ್ ತಾಜ್		
೩.	ಡಾ:ರೂಬಿ ಸೆಲೆಸ್ಟೆನ್		
೪.	ಶ್ರೀ ಎಂ.ಉದಯ ಕುಮಾರ್		
೫.	ಶ್ರೀ ಆರ್.ಶಿವಚರಣ್		
೬.	ಡಾ:ಎ.ಪಿ.ಮಲ್ಲಿಕಾರ್ಜುನ ಗೌಡ		
	ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಹೆಚ್) ರ ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ರೊಟೇಷನ್ ಮಾದರಿಯಲ್ಲಿ ಉಪಕುಲಪತಿಗಳಿಂದ ಒಂದು ವರ್ಷ ಕಾಲಾವದಿಗೆ ನಾಮನಿರ್ದೇಶನಗೊಂಡು ರಾಜ್ಯ ಸರ್ಕಾರದಿಂದ ಅನುಮೋದನೆಯಾದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಒಬ್ಬರು ಪ್ರಾಧ್ಯಾಪಕರು.		**ಖಾಲಿಯಿದೆ**
೧.	**ನಿರ್ದೇಶಕರು** ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು – ೫೬೦ ೦೦೯	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಐ) ಪ್ರಕಾರ ಖಾಯಂ ಸದಸ್ಯರು**
೨.	**ಆಯುಕ್ತರು ಸಾರ್ವಜನಿಕ** ಸಲಹಾ ಸೂಚನಾ ಇಲಾಖೆ, ನೃಪತುಂಗಾ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಜೆ) ರ ಪ್ರಕಾರ ಖಾಯಂ ಸದಸ್ಯರು**

೩.	**ನಿರ್ದೇಶಕರು** ಪದವಿ ಪೂರ್ವ ಶಿಕ್ಷಣ ಮಂಡಳಿ ೧ಲನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬೆಂಗಳೂರು – ೫೬೦ ೦೦೩	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಕೆ) ರ ಪ್ರಕಾರ ಖಾಯಂ ಸದಸ್ಯರು**
೪.	**ಕುಲಸಚಿವರು(ಮೌಲ್ಯಮಾಪನ)** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಎಲ್) ರ ಪ್ರಕಾರ ಖಾಯಂ ಸದಸ್ಯರು**
೫.	**ಕುಲಸಚಿವರು** ಸಿಂಡಿಕೇಟ್ ಸದಸ್ಯ ಕಾರ್ಯದರ್ಶಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯ ಕಾರ್ಯದರ್ಶಿ**	**ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೨೮(೧)(ಎಂ) ರ ಪ್ರಕಾರ ಖಾಯಂ ಸದಸ್ಯರು**

ಎ. ಶಕ್ತಿ ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಮತ್ತು ಸವಾಲುಗಳ (ಎಸ್‌ಡಬ್ಲ್ಯೂಓಸಿ) ವಿಶ್ಲೇಷಣೆ ಮತ್ತು ಕೈಗೊಂಡ ಕ್ರಮಗಳು:

ಶಕ್ತಿ ಸಾಮರ್ಥ್ಯಗಳು:

- ವಿಶ್ವವಿದ್ಯಾನಿಲಯವು ಬೆಂಗಳೂರು ನಗರದ ಹೃದಯ ಭಾಗದಲ್ಲಿದೆ.
- ಬದ್ಧತೆಯಿರುವ ಪ್ರಾಧ್ಯಾಪಕ ಹಾಗೂ ಆಡಳಿತ ವರ್ಗ.
- ಯಾಂತ್ರೀಕೃತ ಪರೀಕ್ಷಾ ವ್ಯವಸ್ಥೆ.
- ಶ್ರೇಷ್ಠ ಐತಿಹಾಸಿಕ ಮತ್ತು ಶೈಕ್ಷಣಿಕ ಪರಂಪರೆ
- ನಗರದೆಲ್ಲೆಡೆ ಇರುವ ಅತ್ಯುತ್ತಮ ಶೈಕ್ಷಣಿಕ ಮತ್ತು ಸಂಶೋದನಾ ಸಂಸ್ಥೆಗಳು ಬೋಧಕ ಸಿಬ್ಬಂದಿ ಖ್ಯಾತ ವಿದ್ವಾಂಸರೊಂದಿಗೆ ಚರ್ಚೆ–ಸಂವಾದ ಮಾಡಲು ಅವಕಾಶ ಒದಗಿಸುತ್ತದೆ.
- ವಿಶ್ವ ದರ್ಜೆಯ ಸಾರಿಗೆ ಸೌಲಭ್ಯ.
- ಪ್ರಮುಖ ಪಿಎಸ್‌ಈಗಳು, ಎಂಎನ್‌ಸಿಗಳು ಹಾಗೂ ಖಾಸಗೀ ಕಾರ್ಪೊರೇಟ್ ಸಂಸ್ಥೆಗಳು ಬೆಂಗಳೂರು ನಗರದಲ್ಲಿಯೇ ಇವೆ.
- ಅತ್ಯುತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಲಭ್ಯವಿದೆ.
- ಆಟದ ಮೈದಾನಗಳು, ಹೊರಾಂಗಣ ಕ್ರೀಡಾಂಗಣದಂತಹ ಕ್ರೀಡಾ ಸೌಲಭ್ಯವಿದೆ.
- ವಿಶಾಲವಾದ ಗ್ರಂಥಾಲಯ ಹಾಗೂ ಡಿಜಿಟಲ್ ಸಂಪನ್ಮೂಲದ ಸೌಲಭ್ಯವಿದೆ.

ದೌರ್ಬಲ್ಯಗಳು:

- ಬೋಧಕ ಮತ್ತು ಬೋಧಕೇತರ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲದ ಕೊರತೆ.
- ಶಿಥಿಲಾವಸ್ಥೆಯಲ್ಲಿರುವ ಭೌತಿಕ ಕಟ್ಟಡಗಳು.
- ಪರಿಣಾಮಕಾರಿಯಾದ ಸಂಶೋಧನೆಗೆ ಹಣಕಾಸಿನ ಕೊರತೆ.
- ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಕೋರ್ಸ್‌ಗಳು ಕಡಿಮೆಯಿರುವುದು.
- ಮಹತ್ವಾಕಾಂಕ್ಷೆಯ ಶೈಕ್ಷಣಿಕ ಕೋರ್ಸ್‌ಗಳನ್ನು ಶುರುಮಾಡುವಲ್ಲಿ ಅಸಮರ್ಪಕ ಮೂಲಭೂತ ಸೌಕರ್ಯಗಳು.
- ವಿವಿಯಿಂದ ಮಾನ್ಯತೆ ಪಡೆದಿರುವ ಹಾಗೂ ಸ್ವಾಯತ್ತ ಕಾಲೇಜುಗಳ ನಡುವಿನ ಸಂಬಂಧಗಳು ದುರ್ಬಲವಾಗಿರುವುದು ಹಾಗೂ ಅಸಮಾನವಾಗಿರುವುದು.
- ವಿದ್ಯಾರ್ಥಿ ಸಾಮರ್ಥ್ಯಗಳಲ್ಲಿ ಅಸಮಾನವಾಗಿರುವುದು.
- ಮುಂದೆ ವಿಶ್ವವಿದ್ಯಾನಿಲಯವನ್ನು ಇನ್ನಷ್ಟು ವಿಸ್ತರಣೆ ಮಾಡಲು ಭೂಪ್ರದೇಶದ ಕೊರತೆ.

ಅವಕಾಶಗಳು:

- ರಾಜ್ಯದ ಶ್ರೇಷ್ಠ ಮತ್ತು ಹೊಸ ಸ್ವರೂಪದ ಸಾರ್ವಜನಿಕ ವಿಶ್ವವಿದ್ಯಾನಿಲಯವನ್ನಾಗಿ ರೂಪಿಸುವ ನಿರೀಕ್ಷೆ ಇದೆ.
- ಬೆಂಗಳೂರು ಎಂಬ ಚಿತ್ರಣಕ್ಕೆ ಕಳಶಪ್ರಾಯವಾಗಲಿದೆ.
- 2020 ರ ಹೊಸ ಶಿಕ್ಷಣ ಕಾಯಿದೆಯ ಅಗತ್ಯಗಳಿಗೆ ಪೂರಕವಾಗಿ ಹೊಸ ಶೈಕ್ಷಣಿಕ ಸ್ವರೂಪಗಳನ್ನು ಒಟ್ಟುಗೂಡಿಸುತ್ತದೆ.
- ವಿವಿಯಿಂದ ಮಾನ್ಯತೆ ಪಡೆದಿರುವ ಹಾಗೂ ಸ್ವಾಯತ್ತ ಕಾಲೇಜಿಗಳಲ್ಲಿ ಉತ್ಕೃಷ್ಟ ಸಂಸ್ಥೆಗಳ ಸಮೂಹಗಳಿಗೆ ಉತ್ತೇಜಿಸುವುದು.
- ಹಳೆ ವಿದ್ಯಾರ್ಥಿ ಸಂಘ ಮತ್ತು ವಿವಿಯ ನಡುವೆ ಪ್ರಬಲವಾದ ಸಂಪರ್ಕ ಜಾಲವನ್ನು ರೂಪಿಸುವುದು.
- ಜೀವನಪರ್ಯಂತ ಕಲಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ಉದ್ಯೋಗವಕಾಶಗಳನ್ನು ವೃದ್ಧಿಸುವುದು.
- ಸಾರ್ವಜನಿಕ ಏಜೆನ್ಸಿಗಳು, ಸರ್ಕಾರಿ ಇಲಾಖೆಗಳು, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಹಾಗೂ ಕೈಗಾರಿಕೆಗಳೊಂದಿಗೆ ಸಹಕರಿಸುವುದು.
- ಸಾರ್ವಜನಿಕವಾಗಿ ಚರ್ಚೆ ನಡೆಯುವ ಮತ್ತು ನಾಗರೀಕರು ಮಧ್ಯೆ ಪ್ರವೇಶ ಮಾಡುವಂತಹ ಪೂರಕ ಪರಿಸರವನ್ನು ರೂಪಿಸುವುದು.
- ಸಾಂಸ್ಕೃತಿಕ, ಕ್ರೀಡಾ ಹಾಗೂ ಸಹ ಪಠ್ಯ ಚಟುವಟಿಕೆಗಳಲ್ಲಿ ಅಂತರ್‌ಸಂಸ್ಥೆಗಳ ನಡುವೆ ಸಹಯೋಗ ಮತ್ತು ಸಹಕಾರವನ್ನು ಬೆಳೆಸುವುದು.
- ವಿಶ್ವವಿದ್ಯಾನಿಲಯ–ಕೈಗಾರಿಕೆಗಳ ನಡುವೆ ಸಂಪರ್ಕವೇರ್ಪಡಿಸುವ ಕಾರ್ಯಕ್ರಮಗಳನ್ನು ರೂಪಿಸುವುದು.

- ವಿದ್ವಾಂಸರೊಂದಿಗೆ ಸಮಾಲೋಚಿಸಿ ಹೊಸ ಪೀಳಿಗೆಗೆ ಅನುಗುಣವಾಗಿ ಪಠ್ಯಕ್ರಮವನ್ನು ಉನ್ನತೀಕರಿಸುವುದು.
- ಪೂರಕ ಬೋಧನೆ ಮತ್ತು ಸಂಶೋಧನೆಗೆ ಸ್ಥಳೀಯವಾಗಿ ಲಭ್ಯವಾಗುವ ಮಾನವ ಸಂಪನ್ಮೂಲ ವ್ಯಕ್ತಿಗಳನ್ನು ಗುರ್ತಿಸುವುದು ಮತ್ತು ಅವರ ಸೇವೆ ಪಡೆಯುವುದು.
- ಸಮಾಲೋಚನಾ ಕಾರ್ಯತಂತ್ರಗಳ ಮೂಲಕ ಆದಾಯವನ್ನು ವೃದ್ಧಿಸಲು ಸಂಶೋಧನಾ ಅವಕಾಶಗಳನ್ನು ಹೆಚ್ಚು ಬಳಸಿಕೊಳ್ಳುವುದು.
- ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು.
- ಉದ್ಯೋಗವಕಾಶಗಳನ್ನು ಒದಗಿಸಲು ಸಮಾಲೋಚನಾ ಸೇವೆಗಳನ್ನು ವಿಸ್ತರಿಸುವ ಅವಕಾಶವಿದೆ.
- ಉತ್ಕೃಷ್ಠ ಸಂಶೋಧನೆ ಕೈಗೊಳ್ಳಲು ಮತ್ತು ಬೋಧನಾ ಗುಣಮಟ್ಟ ಬೆಳೆಸಿಕೊಳ್ಳಲು ಸ್ಥಳೀಯವಾಗಿ ಲಭ್ಯವಿರುವ ಅಂತರ್‌ರಾಷ್ಟ್ರೀಯ ಪ್ರಯೋಗಾಲಯ/ಸಂಸ್ಥೆಗಳ ಹಾಗೂ ವಿವಿಯ ಸಿಬ್ಬಂದಿಗಳ ನಡುವೆ ಸಂಪರ್ಕವೇರ್ಪಡಲು ಅವಕಾಶಗಳನ್ನು ಒದಗಿಸಿವುದು.
- ನ್ಯಾಯ–ನೀತಿಯ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸುವುದು.

ಸವಾಲುಗಳು:

- ಕ್ಯಾಂಪಸ್ ಸುತ್ತಲೂ ಖಾಸಗೀ ಹಾಗೂ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಿರುವುದರಿಂದ ಸ್ಪರ್ಧೆ ಹೆಚ್ಚಾಗಿದೆ.
- ರಾಜ್ಯ ಸರ್ಕಾರದಿಂದ ಹಣಕಾಸಿನ ಬೆಂಬಲ ಕಡಿಮೆ ಇದೆ.
- ಉನ್ನತ ಶಿಕ್ಷಣದ ಖಾಸಗೀಕರಣ ಹೆಚ್ಚಾಗುತ್ತಿರುವುದು.
- ದಾಖಲಾತಿ ಹೆಚ್ಚಿಸಲು ಸಮಾಜದ ಅಂಚಿನ ಸಮುದಾಯಗಳಲ್ಲಿ ಅಸರ್ಮಪಕ ಸೌಕರ್ಯಗಳು.
- ವಿಶ್ವವಿದ್ಯಾನಿಲಯವನ್ನು ಮೂರು ಭಾಗಗಳಾಗಿ ವಿಭಜಿಸಿರುವುದರಿಂದ ಉಲ್ಬಣಗೊಂಡ ಸಿಬ್ಬಂದಿ ಹಾಗೂ ಸಂಸ್ಥೆಯ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುವುದು.
- ವೇಗವಾದ ವಿಸ್ತರಣೆ ಮತ್ತು ಬೆಳವಣಿಗೆ ಸಾಧಿಸಲು ದಕ್ಷ ಮತ್ತು ಅರ್ಹ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಿಸುವುದು.
- ಅಗತ್ಯಕ್ಕೆ ತಕ್ಕಂತೆ ಕಡಿಮೆ ಸಮಯದಲ್ಲಿಯೇ ಹೆಚ್ಚು ಗುಣಟ್ಟದ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸುವುದು.
- ರಾಜ್ಯದ ಹಣಕಾಸು ಸಹಾಯದ ಮೇಲೆ ಅವಲಂಬನೆಯಾಗದೆ, ಸ್ವಾವಲಂಬನೆ ಸಾಧಿಸುವುದು.
- ನಾಯಕತ್ವದ ಹಂಚಿಕೆ ಹಾಗೂ ಸಾಮೂಹಿಕ ಜವಾಬ್ದಾರಿಯ ಆಡಳಿತ ವ್ಯವಸ್ಥೆಯ ನಿರ್ಮಾಣ.
- ಸಾಮರ್ಥ್ಯದ ಕೊರತೆಯಿರುವ ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು.

– ಬೆಳವಣಿಗೆಯ ಅಗತ್ಯತೆಗಳನ್ನು ಪೂರೈಸಲು ಕಾಲಕಾಲಕ್ಕೆ ಸಮರ್ಪಕ ಹಣಕಾಸು ಸೌಲಭ್ಯ ಪಡೆಯುವುದು.

– ವಿಶ್ವದರ್ಜೆಯ ಮತ್ತು ಶ್ರೇಷ್ಟ ಗುಣಮಟ್ಟದ ಸಂಶೋಧನೆ ಮತ್ತು ಮುದ್ರಣಗಳನ್ನು ರೂಪಿಸುವುದು.

ಬಿ. ಅಲ್ಪಾವದಿ ಮತ್ತು ದೀರ್ಘಾವದಿ ದೃಷ್ಟಿಕೋನದ ಯೋಜನೆಗಳು– ಕೈಗೊಂಡ ಆಡಳಿತಾತ್ಮಕ ಕ್ರಮಗಳು, ಬೋದಕೇತರ ಸಿಬ್ಬಂದಿಯ ತರಬೇತಿ:

– ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಸಂಸ್ಥೆಗಳ ಜೊತೆ ಸ್ಪರ್ಧೆ ಮಾಡುವಷ್ಟು ಸಮರ್ಥವಾಗಿ ವಿಶ್ವವಿದ್ಯಾನಿಲಯವನ್ನು ರೂಪಿಸುವುದು.

– ಬೋಧನೆ– ಕಲಿಕಾ ಪ್ರಕ್ರಿಯೆಗಳ ಗುಣಮಟ್ಟವನ್ನು ವೃದ್ಧಿಸುವುದು.

– ಅನುಭವಿ ಬೋಧಕ ವೃಂದವನ್ನು ನೇಮಿಸಿಕೊಳ್ಳುವುದು.

– ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಉನ್ನತ ಶಿಕ್ಷಣ ದೊರೆಯುವಂತೆ ಮಾಡುವುದು.

– ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿಯ ಅನುಪಾತವನ್ನು ಹೆಚ್ಚಿಸುವುದು.

– ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಅತ್ಯಾಧುನಿಕ ತಾಂತ್ರಿಕ ಕೌಶಲ್ಯಗಳು ದೊರೆಯುವಂತೆ, ಪಡೆದುಕೊಳ್ಳುವಂತೆ ಮಾಡುವುದು ಮತ್ತು ಉತ್ತೇಜಿಸುವುದು.

– ಮೌಲ್ಯವರ್ಧಿತ ಶಿಕ್ಷಣ ವ್ಯವಸ್ಥೆಯಿಂದ ವಿದ್ಯಾರ್ಥಿಗಳಲ್ಲಿ ಉದ್ಯೋಗಶೀಲತೆಯನ್ನು ಹೆಚ್ಚಿಸುವುದು.

– ದಾಖಲಾತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈಗಿರುವ ಸೌಲಭ್ಯಗಳ ಜೊತೆಗೆ ಹೆಚ್ಚುವರಿ ಭೌತಿಕ, ಶೈಕ್ಷಣಿಕ ಮತ್ತು ಸಂಶೋಧನೆಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು.

– ಆದಾಯ ವರ್ಧನೆಗೆ ಸಮಾಲೋಚನೆ ಅಥವಾ ಉದ್ಯೋಗ ಮಾಹಿತಿಯಂತಹ ಚಟುವಟಿಕೆಗಳನ್ನು ಹೆಚ್ಚಿಸುವುದು.

ಸಿ. ನ್ಯಾಕ್ ಪೀರ್ ಟೀಮ್ ಮತ್ತು ಅಡ್ಮಿನಿಸ್ಟ್ರೇಟಿವ್ ಅಂಡ್ ಅಕಾಡೆಮಿಕ್ ಆಡಿಟ್ (ಎಎಎ) ಸಮಿತಿಗಳ ಶಿಫಾರಸ್ಸುಗಳು ಮತ್ತು ವರದಿಗಳ ಆಧಾರದಲ್ಲಿ ಕೈಗೊಂಡ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳು (ಶಿಫಾರಸ್ಸು ಮತ್ತು ವರದಿಯ ಪ್ರತಿಗಳನ್ನು ಸೇರಿಸಬಹುದು):

ವಿಶ್ವವಿದ್ಯಾನಿಲಯವು ಇನ್ನೂ ನ್ಯಾಕ್ ಮಾನ್ಯತೆ ಪಡೆಯುವ ಪ್ರಕ್ರಿಯೆಗೆ ಒಳಪಡಬೇಕಿದೆ.

ಡಿ. ಪ್ರಧಾನ ಕ್ಯಾಂಪಸ್‌ನಷ್ಟೇ ಗುಣಮಟ್ಟದಲ್ಲಿ ಸ್ನಾತಕೋತ್ತರ ಕೇಂದ್ರ/ಹೆಚ್ಚುವರಿ ಕ್ಯಾಂಪಸ್‌ಗಳನ್ನು ರೂಪಸಿಲು ಮತ್ತು ಅಭಿವೃದ್ಧಿಗೊಳಿಸಲು ಕೈಗೊಂಡ ಆಡಳಿತಾತ್ಮಕ ಕ್ರಮಗಳು:

ವಿಶ್ವವಿದ್ಯಾನಿಲಯವು ಪ್ರತ್ಯೇಕ ಸ್ನಾತಕೋತ್ತರ ಕೇಂದ್ರ/ಹೆಚ್ಚುವರಿ ಕ್ಯಾಂಪಸ್‌ಗಳನ್ನು ಹೊಂದಿಲ್ಲ.

ಇ. ಪರಿಣಾಮ ಬೀರುವ ಮತ್ತು ಸಮಾಜಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಒತ್ತು ನೀಡುವ (ಪಿಹೆಚ್‌ಡಿ ವಿಷಯಗಳು, ಹಣಕಾಸು ನೆರವು ನೀಡುವ ಏಜೆನ್ಸಿಗಳಿಗೆ ಪ್ರಸ್ತಾವವಿಟ್ಟ ಪ್ರಾಜೆಕ್ಟ್‌ಗಳು, ಸಂಶೋಧನಾ ಮುದ್ರಣಗಳು, ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ವಿಸ್ತರಣೆ) ಚಟುವಟಿಕೆಗಳು:

ವಿಶ್ವವಿದ್ಯಾನಿಲಯದ ಕಲಾ ನಿಕಾಯದ ವಿಭಾಗಗಳಲ್ಲಿ ಖಾಯಂ ಸಿಬ್ಬಂದಿ ಇಲ್ಲ ಮತ್ತು ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಸಿಬ್ಬಂದಿಯ ಕೊರತೆಯಿದೆ. ಬೆಂಗಳೂರು ಅದರಲ್ಲಿಯೂ ಮುಖ್ಯವಾಗಿ ಸಮಾಜಿಕತೆಗೆ ಸಂಬಂಧಿಸಿದ ಸಂಶೋಧನಾ ವಿಷಯಗಳನ್ನು ಕೈಗೆತ್ತುಕೊಳ್ಳಲು ಕಲಾ ನಿಖಾಯದ ಸಿಬ್ಬಂದಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೇರೇಪಿಸುವ ಪ್ರಯತ್ನ ಮಾಡಲಾಗುವುದು. ನಾಗರೀಕ ಸಂಸ್ಥೆಗಳಾದ ಬಿಬಿಎಂಪಿ, ಬಿಡಿಎ, ಮೆಟ್ರೋ, ಕೆಎಸ್‌ಅರ್‌ಟಿಸಿ, ಕೆಯುಡಬ್ಲ್ಯೂಎಸ್‌ಎಸ್‌ಬಿ, ಭಾರತೀಯ ರೈಲ್ವೆ, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಇತರೆ ಏಜೆನ್ಸಿಗಳನ್ನು ಆಯಾ ಏಜೆನ್ಸಿಗಳ ಕ್ಷೇತ್ರಗಳಲ್ಲಿ ಸಮಾಜಕ್ಕೆ ಸಂಬಂಧಿಸಿದ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲು ಹಣಕಾಸಿನ ನೆರವು ನೀಡಲು ಮನವಿ ಮಾಡಲಾಗುವುದು. ಬೆಂಗಳೂರು ನಗರ ಕೇಂದ್ರಿತ ಸಮಸ್ಯೆಗಳು ವೈವಿಧ್ಯಮವಾಗಿದ್ದು ಹಲವು ಸ್ನಾತಕೋತ್ತರ ವಿಭಾಗಗಳು ಈ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕಿದೆ. ಹಾಗಾಗಿ, ಐಕ್ಯುಎಸಿ ಮತ್ತು ಪಿಎಂಇಬಿ ಮಂಡಳಿಗಳಿಂದ ಉತ್ತಮ ಸಮನ್ವಯತೆಗೆ ಪ್ರಯತ್ನಗಳು ನಡೆಯಬೇಕಿದೆ. ಪರಿಸರ ಮತ್ತು ಪರಿಸರ ವಿಜ್ಞಾನ(ಎನ್ವಿರಾನ್‌ಮೆಂಟ್ ಅಂಡ್ ಎಕಾಲಜಿ), ನಗರ ಅಧ್ಯಯನ ಮತ್ತು ಯೋಜನೆ(ಅರ್ಬನ್ ಸ್ಟಡೀಸ್ ಅಂಡ್ ಪ್ಲಾನಿಂಗ್), ತಂತ್ರಜ್ಞಾನ(ಟೆಕ್ನಾಲಜಿ), ಕಾನೂನು ಮತ್ತು ಸಾರ್ವಜನಿಕ ನೀತಿ(ಲಾ ಅಂಡ್ ಪಬ್ಲಿಕ್ ಪಾಲಿಸಿ)ಯಂತಹ ಪ್ರಸ್ತಾಪಿತ ಸ್ನಾತಕೋತ್ತರ ವಿಭಾಗಗಳು ಅಂತರ್‌ಶಿಸ್ತೀಯ ಸಂಶೋಧನಾ ಸಾಧ್ಯತೆಗಳಿಗೆ ಉತ್ತಮ ಪ್ರವೇಶಿಕೆ ನೀಡಬಲ್ಲವು. ಈಗಿರುವ ವಾಣಿಜ್ಯ, ರಸಾಯನಶಾಸ್ತ್ರ, ಜೀವ ರಸಾಯನಶಾಸ್ತ್ರ, ನಿರ್ವಹಣೆಯಂತಹ ವಿಭಾಗಗಳು 'ವಿಜ್ಞಾನ ಮತ್ತು ಸಮಾಜ'(ಸೈನ್ಸ್ ಅಂಡ್ ಸೊಸೈಟಿ) ವಿಧಾನವನ್ನು ಪರಿಗಣಿಸಿ, ಸಂಶೋಧನಾ ವಿಷಯಗಳನ್ನು ರೂಪಿಸಬಹುದಾಗಿದೆ.

ಕೆಳಗೆ ನೀಡಿದ ಸಂಶೋಧನಾ ಕ್ಷೇತ್ರಗಳು ಬೆಂಗಳೂರು ನಗರಕ್ಕೆ ಸಾಮಾಜಿಕವಾಗಿ ಪ್ರಸ್ತುತವಾಗಿದ್ದು, ವಿಶ್ವವಿದ್ಯಾನಿಲಯವು ಕೂಡ ಅಂತರ್‌ಶಿಸ್ತೀಯ ಸಂಶೋಧನಾ ಕಾರ್ಯಗಳನ್ನು ಉತ್ತೇಜಿಸುತ್ತದೆ. ಕೆಳಗೆ ನೀಡಿದ ಸಂಶೋಧನಾ ಕ್ಷೇತ್ರಗಳಲ್ಲಿ ಅಂತರ್‌ರಾಷ್ಟ್ರೀಯ ಗುಣಮಟ್ಟದ ಸಂಶೋಧನೆಯನ್ನು ರಾಜ್ಯ ಮತ್ತು ರಾಷ್ಟ್ರದ ನಿರ್ಧಿಷ್ಟ ನಗರವಾಗಿರುವ ಬೆಂಗಳೂರಿನ ನಗರ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳಬೇಕು.

- ಕೆರೆಗಳ ನೀರಿನ ಗುಣಮಟ್ಟ, ಮರುಪೂರಣದ ಕಾಯಕಲ್ಪಗಳ ಅಧ್ಯಯನಗಳು.
- ಕೊಳಚೆ ನೀರಿನ ಶುದ್ಧೀಕರಣ ಮತ್ತು ನಿರ್ವಹಣೆಯ ಅಧ್ಯಯನಗಳು.
- ಬೆಂಗಳೂರು ನಗರದ ವಾಯುಮಾಲಿನ್ಯ.
- ನಗರ ಪ್ರದೇಶದ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳು.
- ಮೂಲೆಗುಂಪಾದ ನಗರ ಜನಸಂಖ್ಯೆಗೆ ಸಂಬಂಧಿಸಿದ ಅಧ್ಯಯನ.
- ಲಿಂಗಾಧಾರಿತ ವಿಷಯಗಳು(ಎಲ್‌ಜಿಬಿಟಿಕ್ಯೂ)
- ವಲಸೆ ಕಾರ್ಮಿಕರು, ಗಾರ್ಮೆಂಟ್ ನೌಕರರು, ಇತ್ಯಾದಿ.
- ಐತಿಹಾಸಿಕ ಅಧ್ಯಯನಗಳು.

– **ಸ್ಥಳೀಯ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಿರುವ ಅವಕಾಶ**: ಬೆಂಗಳೂರು ನಗರವು ಎಲ್ಲಾ ಧರ್ಮಗಳು ಮತ್ತು ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿರುವ ಸ್ಥಳವಾಗಿದೆ. ಬೆಂಗಳೂರು ವಿದೇಶದ, ಭಾರತದ ಮತ್ತು ಕರ್ನಾಟಕದ ವಿವಿಧ ಪ್ರದೇಶಗಳ ಜನರು ಬಯಸಿ ಬರುವ ನಗರವಾಗಿದೆ. ವೈವಿಧ್ಯಮಯ ಸಂಸ್ಕೃತಿ, ಭಾಷೆ, ಸಾಹಿತ್ಯ ಮತ್ತು

ಕಲೆಯಂತಹ ವಿಷಯಗಳು ಸಂಶೋಧನೆ ಮತ್ತು ಅಧ್ಯಯನಕ್ಕೆ ಪೂರಕ ಅವಕಾಶಗಳನ್ನು ತೆರೆದಿಟ್ಟಿವೆ. ಪ್ರಸ್ತಾವನೆಯಲ್ಲಿರುವ ಕಲೆ ಮತ್ತು ಸೌಂದರ್ಯಶಾಸ್ತ್ರ(ಆರ್ಟ್ ಅಂಡ್ ಏಸ್ತಟಿಕ್ಸ್)ದಂತಹ ಸ್ನಾತಕೋತ್ತರ ವಿಭಾಗವು ಅಂತರ್‌ಶಿಸ್ತೀಯ ಸಂಶೋಧನೆಯನ್ನು ಸಮನ್ವಯಗೊಳಿಸಬಲ್ಲದು ಮತ್ತು ವಿವಿಧ ಅಂತರ್‌ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಜೊತೆ ಸಾಂಸ್ಕೃತಿಕ ವಿನಿಮಯದ ಕಾರ್ಯಕ್ರಮಗಳನ್ನು ಆಯೋಜಿಸಲು ವೇದಿಕೆ ರೂಪಿಸಬಲ್ಲದು.

– **ಸಮುದಾಯ ಅಧ್ಯಯನಗಳು**: ಬೆಂಗಳೂರು ವೈವಿಧ್ಯತೆಯ ಸಾಮಾಜಿಕ ಜೀವನವನ್ನು ಹೊಂದಿದೆ. ತಮ್ಮದೇ ಆದ ಸಾಂಸ್ಕೃತಿಕ ಸಂಪ್ರದಾಯಗಳ ವಿವಿಧ ಸಮುದಾಯಗಳು ಮತ್ತು ಅವರ ಅಧ್ಯಯನವು ಅತ್ಯುತ್ತಮ ಸಂಶೋಧನಾ ಕ್ಷೇತ್ರವಾಗಿದೆ. ಉದಾಹರಣೆಗೆ ಈಶಾನ್ಯಾ ಭಾಗದ ಸಮುದಾಯ, ಗುಜರಾತ್, ಮಾರ್ವಾಡಿ, ಸಿಂಧಿ, ಪಂಜಾಬಿ, ಬೆಂಗಲಿ, ನೇಪಾಳಿ, ಕಾಶ್ಮೀರಿ, ಮರಾಠಿ, ತೆಲುಗು, ತಮಿಳು, ಮಲಯಾಳ ಸಮುದಾಯಗಳ ಜೊತೆಗೆ ಅಂತರ್‌ರಾಷ್ಟ್ರೀಯ ಜನಸಂಖ್ಯೆಯೂ ಸಹ ಇದೆ. ಈ ಸಮುದಾಯಿಕ ಅಧ್ಯಯನಗಳು ಜಾಗತಿಕ ಮಟ್ಟದಲ್ಲಿ ಉತ್ತಮ ಸಹಭಾಗಿತ್ವದ ಸಂಶೋಧನೆಗೆ ಅನುವು ಮಾಡಿಕೊಡುತ್ತವೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭೌಗೋಳಿಕ ಅಂಶಗಳು, ಸಾಮಾಜಿಕ ಅವಶ್ಯಕತೆಗಳು ಮತ್ತು ಇತರೆ ಲಾಜಿಸ್ಟಿಕ್ಸ್ ಒಳಗೊಂಡ ಕ್ಷೇತ್ರಗಳು ಹೆಚ್ಚು ಮುನ್ನೆಲೆಗೆ ಬಂದ ಸಂಶೋಧನಾ ಕಾರ್ಯಗಳಾಗಿವೆ.

ಎಫ್. ಸರ್ವೋತ್ತಮ ಉನ್ನತ ಶಿಕ್ಷಣವನ್ನು ಉತ್ತೇಜಿಸುವುದು:

– ಕಾರ್ಯಗಾರ, ವಿಶೇಷ ಉಪನ್ಯಾಸಗಳನ್ನು ಆಯೋಜಿಸುವ ಮೂಲಕ ಯುವ ವಿದ್ಯಾರ್ಥಿಗಳಿಗೆ ಪ್ರೇರೇಪಣೆ ನೀಡುವುದು.

– ವಿವಿಧ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಜಿ. ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗ/ಮಹಿಳೆ/ಅಂಗವಿಕಲರು ಹಾಗೂ ಇತರರ ಕಲ್ಯಾಣ ಕಾರ್ಯಕ್ರಮಗಳು:

ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಂತಹ ಆಯಾ ಇಲಾಖೆಗಳಿಂದ ದೊರೆಯುವ ಹಣಕಾಸು ನೆರವಿನ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುತ್ತದೆ. ಹಿಂದುಳಿದ ವರ್ಗ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳು ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ದೊರೆಯುವ ಸಹಾಯವನ್ನು ಪಡೆಯುವ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಸಿಗುವ ವಿದ್ಯಾರ್ಥಿ ವೇತನದಂತಹ ಈ ಎಲ್ಲಾ ಪ್ರಕ್ರಿಯೆಗಳನ್ನು ನಿರ್ವಹಿಸಲು ವಿಶೇಷ ಅಧಿಕಾರಿಯ ನೇತೃತ್ವದಲ್ಲಿ ಪ್ರತ್ಯೇಕ ಘಟಕವನ್ನು ಆರಂಭಿಸಲಾಗಿದೆ.

ಹೆಚ್. ವಿಶ್ವವಿದ್ಯಾನಿಲಯದಲ್ಲಿ ಸಾಧ್ಯತೆಯಿರುವ ಎಲ್ಲಾ ರೂಪಗಳಲ್ಲಿ ಕನ್ನಡದ ಪ್ರೋತ್ಸಾಹ.

– ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಲಾಗಿದೆ.

– ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಹಾಗೂ ಇತರೆ ಎಲ್ಲಾ ಸಮಿತಿಗಳ ಸಭೆ, ಚರ್ಚೆ, ತೀರ್ಮಾನಗಳ ಪ್ರಕ್ರಿಯೆಗಳನ್ನು ಕನ್ನಡದಲ್ಲಿಯೇ ನಡೆಸಲಾಗುತ್ತದೆ.

– ಸ್ನಾತಕ ಪದವಿ ಕೋರ್ಸ್‌ಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸಬೇಕೆಂದು ಅಕಾಡೆಮಿಕ್ ಕೌನ್ಸಿಲ್ ತೀರ್ಮಾನಿಸಿದೆ.

– ಕಲಾ ನಿಖಾಯದ ಬಹುತೇಕ ವಿದ್ಯಾರ್ಥಿಗಳು ಪರೀಕ್ಷೆಗಳನ್ನ ಕನ್ನಡ ಮಾಧ್ಯಮದಲ್ಲಿ ಬರೆಯುವುದರಿಂದ ಅವರಿಗೆ ಕನ್ನಡದಲ್ಲಿಯೇ ಬೋಧನೆ ಮಾಡಲು ಸೂಚಿಸಲಾಗಿದೆ.

ಐ. ಸಾರ್ವಜನಿಕ ಖಾಸಗೀ ಸಹಭಾಗಿತ್ವ (ಪಿಪಿಪಿ), ಹಳೆ ವಿದ್ಯಾರ್ಥಿ ಸಂಘ ಇತರೆಗಳ ಮೂಲಕ ಹಣಕಾಸು ಕ್ರೂಢೀಕರಣಕ್ಕೆ ಕೈಗೊಂಡ ಕ್ರಮಗಳು:

ಹಳೆ ವಿದ್ಯಾರ್ಥಿ ಸಂಘವನ್ನು ರಚಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಾರ್ವಜನಿಕ ಖಾಸಗೀ ಸಹಭಾಗಿತ್ವ (ಪಿಪಿಪಿ)ದ ಮೂಲಕ ಹಣಕಾಸು ಕ್ರೂಢೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಜೆ. ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು:

– ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗಿದೆ.

– ವಿಶ್ವವಿದ್ಯಾನಿಲಯವು ಜಾಗತಿಕ ಭಾಷೆಗಳ ಕೇಂದ್ರದ ಅಡಿಯಲ್ಲಿ ಸಂಜೆ ಸರ್ಟಿಫಿಕೇಟ್/ಡಿಪ್ಲೊಮಾ/ಅಡ್ವಾನ್ಸ್‌ಡ್ ಡಿಪ್ಲೋಮೊ ಕೋರ್ಸ್‌ಗಳನ್ನು ಆರಂಭಿಸಿದೆ.

– ಕಲಾ ನಿಖಾಯದ ವಿಭಾಗಗಳನ್ನು ನಡೆಸಲು ಹಳೆಯ ಭೌತಶಾಸ್ತ್ರ ಬ್ಲಾಕ್‌ಅನ್ನು ನವೀಕರಿಸಲಾಗಿದೆ.

– ಇದೇ ರೀತಿಯಲ್ಲಿ ಹೊಸ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸಲು ದೂರ ಶಿಕ್ಷಣದ ಹಳೆಯ ಕಟ್ಟಡವನ್ನು ಹಾಗೂ ನೈಸರ್ಗಿಕ ವಿಜ್ಞಾನಗಳ ಬ್ಲಾಕ್‌ನ ಒಂದು ಭಾಗವನ್ನು ದುರಸ್ಥಿಗೊಳಿಸಲಾಗಿದೆ.

ಕೆ. ಮುಂದಿನ ಸ್ನಾತಕ ಪದವಿ/ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಪ್ರಾರಂಭವಾಗುವುದಕ್ಕೂ ಮೊದಲೇ ಪರೀಕ್ಷಾ ಫಲಿತಾಂಶವನ್ನು ಪ್ರಕಟಣೆಗೆ ಸಾಧ್ಯವಾಗುವ ನೂತನ ಕ್ರಮಗಳು

ಕಡಿಮೆ ಸಂಖ್ಯೆಯ ಸಿಬ್ಬಂದಿ ಹೊಂದಿರುವ ಪರೀಕ್ಷಾಂಗ ವಿಭಾಗವು ಲಭ್ಯವಿರುವ ಆಧುನಿಕ ತಂತ್ರಜ್ಞಾನ ಮತ್ತು ಉತ್ತಮ ಪ್ರಯೋಗಗಳನ್ನು ಅಳವಡಿಸಿಕೊಳ್ಳುವ ಮೂಲಕ ನಿರತಂತರವಾಗಿ ಪ್ರಗತಿಯನ್ನು ಸಾಧಿಸುತ್ತಿದೆ. ಈ ಕೆಳಗಿನ ವಿನೂತನ ಕ್ರಮಗಳನ್ನು ಅಳವಡಿಸಿಕೊಂಡಿದೆ.

– ವಿದ್ಯಾರ್ಥಿಗಳ ಎಲ್ಲಾ ಮಾಹಿತಿಯನ್ನು ಆನ್‌ಲೈನ್ ಅಡ್ಮಿಷನ್ ಡಾಟಾದಿಂದ ನೇರವಾಗಿ ತೆಗೆದುಕೊಂಡಿದೆ.

– ಪರೀಕ್ಷಾ ನೋಂದಣಿ ಹಾಗೂ ಆಂತರಿಕ ಅಂಕ(ಇಂಟರ್ನಲ್ ಮಾರ್ಕ್ಸ್)ಗಳ ಸೇರ್ಪಡೆಯು ಆನಲೈನ್‌ನಲ್ಲಿಯೇ ಮಾಡಲಾಗುತ್ತದೆ.

– ಪರೀಕ್ಷಾ ಪೂರ್ವ ಮತ್ತು ನಂತರದ ಎಲ್ಲಾ ಕಾರ್ಯ ಚಟುವಟಿಕೆಗಳು ಸ್ವಯಂಚಾಲಿತವಾಗಿ ನಡೆಯುತ್ತವೆ.

– ಪರೀಕ್ಷಾ ಪ್ರವೇಶ ಪತ್ರಗಳು ಆನ್‌ಲೈನ್ ಮೂಲಕವೇ ನೇರವಾಗಿ ವಿತರಿಸಲಾಗುತ್ತದೆ.

– ಎಲ್ಲಾ ಕೋರ್ಸ್‌ಗಳ ಪರೀಕ್ಷಾ ಉತ್ತರ ಪತ್ರಿಕೆಗಳ ಕೋಡಿಂಗ್‌ನಲ್ಲಿ ಸ್ವಯಂಚಾಲಿತ ವ್ಯವಸ್ಥೆ ಇರುವುದರಿಂದ ತಪ್ಪಾಗುವುದನ್ನು ಮತ್ತು ಸಮಯವನ್ನು ಉಳಿತಾಯ ಮಾಡಲಾಗುತ್ತಿದೆ.

– ಮೌಲ್ಯಮಾಪಕ/ಪರೀಕ್ಷಕರು ನೀಡುವ ಅಂಕಗಳಿಂದ ದೊರೆಯುವ ಫಲಿತಾಂಶದಲ್ಲಿ ತಪ್ಪಾಗುವುದನ್ನು ಬಹುತೇಕ ನಿಯಂತ್ರಿಸಲಾಗಿದೆ.

– ಮೊದಲೇ ನಿಗದಿಯಾದ ವಾರ್ಷಿಕ ಚಟುವಟಿಕೆಗಳ ಆಧಾರದಲ್ಲಿಯೇ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಮತ್ತು ಕೊನೆಯ ಪರೀಕ್ಷೆ ಮುಗಿದ ದಿನಾಂಕದಿಂದ ೩೦ ದಿನಗಳೊಳಗೆ ಪಲಿತಾಂಶವನ್ನು ಸಹ ಪ್ರಕಟಿಸಲಾಗುತ್ತದೆ.

ಎಲ್. ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ (ಕೆಎಸ್‌ಯು ಕಾಯಿದೆ ೨೦೦೦ ರ ಸೆಕ್ಷನ್ ೩೦ ರ ಪ್ರಕಾರ).

ವಿಶ್ವವಿದ್ಯಾನಿಲಯವು ಅಕಾಡೆಮಿಕ್ ಕೌನ್ಸಿಲ್‌ಗೆ ವಿದ್ಯಾರ್ಥಿಗಳನ್ನು ನಾಮನಿರ್ದೇಶನ ಮಾಡುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ವಿದ್ಯಾರ್ಥಿಗಳನ್ನು ನಾಮ ನಿರ್ದೇಶನ ಮಾಡಲು ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸಲಾಗುತ್ತಿದೆ.

೩. ಕಣ್ಣೋಟ ಮತ್ತು ಧ್ಯೇಯ

ಕಣ್ಣೋಟ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಬೆಂಗಳೂರು ನಗರದ ಸಹನಶೀಲ ಹೃದಯ, ಸ್ಪಂದನಾ ಮನಸ್ಸು ಮತ್ತು ಪರಿವರ್ತನಾ ಶಕ್ತಿಯಾಗುವ ಸ್ಥಳೀಯ ಹಾಗೂ ಜಾಗತಿಕ ಮಟ್ಟದಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸುವ, ತನ್ನ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಜನತೆಯ ಸೃಜನಶೀಲತೆ, ಶಕ್ತಿ ಮತ್ತು ಸಂಪನ್ಮೂಲಗಳ ಸದ್ಬಳಕೆಯ ಕಣ್ಣೋಟವನ್ನು ಹೊಂದಿದೆ.

ಧ್ಯೇಯ

ಬೆಂಗಳೂರು ಕೇಂದ್ರವಿಶ್ವವಿದ್ಯಾಲಯವು ಜ್ಞಾನ ಸೃಷ್ಟಿ, ಪ್ರಸರಣ ಮತ್ತು ಅನ್ವಯದ ರೂಪುರೇಷೆಯನ್ನು ಹೊಂದಿದ್ದು ಆ ನಿಟ್ಟಿನಲ್ಲಿ ಪೂರಕವಾದ ಸಾಮಾಜಿಕ ಪರಿಸರವನ್ನು ಬೆಳೆಸುವುದು ಇದರ ಧ್ಯೇಯವಾಗಿದೆ. ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯವಾಗಿ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯದ ಗುರಿ–

೧. ಪ್ರವೇಶ, ಸುಲಭವಾಗಿ ದೊರೆಯುವ, ಸಮತೆ ಮತ್ತು ಒಳಗೊಳ್ಳುವಿಕೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವ
ಮೂಲಕ ಎಲ್ಲರಿಗೂ ಜ್ಞಾನದ ಹೆಬ್ಬಾಗಿಲಾಗುವ ಗುರಿ.
೨. ಜ್ಞಾನ ಮತ್ತು ವಿಚಾರಗಳ ಮುಕ್ತ ವಿನಿಮಯವನ್ನು ಸುಗಮಗೊಳಿಸುವ ಮೂಲಕ ಶಿಕ್ಷಣ ಸಂಸ್ಥೆಗಳ, ಸರ್ಕಾರ, ಉದ್ಯಮ, ಸಮುದಾಯ ಮತ್ತು ಸಮಾಜದ ನಡುವೆ ಸ್ಪಂದನಶೀಲ ಸಂಸ್ಕೃತಿಯನ್ನು ಬೆಳೆಸುವುದು.
೩. ನಗರದ ಮತ್ತು ಸ್ಥಳೀಯ ಮಾನವ ಬಂಡವಾಳ ಮತ್ತು ಸಂಪನ್ಮೂಲಗಳ ಮೇಲೆ ಪ್ರಭಾವ ಬೀರುವ ಮೂಲಕ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಂಪರೆಯನ್ನು ಉತ್ಕೃಷ್ಟಗೊಳಿಸುವುದು.
೪. ಒಂದು ಪ್ರಮುಖ ಜಾಗತಿಕ ಮಹಾನಗರವಾಗಿ ಬೆಂಗಳೂರಿನ ಖ್ಯಾತಿ, ಬೆಳವಣಿಗೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದು.
೫. ಸ್ಥಳೀಯ ಮತ್ತು ಜಾಗತಿಕ ಸಂದರ್ಭಗಳಲ್ಲಿ ಪ್ರಸ್ತುತ ಸಮಸ್ಯೆಗಳೊಂದಿಗೆ ಮುಖಾಮುಖಿಯಾಗುವುದರ ಮೂಲಕ ಬೋಧನೆ, ಸಂಶೋಧನೆ ಮತ್ತು ಸೇವೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದು.
೬. ವೈಜ್ಞಾನಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಭವಿಷ್ಯದ ನಾಯಕರುಗಳನ್ನು ರೂಪಿಸುವುದು.

೭. ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವ, ಶ್ರಮ ಮತ್ತು ಸಾಮಾಜಿಕ ಆತ್ಮಸಾಕ್ಷಿಯ ಬಗ್ಗೆ ಗೌರವವನ್ನು ಬೆಳೆಸುವುದು.

೮. ತನ್ನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳಲ್ಲಿ ವಿನೂತನ ಮತ್ತು ಉತ್ತಮ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮತ್ತು ತನ್ನ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟವಾದ ಸೇವೆಯಿಂದ ವಿಶಿಷ್ಟ ಸಾರ್ವಜನಿಕ ವಿಶ್ವವಿದ್ಯಾಲಯವಾಗಿ ಹೊರಹೊಮ್ಮುವುದು.

೪. ಸಂಘಟನೆ ಮತ್ತು ಆಡಳಿತ:

ಎ. ವಿಶ್ವವಿದ್ಯಾನಿಲಯದ ಕ್ಯಾಂಪಸ್ ಒಳಗಿನ ಮತ್ತು ಹೊರಗಿನ ಆಡಳಿತಾತ್ಮಕ ವಿಧಾನಗಳು

- ದಿನನಿತ್ಯದ ಆಡಳಿತ ಮತ್ತು ಉಸ್ತುವಾರಿಯಲ್ಲಿ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.
- ವಿಭಾಗಗಳ ಮುಖ್ಯಸ್ಥರುಗಳು, ಅಧಿಕಾರಿಗಳು ಮತ್ತು ಪ್ರಾಂಶುಪಾಲರೊಂದಿಗೆ ನಿರಂತರ ಸಭೆಗಳು.
- ಅಗತ್ಯವಿದ್ದಾಗೆಲ್ಲಾ ವಿಭಾಗಗಳು ಮತ್ತು ಕಾಲೇಜುಗಳಿಗೆ ಭೇಟಿ ನೀಡುವುದು.
- ವಿಭಾಗಗಳ ಸುಗಮ ಕಾರ್ಯನಿರ್ವಹಣೆಗೆ ಆಡಳಿತ ವ್ಯವಸ್ಥೆಯೊಂದಿಗೆ ಅಂತರ್‌ಸಂಪರ್ಕದ ಕೊಂಡಿಯಾಗಿ ಕಾರ್ಯನಿರ್ವಹಿಸಲು ವಿಭಾಗಗಳ ಮುಖ್ಯಸ್ಥರುಗಳಿಗೆ ಜವಾಬ್ದಾರಿಗಳನ್ನು ವಹಿಸುವುದು.
- ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ನಂತಹ ಉನ್ನತ ಆಡಳಿತ ಮಂಡಳಿಗಳ ಸಭೆಗಳಲ್ಲಿ ಚರ್ಚೆಯಾದ, ತೆಗೆದುಕೊಂಡ ತೀರ್ಮಾನಗಳ ಅನುಷ್ಠಾನದ ವರದಿ ಮತ್ತು ಮೇಲ್ವಿಚಾರಣೆಗೊಳಪಟ್ಟ ಚಟುವಟಿಕೆಗಳ ಬಗ್ಗೆ ಗಮನ ಹರಿಸುವುದು.

ಬಿ. ಖಾಲಿಯಿರುವ ಆಡಳಿತಾತ್ಮಕ/ತಾಂತ್ರಿಕ/ಸಹಾಯಕ ಸಿಬ್ಬಂದಿ ಹುದ್ದೆಗಳ ಭರ್ತಿಗೆ ಕೈಗೊಂಡ ಕ್ರಮಗಳು:

- ವಿಶ್ವವಿದ್ಯಾನಿಲಯದ ೨೩ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರತಿ ವಿಭಾಗಕ್ಕೂ ಒಬ್ಬ ಪ್ರಾಧ್ಯಾಪಕರು, ಇಬ್ಬರು ಸಹ ಪ್ರಾಧ್ಯಾಪಕರು ಮತ್ತು ನಾಲ್ಕು ಸಹಾಯಕ ಪ್ರಾಧ್ಯಾಪಕರುಗಳಂತೆ ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಕರ್ನಾಟಕ ಸರ್ಕಾರವು ಮಂಜೂರು ಮಾಡಿದೆ. ಪ್ರಸ್ತುತವಿರುವ ೫೯ ಬೋಧಕ ಹುದ್ದೆಗಳ ಭರ್ತಿಗೂ ಸಹ ಸರ್ಕಾರವು ಅನುಮತಿ ನೀಡಿದೆ.
- ಮೀಸಲಾತಿ ಮತ್ತು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಅನುಮೋದನೆ ಪಡೆಯಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಸರಕಾರ ವಿಧಿಸಿದ ನಿರ್ಬಂಧವನ್ನು ತೆಗೆದು ಹಾಕಿದ ನಂತರ ಉನ್ನತ ಶಿಕ್ಷಣ ಇಲಾಖೆಯ ಆದೇಶಗಳ ಪ್ರಕಾರ ಎಲ್ಲಾ ವಿವರಗಳನ್ನು ಕೆಇಎ ಗೆ ಕಳುಹಿಸಲಾಗುತ್ತದೆ.
- ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ದೃಷ್ಟಿಕೋನದಿಂದ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯಲು ಅಗತ್ಯತೆಗಳ ಆಧಾರದಲ್ಲಿ ಅತಿಥಿ ಉಪನ್ಯಾಸಕರು ಮತ್ತು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆ.

ಸಿ. ಕ್ಯಾಂಪಸ್ ಭದ್ರತೆ (ಮುಖ್ಯ ಮತ್ತು ಇತರ ಕ್ಯಾಂಪಸ್‌ಗಳು)

- ಕ್ಯಾಂಪಸ್‌ಗಳ ಭದ್ರತಾ ನಿರ್ವಹಣೆಗಾಗಿ ಗೃಹ ರಕ್ಷಕರನ್ನು ನಿಯೋಜಿಸುವುದರ ಮೂಲಕ ೨೪*೭ ಭದ್ರತಾ ಸೇವೆಯನ್ನು ಒದಗಿಸಲಾಗಿದೆ.

ಡಿ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕಲ್ಯಾಣಕ್ಕೆ ಕೈಗೊಂಡ ಕ್ರಮಗಳು:

- ಅಧ್ಯಾಪಕರು ವಿವಿಧ ಕಾರ್ಯಗಾರಗಳು, ಸೆಮಿನಾರುಗಳು, ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳಲ್ಲಿ ಹಾಜರಾಗಲು ಮತ್ತು ಭಾಗವಹಿಸಲು ವಿಶ್ವವಿದ್ಯಾನಿಲಯ ಪ್ರೋತ್ಸಾಹಿಸುತ್ತದೆ. ವಿವಿಧ ಧನಸಹಾಯ ಏಜೆನ್ಸಿಗಳು ನೀಡುವ ಅನುದಾನಿತ ಸಂಶೋಧನಾ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯವು ನಿರಂತರವಾಗಿ ಪ್ರೋತ್ಸಾಹಿಸುತ್ತದೆ ಮತ್ತು ಪ್ರೇರೇಪಿಸುತ್ತದೆ ಮತ್ತು ಆರ್ಥಿಕ ನೆರವು ನೀಡಲು ವಾರ್ಷಿಕ ಆಯವ್ಯಯದಲ್ಲಿ ಆದ್ಯತೆ ನೀಡಲಾಗಿದೆ. ಅಗತ್ಯ ಹಣಕಾಸಿನ ನೆರವು ನೀಡುವುದರ ಮೂಲಕ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಸಂಶೋಧನೆಗಳನ್ನು ನಡೆಸಲು ಉತ್ತೇಜಿಸಲಾಗುವುದು. ವಿದೇಶಗಳಲ್ಲಿ ಡಾಕ್ಟರೇಟ್ ನಂತರದ ಸಂಶೋಧನೆ (ಪಿಡಿಎಫ್) ಕೈಗೊಳ್ಳಲು ಫೆಲೋಶಿಫ್ ಮೂಲಕ ಒಂದು ವರ್ಷದವರೆಗೆ ಅಧ್ಯಯನಾ ರಜೆ ಮಂಜೂರು ಮಾಡಲಾಗುವುದು. ಅರ್ಹ ಬೋಧಕೇತರ ಸಿಬ್ಬಂದಿಯನ್ನು ಮುಂದಿನ ಆಡಳಿತ ಸ್ಥಾನಗಳಿಗೆ ಬಡ್ತಿ ನೀಡುವುದರ ಮೂಲಕ ಪ್ರೋತ್ಸಾಹಿಸಲಾಗುವುದು. ಕಚೇರಿ ಕಾರ್ಯವಿಧಾನ ಮತ್ತು ನೀತಿ–ನಿಯಮಗಳ ಅರಿವು, ಕೆಎಸ್‌ಯು ಕಾಯ್ದೆ, ಶಾಸನಗಳು, ಕಟ್ಟಳೆಗಳು, ಪರೀಕ್ಷಾ ಕೈಪಿಡಿ ಇತ್ಯಾದಿಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಯೋಜಿಸಲಾಗಿದೆ.

- ಕ್ಯಾಂಪಸ್‌ನ ಹಸಿರುಮಯವಾದ ಪರಿಸರದಲ್ಲಿ ಬೆಳಗಿನ ವಾಯುವಿಹಾರಕ್ಕೆ ಅವಕಾಶವಿದ್ದು, ಆಟದ ಮೈದಾನ, ಚಿಕ್ಕ ಕ್ಯಾಂಟೀನ್ ಸೌಲಭ್ಯವಿದೆ. ವಿಶ್ವವಿದ್ಯಾನಿಲಯವು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಿದೆ.

- ವೇಗದ ಮತ್ತು ಉತ್ತಮ ಇಂಟರ್ನೆಟ್ ಸೌಲಭ್ಯ ಒದಗಿಸುವ ಯೋಜನೆಯನ್ನು ಕೈಗೆತ್ತುಕೊಂಡಿದೆ. ಪ್ರಸ್ತುತ ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಬಳಕೆಗಾಗಿ ಪ್ರತ್ಯೇಕ ಇಂಟರ್ನೆಟ್ ಸೌಲಭ್ಯವನ್ನು ಪ್ರತಿ ವಿಭಾಗಕ್ಕೂ ಒದಗಿಸಲಾಗಿದೆ.

೫. ೨೦೧೦ ರ ಯುಜಿಸಿ ರೆಗುಲೇಶನ್‌ಗಳ ಪ್ರಕಾರ ಐಕ್ಯೂಎಸಿಯ ರಚನೆ ಮತ್ತು ಅದರ ಕಾರ್ಯನಿರ್ವಹಣೆ:

ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆ, ಮೌಲ್ಯಮಾಪನ, ಮಾಪನ, ಮಾನ್ಯತೆ ಮತ್ತು ಗುಣಮಟ್ಟದ ಉನ್ನತೀಕರಣಕ್ಕಾಗಿ ಸಮನ್ವಯಕಾರ (ಕೋ–ಆರ್ಡಿನೇಟರ್) ಅನ್ನು ನೇಮಿಸುವ ಮತ್ತು ಐಕ್ಯೂಎಸಿ ಯನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ. ನಂತರ ಐಕ್ಯೂಎಸಿಯು ಆಂತರಿಕೀಕರಣ ಮತ್ತು ಗುಣಮಟ್ಟದ ವರ್ಧನೆಯ ಸಾಂಸ್ಥೀಕರಣಕ್ಕಾಗಿ ಶ್ರಮಿಸಬೇಕು. ಇದು ವಿಶ್ವವಿದ್ಯಾಲಯಕ್ಕೆ ಅನುವು ಮಾಡಿಕೊಡುವ ಮತ್ತು ಸ್ವಯಂಪ್ರೇರಿತವಾಗಿ ಭಾಗವಹಿಸುವ ವ್ಯವಸ್ಥೆಯಾಗಿ ಕೆಲಸ ಮಾಡಬೇಕು.

ಐಕ್ಯೂಎಸಿ ಯ ಉದ್ದೇಶಗಳು ಈ ಕೆಳಗಿನಂತಿವೆ:

- ಸಕಾಲಿಕ, ಸಮರ್ಥ ಮತ್ತು ಪ್ರಗತಿಪರ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಹಣಕಾಸಿನ ಕಾರ್ಯಗಳನ್ನು ಖಚಿತಪಡಿಸುವುದು.

- ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳ ಪ್ರಸ್ತುತತೆ ಮತ್ತು ಗುಣಮಟ್ಟದ ಮೇಲ್ವಿಚಾರಣೆ.

- ಶೈಕ್ಷಣಿಕ ಕೋರ್ಸ್‌ಗಳು ಸಮಾಜದ ವಿವಿಧ ಸಮುದಾಯದವರಿಗೆ ಸಮಾನ ಪ್ರವೇಶ ಮತ್ತು ಲಭ್ಯವಾಗುವುದು.

- ಬೋಧನೆ ಮತ್ತು ಕಲಿಕೆಯ ಆಧುನಿಕ ವಿಧಾನಗಳನ್ನು ಉತ್ತಮಗೊಳಿಸುವುದು ಮತ್ತು ಏಕೀಕೃತಗೊಳಿಸುವುದು.
- ಮೌಲ್ಯಮಾಪನ ವಿಧಾನಗಳ ವಿಶ್ವಾಸಾರ್ಹತೆ.
- ಬೆಂಬಲಿತ ರಚನೆಗಳು ಮತ್ತು ಸೇವೆಗಳ ಸಮರ್ಪಕತೆ, ನಿರ್ವಹಣೆ ಮತ್ತು ಕಾರ್ಯವಿಧಾನವನ್ನು ಖಚಿತಪಡಿಸುವುದು.
- ಸಂಸ್ಥೆಗಳ ವಿವಿಧ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ ಮಾನದಂಡಗಳು/ನಿಯತಾಂಕಗಳ ಅಭಿವೃದ್ಧಿ ಮತ್ತು ಅನ್ವಯ.
- ಉನ್ನತ ಶಿಕ್ಷಣದ ಗುಣಮಟ್ಟದ ವಿವಿಧ ಮಾನದಂಡಗಳ ಮಾಹಿತಿ ಪ್ರಸರಣ.
- ಗುಣಮಟ್ಟಕ್ಕೆ ಸಂಬಂದಿಸಿದ ವಿಷಯಗಳ ಕುರಿತು ಕಾರ್ಯಾಗಾರಗಳು ಮತ್ತು ವಿಚಾರಗೋಷ್ಠಿಗಳನ್ನು ಆಯೋಜಿಸುವುದು.
- ಗುಣಮಟ್ಟ ಸುಧಾರಣೆಗೆ ನೆರವಾಗುವ ವಿವಿಧ ಕಾರ್ಯಕ್ರಮಗಳನ್ನು/ ಚಟುವಟಿಕೆಗಳನ್ನು ದಾಖಲಿಸುವುದು.
- ಗುಣಮಟ್ಟಕ್ಕೆ ಸಂಬಂಧಿತ ಚಟುವಟಿಕೆಗಳಿಗಾಗಿ ಸಂಸ್ಥೆಯು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದು.
- ಗುಣಮಟ್ಟದ ನಿಯತಾಂಕಗಳ ಆಧಾರದ ಮೇಲೆ ವಾರ್ಷಿಕ ಗುಣಮಟ್ಟ ಖಾತರಿ ವರದಿ (ಎಕ್ಯೂಎಆರ್) ರಚಿಸಿ ನ್ಯಾಕ್‌ಗೆ ಸಲ್ಲಿಸುವುದು.
- ಎಂಐಎಸ್ ಮೂಲಕ ಸಾಂಸ್ಥಿಕ ಡೇಟಾಬೇಸ್‌ನ ಅಭಿವೃದ್ಧಿ ಮತ್ತು ನಿರ್ವಹಣೆ.
- ಸಂಸ್ಥೆಯಲ್ಲಿ ಗುಣಾತ್ಮಕ ಸಂಸ್ಕೃತಿಯ ಅಭಿವೃದ್ಧಿ.
- ವಿವಿಧ ಶ್ರೇಯಾಂಕಗಳಿಗೆ ಅರ್ಜಿಸಲ್ಲಿಸಲು ವಿಶ್ವವಿದ್ಯಾನಿಲಯವನ್ನು ಅಣಿಗೊಳಿಸುವುದು.

ಐಕ್ಯೂಎಸಿಯು ನಿಯಮಾನುಸಾರ ಉಪಕುಲಪತಿ, ಡೀನರು ಮತ್ತು ಶಿಕ್ಷಣ ತಜ್ಞರುಗಳ ಅಧ್ಯಕ್ಷತೆಯಲ್ಲಿರುವ ಸಲಹಾ ಸಮಿತಿಯಿಂದ ಮಾರ್ಗದರ್ಶನ ಪಡೆಯುತ್ತದೆ.

೬. ೨೦೦೦ರ ಕೆಎಸ್‌ಯು ಕಾಯ್ದೆ ಪ್ರಕಾರ ಪ್ರೋಗ್ರಾಮ್ ಮಾನಿಟರಿಂಗ್ ಅಂಡ್ ಇವ್ಯಾಲ್ಯೂಯೇಷನ್ ಬೋರ್ಡ್ (ಪಿಎಂಈಬಿ)ನ ಸಂಘಟನೆ ಮತ್ತು ಅದರ ಕಾರ್ಯ ನಿರ್ವಹಣೆ

ವಿಶ್ವವಿದ್ಯಾಲಯವು ನಿರ್ದೇಶಕರನ್ನು ನೇಮಿಸುವ ಮತ್ತು ಯೋಜನೆಯನ್ನು ರೂಪಿಸುವ ಪ್ರಕ್ರಿಯೆಯಲ್ಲಿದೆ. ಮಾನಿಟರಿಂಗ್ ಇವ್ಯಾಲ್ಯೂಯೇಷನ್ ಬೋರ್ಡ್ ಅನ್ನು ಮುಂದಿನ ದಿನಗಳಲ್ಲಿ ರಚಿಸಲಾಗುವುದು.

ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

– ವಿಶ್ವವಿದ್ಯಾಲಯದ ಆರಂಭದಿಂದಲೂ ಅದರ ಆಡಳಿತಾತ್ಮಕ, ಶೈಕ್ಷಣಿಕ, ಅಭಿವೃದ್ಧಿ, ಹಣಕಾಸು ಮತ್ತು ಪರೀಕ್ಷಾ ಶಾಖೆಗಳಿಗೆ ಸಂಬಂಧಿಸಿದಂತೆ ಒಂದು ಸಮರ್ಥ ಡೇಟಾಬೇಸ್‌ನ ಅಭಿವೃದ್ಧಿ ಮತ್ತು ನಿರ್ವಹಣೆ.

- ಕೋರ್ಸ್‌ಗಳ ವಿವರಗಳ ಸಂಗ್ರಹ ಮತ್ತು ಸ್ಥಾಪನೆ, ಪಠ್ಯಕ್ರಮ, ಸ್ಥಾಪನೆಯ ವೇಳಾಪಟ್ಟಿ, ಶಿಕ್ಷಕರ ಸ್ವವಿವರ ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕಗಳ ಬೆಳವಣಿಗೆ ಮತ್ತು ಸಾಮರ್ಥ್ಯ. ದೇಶದ ಒಳಗೆ ಮತ್ತು ಹೊರಗೆ ಧನಸಹಾಯ ಸಂಸ್ಥೆಗಳಿಂದ ಹಣಕಾಸಿನ ನೆರವಿನ ಕುರಿತು ನಿರಂತರವಾಗಿ ಮಾಹಿತಿ ಮತ್ತು ಅಭಿಪ್ರಾಯವನ್ನು ಸಂಗ್ರಹಿಸುವುದು.
- ಬೇರೆ ಬೇರೆ ಏಜೆನ್ಸಿಗಳಲ್ಲಿ ಲಭ್ಯವಿರುವ ಆರ್ಥಿಕ ನೆರವಿನ ಕುರಿತ ಮಾಹಿತಿಯನ್ನು ಪ್ರಸಾರ ಮಾಡುವುದು, ಧನಸಹಾಯ ನೀಡುವ ವಿವಿಧ ಏಜೆನ್ಸಿಗಳಿಗೆ ಸಲ್ಲಿಸುವ ಯೋಜನಾ ಪ್ರಸ್ತಾವನೆಯ ತಯಾರಿಕೆಯಲ್ಲಿ ಬೋಧನಾ ಸಿಬ್ಬಂದಿಗೆ ಮಾರ್ಗದರ್ಶನ ಮತ್ತು ಸಹಾಯವನ್ನು ನೀಡುವುದು.
- ಯೋಜನೆಗಳ ಸುಗಮ ಆಯೋಜನೆ ಮತ್ತು ಪೂರ್ಣಗೊಳ್ಳುವಿಕೆಯಲ್ಲಿ ಯುಜಿಸಿ, ಡಿಎಸ್‌ಟಿ, ಡಿಓಡಿ, ಡಿಎಇ, ಮತ್ತು ಇತರ ಪ್ರಯೋಜಿತ ಸಂಶೋಧನಾ ಯೋಜನೆಗಳ ಪ್ರಮುಖ ತನಿಖಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು.
- ತಮ್ಮ ದಿನನಿತ್ಯದ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಡೇಟಾಬೇಸ್ ಅನ್ನು ದಾಖಲಿಸಲು ಮತ್ತು ನಿರ್ವಹಿಸಲು ಪ್ರಸ್ತುತ ಇರುವ ಸಿಬ್ಬಂದಿಗೆ ಸೂಕ್ತ ತರಬೇತಿ ಘಟಕಗಳನ್ನು ಆಯೋಜಿಸುವುದು.
- ಅಧ್ಯಾಪಕರು ಮತ್ತು ವಿದ್ವಾಂಸರ ನಡುವೆ ಪರಸ್ಪರ ಸಂವಹನಕ್ಕಾಗಿ ವಿಜ್ಞಾನಿಗಳು/ಹೆಸರಾಂತ ಶಿಕ್ಷಣ ತಜ್ಞರು ಮತ್ತು ವೈಜ್ಞಾನಿಕ ಸಂಸ್ಥೆಗಳನ್ನು ಒಳಗೊಂಡ ನಿರ್ದೇಶನ ಮಂಡಳಿಯನ್ನು ರಚಿಸುವುದು.
- ಸಹಕಾರ ಮತ್ತು ಅಂತರ್ಶಿಸ್ತೀಯ ಶೈಕ್ಷಣಿಕ ಪ್ರಯತ್ನಗಳನ್ನು ಉತ್ತೇಜಿಸಲು ಆರ್ಥಿಕ ನೆರವು ನೀಡುವ ಏಜೆನ್ಸಿಗಳು/ ವಿಭಾಗಗಳು/ ಶಿಕ್ಷಕರು/ ವಿದ್ವಾಂಸರೊಂದಿಗೆ ಸಂಪರ್ಕ ಸಾಧಿಸುವುದು.
- ಕಾಲಕಾಲಕ್ಕೆ ಕುಲಪತಿಯವರಿಗೆ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ಸಮಾಲೋಚನಾ ಸಭೆಗಳನ್ನು ಯೋಜಿಸುವುದು ಮತ್ತು ಆಯೋಜಿಸುವುದು.
- ಅಧ್ಯಾಪಕರು ಮತ್ತು ಸಂಶೋಧನಾ ವಿದ್ವಾಂಸರಲ್ಲಿ ಸಂಶೋಧನಾ ಸಂಸ್ಕೃತಿಯನ್ನು ಉತ್ತೇಜಿಸಲು ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು, ಸಮ್ಮೇಳನಗಳು, ವಿಚಾರಗೋಷ್ಠಿಗಳು, ವಿಶೇಷ ಉಪನ್ಯಾಸಗಳು ಇತ್ಯಾದಿಗಳನ್ನು ಆಯೋಜಿಸುವುದು/ ಸಂಯೋಜಿಸುವುದು.
- ಸಮರ್ಪಕ ಸತ್ಯ ಮತ್ತು ಅಂಕಿ ಅಂಶಗಳ ಮೂಲಕ ವಿವಿಧ ಅಭಿವೃದ್ಧಿ ಚಟುವಟಿಕೆಗಳ ಯೋಜನೆ, ಸಂಯೋಜನೆ ಮತ್ತು ಅನುಷ್ಠಾನದಲ್ಲಿ ಕುಲಪತಿ ಮತ್ತು ಆಡಳಿತದೊಂದಿಗೆ ಸಹಕರಿಸುವುದು.

೭. ಕುಲಪತಿಯವರ/ಸರ್ಕಾರದ ನಿರ್ದೇಶನಗಳ ಅನುಷ್ಠಾನದ ವರದಿ:

ವಿಶ್ವವಿದ್ಯಾನಿಲಯವು ಘನತೆವೆತ್ತ ಕರ್ನಾಟಕದ ರಾಜ್ಯಪಾಲರು ಮತ್ತು ಕರ್ನಾಟಕ ಸರ್ಕಾರವುನೀಡುವ ನಿರ್ದೇಶನಗಳನ್ನು ಪೂರೈಸಲು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಇದರ ಜೊತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗವು ಘನತೆವೆತ್ತ ಕರ್ನಾಟಕ ರಾಜ್ಯಪಾಲರು ಮತ್ತು ಕರ್ನಾಟಕ ಸರ್ಕಾರದ ಕಛೇರಿಯು ಸೂಚಿಸಿರುವ ಎಲ್ಲ ಮಾಹಿತಿ ಹಾಗೂ ದಾಖಲೆಗಳನ್ನು ಕಾಲಕಾಲಕ್ಕೆ ಒದಗಿಸಿದೆ.

ಕ್ರಮ ಸಂ.	ವಿಷಯ	ವಿಶ್ವವಿದ್ಯಾಲಯಗಳು ತೆಗೆದುಕೊಂಡ ಕ್ರಮ
1	Introduction of scheme to depict the portariats of war warriors decorated with Param Veer Chakra in one thousand educational instiutions Letter dated: 07.08.2017	-
2	Initiative of adoption of a village by every University under their jurisdiction in Karnataka for developing it as a 'Smart Village' for the purpose of ensuring that it becomes a modern village Letter dated: 24.02.2018	To Registrar, BCU
3	Article appeared in Indian Express dated: 06.03.2018 – reg Letter dated: 21.03.2018 (CONFIDENTIAL)	Reply Letter dated: 23.03.2018
4	Article appeared in Indian Express dated: 06.03.2018 – reg (CONFIDENTIAL) Remainder letter dated: 06.04.2018	Reply letter dated: 12.04.2018
5	Adoption of one village for developing it as a smart village in the jurisdiction of the University – reg Letter dated: 21.04.2018	Registrar to discuss
6	Celebration of International Yoga Day being observed on 21st June, 2018 in the University and affiliated colleges Letter dated: 14.06.2018	To Registrar, BCU
7	Article appeared in Indian Express dated 06.03.2018 (CONFIDENTIAL) Letter dated: 19.04.2018	-
8	Constitution of various bodies such as Syndicate, Academic Council, Finance Committee of BCU Letter dated: 28.09.2018	-
9	Seminar on thoughts and philosophy of Mahatma Gandhiji Letter dated: 05.10.2018	Nammolagina Gandhi 01.10.2018
10	Article appeared in Indian Express dated 06.03.2018 – reg CONFIDENTIAL Letter dated: 06.07.2018	Not replied

11	Action taken report on the actionable points of the Governor's Conference held on 4-5th June, 2018 at Rashtrapati Bhavan, New Delhi – reg Letter dated:26.12.2018	Letter replied from the University stating that the letter received with no enclosures Letter dated: 31.12.2018
12	Action taken report on the actionable points of the Governor's Conference held on 4-5th June, 2018 at Rashtrapati Bhavan, New Delhi – reg Letter dated: 26.12.2018 along with enclosures	-
13	Action taken report on the actionable points of the Governor's Conference held on 4-5th June, 2018 at Rashtrapati Bhavan, New Delhi – reg Letter dated: 02.02.2019 remainder	Letter dated: 11.03.2019
14	Mahatma Gandhi National Council of Rural Education (MGNCRE) nai Talim – Experiential Learning in Teacher Education – 27th to 28th February programme at Hyderabad – reg deputing two heads of the department to attend the conference	To Registrar, BCU
15	Implementation of Electronic Document Generation System (EDGS) from 2018-19 – reg Letter dated: 14.06.2019	To Registrar (Evaluation), BCU
	Circular dated: 11.02.2020 Instructions with regard to submission of convocation proposals to the Hon'ble Governor & Chancellor	To Registrar (Evaluation) and Registrar
	Circular issued by Governor's Secretariat on Conferment of Honorary Degrees Email dated: 25.06.2020	To Registrar
16	Implementation of National Academic Depository Scheme via Digilocker – reg Letter dated: 07.11.2020	To Registrar (Evaluation)
17	Adoption of Khadi and Handloom Fabric for the special occasions like Convocation etc. in the Universities of Karnataka – reg Letter dated: 09.11.2020	To Registrar (Evaluation)
18	Action taken report on the actionable points of the Governor's Conference held on 23rd and 24th November, 2019	Letter dated: 18.08.2020

	at Rashtrapathi Bhavan, New Delhi – reg Letter dated: 22.06.2020	
19	Adoption of Khadi and Handloom Fabric for the special occasions like convocation etc. in the Universities of Karnataka – reg. Letter dated: 01.12.2020	Letter dated: 07.12.2020

೮. ಕೆಎಸ್‌ಎಚ್‌ಇಸಿ ಶಿಫಾರಸ್ಸುಗಳಂತೆ ಸರ್ಕಾರ ಹೊರಡಿಸಿದ ಅಧಿಸೂಚನೆಗಳ ಅನುಷ್ಠಾನದ ವರದಿ:

ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಮತ್ತು ಕರ್ನಾಟಕ ಸರ್ಕಾರದ ನಿರ್ದೇಶನಗಳನ್ನು ಪೂರೈಸಲು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಇದರ ಜೊತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗವು ರಾಜ್ಯ ಉನ್ನತ ಶಿಕ್ಷಣ ಮಂಡಳಿ, ಕರ್ನಾಟಕ ಸರ್ಕಾರವು ಸೂಚಿಸಿರುವ ಎಲ್ಲ ಮಾಹಿತಿ ಮತ್ತು ದಾಖಲೆಗಳನ್ನು ಕಾಲಕಾಲಕ್ಕೆ ಒದಗಿಸಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ,

ಕ್ರಮ ಸಂ.	ವಿಷಯ	ವಿಶ್ವವಿದ್ಯಾಲಯಗಳು ತೆಗೆದುಕೊಂಡ ಕ್ರಮ
೧.	೨೦೧೭-೧೮ನೇ ಆರ್ಥಿಕ ಸಾಲಿನಲ್ಲಿ ಬೆಂಗಳೂರು ಕೇಂದ್ರ ಹಾಗೂ ಉತ್ತರ ವಿಶ್ವವಿದ್ಯಾಲಯಗಳಿಗೆ ಆಯವ್ಯಯ ಒದಗಿಸುವ ಬಗ್ಗೆ ಪತ್ರ ಸಂಖ್ಯೆ: ಇಡಿ ೪೨೧ ಯುಬಿವಿ ೨೦೧೬ ದಿನಾಂಕ: ೧೯.೦೪.೨೦೧೭	
೨.	ಬೆಂಗಳೂರು ವಿಶ್ವವಿದ್ಯಾಲಯವನ್ನು ತ್ರಿಭಜಿಸಿ ಹೊಸದಾಗಿ ರಚಿಸಲಾಗಿರುವ ಬೆಂಗಳೂರು ಉತ್ತರ ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಗಳನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಇಡಿ ೧೦೧ ಯುಬಿವಿ ೨೦೧೭, ದಿನಾಂಕ: ೨೬.೦೪.೨೦೧೭ ೧. ಮುಖ್ಯ ಕಟ್ಟಡ • ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಉಪಯೋಗಿಸಲಾಗುತ್ತಿರುವ ಜಯನಗರ ಹಾಸ್ಟೆಲ್ ಕಟ್ಟಡದ ಬದಲಾಗಿ ಬ್ರೈಲ್ ಕೇಂದ್ರವಿರುವ ಕಟ್ಟಡವನ್ನು ಬೆಂಗಳೂರು ವಿಶ್ವವಿದ್ಯಾಲಯದ ಬಳಕೆಗಾಗಿ ನೀಡುವುದು. • ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನ ಜ್ಯೋತಿ ಆಡಿಟೋರಿಯಂ ನಂತಹ ಸೌಲಭ್ಯಗಳನ್ನು ಮುಂದಿನ ೦೫ ವರ್ಷದವರೆಗೆ ಪರಸ್ಪರ ಸಹಕಾರ ಹಾಗೂ ಸಮನ್ವಯ ಆಧಾರದ ಮೇಲೆ ಬೆಂಗಳೂರು	

	ವಿಶ್ವವಿದ್ಯಾಲಯದೊಂದಿಗೆ ಹಂಚಿಕೊಳ್ಳುವುದು ೧. ಶೈಕ್ಷಣಿಕ ವಿಭಾಗಗಳು:– ಸೆಂಟ್ರಲ್ ಕಾಲೇಜು ಆವರಣದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ವಿಭಾಗಗಳನ್ನು ಸ್ಥಾಪಿಸುವುದು. ೨. ಮಾನವ ಸಂಪನ್ಮೂಲ:– ಬೆಂಗಳೂರು ವಿಶ್ವವಿದ್ಯಾಲಯದಿಂದ ಹಂಚಿಕೆ ಮಾಡಲಾಗುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ಸರ್ಕಾರದ ಅನುಮೋದನೆ ಪಡೆದು ಭರ್ತಿ ಮಾಡುವುದು. ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವುದು. **ನ್ಯಾಯಾಲಯದ ಬಾಕಿ ಪ್ರಕರಣಗಳು**:– ಬೆಂಗಳೂರು ವಿಶ್ವವಿದ್ಯಾಲಯವನ್ನು ತ್ರಿಭಜಿಸಿ ಅಧಿಸೂಚನೆ ಹೊರಡಿಸಿದ ನಂತರದಲ್ಲಿ ದಾಖಲಾಗಿ ಬಾಕಿ ಇರುವ ಸಂಬಂಧಿಸಿದ ಪ್ರಕರಣಗಳನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ನಿರ್ವಹಿಸುವುದು.	
೩.	ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜು ಸೇರಿದಂತೆ ಇತರ ಸರ್ಕಾರಿ ಕಾಲೇಜುಗಳನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಪರಿವರ್ತಿಸುವ ಕುರಿತು ಪತ್ರ ಸಂಖ್ಯೆ: ಇಡಿ ೪೩೮ ಯುಬಿವಿ ೨೦೧೬ ದಿನಾಂಕ: ೦೮.೦೫.೨೦೧೭ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಬಿಸಿಯು/ಪಿಎಸ್/೫೪/೨೦೧೬–೧೭ ದಿನಾಂಕ:೧೬.೧೧.೨೦೧೬	
೪.	ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಕೆಲವು ಅಧ್ಯಯನ ವಿಭಾಗಗಳ ಕಟ್ಟಡಗಳನ್ನು ತೆರವುಗೊಳಿಸಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಶಕ್ಕೆ ನೀಡುವ ಬಗ್ಗೆ ಪತ್ರ ಸಂಖ್ಯೆ: ಇಡಿ ೧೨೭ ಯುಬಿವಿ ೨೦೧೭ ದಿನಾಂಕ: ೧೩.೦೬.೨೦೧೭ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಬಿಸಿಯು/೧೭/೨೦೧೭–೧೮ ದಿನಾಂಕ: ೨೪.೦೫.೨೦೧೭	

೫.	ಗುತ್ತಿಗೆ ಆಧಾರದ ಮೇಲೆ ಸೆಂಟ್ರಲ್ ಕಾಲೇಜು ಆವರಣದಲ್ಲಿ ಸ್ಥಳಾವಕಾಶ / ಕಟ್ಟಡಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕುರಿತು ಪತ್ರ ಸಂಖ್ಯೆ: ಇಡಿ ೪೩೯ ಯುಬಿವಿ ೨೦೧೬ ದಿನಾಂಕ: ೨೫.೦೧.೨೦೧೭ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಬಿಸಿಯು/ಪಿಎಸ್/೫೫/೨೦೧೬-೧೭ ದಿನಾಂಕ:೧೬.೧೧.೨೦೧೬	
೬.	Approval of commencement of Bengaluru Central University and Bengalur North University with effect from 01.07.2017 from the Academic Year 2017-18 Letter No. ED 167 UBV 2017 dated: 29.06.2017	
೭.	ನೂತನ ಬೆಂಗಳೂರು ಕೇಂದ್ರ ಹಾಗೂ ಉತ್ತರ ವಿಶ್ವವಿದ್ಯಾಲಯಗಳನ್ನು ಪೂರ್ಣ ಪ್ರಮಾಣದಲ್ಲಿ ೨೦೧೭-೧೮ನೇ ಸಾಲಿನಿಂದ ಕಾರ್ಯಾರಂಭಗೊಳಿಸುವನಿಟ್ಟಿನಲ್ಲಿ ಸದರಿ ನೂತನ ವಿಶ್ವವಿದ್ಯಾಲಯಗಳಲ್ಲಿ ಅಗತ್ಯ ಆರ್ಥಿಕ ಸಂಪನ್ಮೂಲ-ಗಳನ್ನು ಸೃಜಿಸುವ ಸಂಬಂಧ ದಿನಾಂಕ: ೧೧.೦೫.೨೦೧೭ ರಂದು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಉನ್ನತ ಶಿಕ್ಷಣ ಇಲಾಖೆ / ಪಾಲುದಾರ ವಿಶ್ವವಿದ್ಯಾಲಯಗಳ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಕೈಗೊಳ್ಳಲಾದನಿರ್ಣಯಗಳನ್ನು ಅನುಷ್ಠಾನಗೊಳಿಸುವಸಂಬಂಧದಲ್ಲಿ ಪರ್ಯಾಲೋಚಿಸಲು ದಿನಾಂಕ: ೩೦.೦೬.೨೦೧೭ ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು ಅ.ಸ. ಪತ್ರ ಸಂಖ್ಯೆ: ಇಡಿ ೧೯೨ ಯುಬಿವಿ ೨೦೧೭ ದಿನಾಂಕ: ೧೯.೦೭.೨೦೧೭ ಆರಂಭಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಬೆಂಗಳೂರು ವಿಶ್ವವಿದ್ಯಾಲಯದಿಂದ ಉತ್ತರ ವಿಶ್ವವಿದ್ಯಾಲಯಕ್ಕೆ ಹಾಗೂ ಕೇಂದ್ರ ವಿಶ್ವವಿದ್ಯಾಲಯಕ್ಕೆ ಅನುಕ್ರಮವಾಗಿ ವರ್ಗಾಯಿಸಬೇಕಾಗಿರುವ ರೂ.೧೫.೦೦ ಕೋಟಿಗಳ ಹಾಗೂ ರೂ.೧೦.೦೦ ಕೋಟಿಗಳ ಪೈಕಿ ತಲಾ ರೂ. ೫.೦೦ ಕೋಟಿಗಳನ್ನು ಕೂಡಲೇ ಬಿಡುಗಡೆಗೊಳಿಸುವುದು. ೧. ೨೦೧೭-೧೮ನೇ ಸಾಲಿಗೆ ಸಂಗ್ರಹಿಸಲಾಗುವ ಸಂಯೋಜನಾ ಶುಲ್ಕವನ್ನು, ಸಂಯೋಜನಾ ವೆಚ್ಚವನ್ನು ಕಡಿತಗೊಳಿಸಿ ಕೇಂದ್ರ ಮತ್ತು ಉತ್ತರ ವಿಶ್ವವಿದ್ಯಾಲಯಗಳ ಪ್ರಾದೇಶಿಕ ವ್ಯಾಪ್ತಿಗೊಳಪಡುವ	

	ಸಂಯೋಜಿತಕಾಲೇಜುಗಳಸಂಖ್ಯೆಗಳಿಗೆ ಅನುಗುಣವಾಗಿ ಸದರಿ ನೂತನ ವಿಶ್ವವಿದ್ಯಾಲಯಗಳಿಗೆ ಹಂಚುವುದು; ೨. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೨೦೧೭-೧೮ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿರುವ ಅನುದಾನದಲ್ಲಿ ಬೆಂಗಳೂರು ಉತ್ತರ ಹಾಗೂ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆ ಪ್ರಕ್ರಿಯೆಗಳನ್ನು ಕಾರ್ಯರಂಭಿಸಲು ತುರ್ತು ಅಗತ್ಯವಾದ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುವುದು; ೩. ೨೦೧೭-೧೮ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರು ಮಾಡಲಾಗಿರುವ ವೇತನ ಹಾಗೂ ಪಿಂಚಣಿ ಅನುದಾನವನ್ನು ಸಿಬ್ಬಂದಿ ಮತ್ತು ಮೂಲಸೌಕರ್ಯಗಳ ವರ್ಗಾವಣೆಗೆ ಪ್ರಮಾಣಾನು - ಸಾರವಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ನೂತನ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸುವುದು; ೪. ಕೋಲಾರ ಸ್ನಾತ್ತಕೋತ್ತರ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ತ್ವರಿತವಾಗಿ ಪೂರ್ಣಗೊಳಿಸಿ ಗುತ್ತಿಗೆದಾರರಿಗೆ ಹಣ ಪಾವತಿಸುವುದು.	
೮.	ಬೆಂಗಳೂರು ಉತ್ತರ ಮತ್ತು ಕೇಂದ್ರ ವಿಶ್ವವಿದ್ಯಾಲಯ -ಗಳ ಸಿಂಡಿಕೇಟ್ ಪ್ರಾಧಿಕಾರಗಳನ್ನು ರಚಿಸುವ ಬಗ್ಗೆ ಪತ್ರ ಸಂಖ್ಯೆ: ಇಡಿ ೩೨೮ ಯುಬಿವಿ ೨೦೧೭ ದಿನಾಂಕ:೩೧.೦೮.೨೦೧೭	
೯.	ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳು ಸದರಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಮಾನ್ಯ ಕುಲಾಧಿಪತಿಗಳು ಪೂರ್ವಾನುಮೋದನೆ ನೀಡುವ ಕುರಿತು. ಪತ್ರ ಸಂಖ್ಯೆ: ಇಡಿ ೪೨೮ ಯುಬಿವಿ ೨೦೧೭ ದಿನಾಂಕ: ೦೪.೧೨.೨೦೧೭	

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ

ಕ್ರಮ ಸಂ.	ವಿಷಯ	ವಿಶ್ವವಿದ್ಯಾಲಯಗಳು ತೆಗೆದುಕೊಂಡ ಕ್ರಮ
೧	ವೃತ್ತಿ ಶಿಕ್ಷಣದಲ್ಲಿ (ಇಂಜಿನಿಯರಿಂಗ್, ಮೆಡಿಕಲ್, ಕಾನೂನು ಮತ್ತು ಕೃಷಿ ಇತ್ಯಾದಿ ವಿಭಾಗಗಳಲ್ಲಿ) ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವ ಕುರಿತು ಡಾ.ಹಿ.ಚಿ.ಬೋರಲಿಂಗಯ್ಯ, ಸಮಿತಿಯ ಅಧ್ಯಕ್ಷರು ಸಲ್ಲಿಸಿದ ವರದಿಯ ಅನುಷ್ಠಾನ ಕುರಿತು. ಪತ್ರ ದಿನಾಂಕ: ೧೯.೦೭.೨೦೧೭	-
೨	ಅಧಿಸೂಚನೆ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ	-

	ಅಧೀನಕ್ಕೊಳಪಡುವ ಮಹಾವಿದ್ಯಾಲಯಗಳ ಅಧ್ಯಾಪಕರುಗಳಿಗೆ ಏಕರೂಪದ ಪದವಿ ಪರೀಕ್ಷೆಗಳ ಮೌಲ್ಯಮಾಪನ ಭತ್ಯೆ ನಿಗದಿಪಡಿಸುವ ಕುರಿತು ದಿನಾಂಕ: ೨೭.೦೮.೨೦೧೮	
೩	ಪ್ರಖ್ಯಾತ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಒಂದು ಕೌಂಟರ್‌ನ್ನು ತೆರೆಯುವ ಕುರಿತು ಪತ್ರ ದಿನಾಂಕ: ೦೧.೧೦.೨೦೧೮	ಕುಲಸಚಿವರು
೪	ಆರ್ಟ್ ಆಫ್ ಲಿವಿಂಗ್ ಅಂತರಾಷ್ಟ್ರೀಯ ಕೇಂದ್ರ ಇವರು ಆಯೋಜಿಸುವ ಸಮಾವೇಶದಲ್ಲಿ ಭಾಗವಹಿಸುವ ಕುರಿತು ಪತ್ರ ದಿನಾಂಕ: ೨೮.೦೧.೨೦೧೯	ಕುಲಸಚಿವರು
೫	ಕರ್ನಾಟಕ ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ಮಾಹಿತಿ ಕೋರುವ ಕುರಿತು ಇಮೇಲ್ ದಿನಾಂಕ: ೦೧.೧೦.೨೦೧೮	ಕುಲಸಚಿವರು
೬	Circular dated: 08.03.2019 Workshop on "Mapping and Analyzing the Landscape of the Karnataka's Knowledge Ecology" – reg	–
೭	ರಾಜ್ಯದ ವಿಶ್ವವಿದ್ಯಾಲಯಗಳು ನ್ಯಾಕ್ ಮಾನ್ಯತೆಗೆ ಅರ್ಜಿ ಸಲ್ಲಿಸುವ ಗ್ರೇಡ್ ಸುಧಾರಣೆ ಕುರಿತುಸುತ್ತೋಲೆ: ೨೩.೦೩.೨೦೧೯	ಕುಲಸಚಿವರು
೮	Seeking views on draft National Education Policy – 2019 Letter dated: 06.06.2019	
೯	Filling up the vacant faculty posts as per the UGC guidelines – reg Letter dated: 27.06.2019	
೧೦	ಕರ್ನಾಟಕ ವೈಭವ ವೈಚಾರಿಕ ಹಬ್ಬ ಪತ್ರ ದಿನಾಂಕ: ೨೩.೧೦.೨೦೧೯	ಕುಲಸಚಿವರು
೧೧	ಸುತ್ತೋಲೆ ದಿನಾಂಕ: ೦೨.೧೧.೨೦೧೯ ಒಂದು ದೇಶ ಒಂದು ಸಂವಿಧಾನ ಅಭಿಯಾನವನ್ನು ರಾಜ್ಯಾದ್ಯಂತ ಆಚರಿಸುವ ಬಗ್ಗೆ ಪೂರ್ವಭಾವಿ ಸಭೆ.	Circular may be issued to all the colleges to BCU and let the colleges submit the report
೧೨	Circular dated 14.02.2020 "Matribhasha Diwas" (Mother Tongue Day) Celebration on 21.02.2020 – reg	1. Registrar to circulate among affiliated colleges and PG department 2. Co-ordinator, Department of Kannada to discuss

೧೩	Circular dated 07.02.2020 Round Table Policy Dialog for Karnataka Higher Education Institutions	–
೧೪	ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಜಪಾನ್ ಭಾಷೆ ಕಲಿಕೆಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವ ಬಗ್ಗೆ. ಪತ್ರ ದಿನಾಂಕ:೦೨.೦೩.೨೦೨೦	Dr. Jyothi Venkatesh, co-ordinator, Central for Global Languages to discuss
೧೫	India Innovation Index-೨೦೧೯ ಕ್ಕೆ ಸಂಬಂಧಿಸಿದ ಸಭೆ ನಡೆಸುವ ಕುರಿತು ಪತ್ರ ದಿನಾಂಕ: ೦೭.೧೦.೨೦೨೦	ಕುಲಸಚಿವರು

೯. ಸಾಮಾಜಿಕ ಹೊರಗುಳಿವಿಕೆ ಮತ್ತು ಒಳಗೊಳ್ಳುವಿಕೆ ನೀತಿಗಳ ಅಧ್ಯಯನ ಕೇಂದ್ರದ ವರದಿ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಸಾಮಾಜಿಕ ಹೊರಗುಳಿವಿಕೆ ಮತ್ತು ಒಳಗೊಳ್ಳುವಿಕೆ ನೀತಿಗಳ ಅಧ್ಯಯನ ಕೇಂದ್ರವನ್ನು ಸ್ಥಾಪಿಸಬೇಕಿದೆ.

೧೦. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ ನಿರ್ವಹಣೆಗೆ ಗಾಂಧಿ ಅಧ್ಯಯನ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸದ್ಬಳಕೆ:

ಗಾಂಧಿ ಅಧ್ಯಯನ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳನ್ನು ಮುಂದಿನ ವರ್ಷ ಸ್ಥಾಪಿಸಲಾಗುವುದು.

೧೧. ದಾಖಲಾತಿ ಪ್ರಕ್ರಿಯೆಗಳು:

ಎ. ವಿಶ್ವವಿದ್ಯಾನಿಲಯದ ದಾಖಲಾತಿ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಅಂಕಿ ಅಂಶಗಳು

ವಿಶ್ವವಿದ್ಯಾನಿಲಯದಲ್ಲಿ ಒಟ್ಟಾರೆ ಸೀಟು ಲಭ್ಯತೆಗಾಗಿ ಕೇಂದ್ರಿಕ್ರತ ಪ್ರವೇಶ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿದೆ. ೨೦೧೮-೧೯ ರಲ್ಲಿ ೫೯೩ ವಿದ್ಯಾರ್ಥಿಗಳು ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಡಿಯಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದಾರೆ.

ಬಿ. ಜಿಇಆರ್ ಹೆಚ್ಚಿಸುವ ತಂತ್ರಗಳು

- ರಾಜ್ಯದ ವಿಶ್ವವಿದ್ಯಾನಿಲಯವಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ನಿಗಧಿತ ಶುಲ್ಕವು ಇತರ ಖಾಸಗಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಿಗೆ ಹೋಲಿಸಿದರೆ ಕಡಿಮೆ ಇದೆ. ಇದರಿಂದ ಕಡೆಗಣಿಸಲ್ಪಟ್ಟ ಮತ್ತು ಬಡ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಈ ಸಮನ್ವಯ ನೀತಿಯಿಂದ ಬಡ ಮತ್ತು ನಿರಾಶ್ರಿತ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶವನ್ನು ಕಲ್ಪಿಸಲಾಗುತ್ತದೆ.
- ಅಗತ್ಯವಿರುವ ಕಡೆಯೆಲ್ಲಾ ಪ್ರವೇಶಾವಕಾಶವನ್ನು ಹೆಚ್ಚಿಸಲಾಗಿದ್ದು ಮಹತ್ವಾಕಾಂಕ್ಷೆಯುಳ್ಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.
- ಸರ್ಕಾರದಿಂದ ವಿಸ್ತರಿಸಲ್ಪಟ್ಟ ವಿದ್ಯಾರ್ಥಿವೇತನ ಸೌಲಭ್ಯಗಳ ಪ್ರಯೋಜನ ಪಡೆಯಲು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

– ವಿವಿಧ ನಿಕಾಯಗಳಲ್ಲಿ ಲಭ್ಯವಿರುವ ಕೋರ್ಸುಗಳ ಕುರಿತು ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಮೌಲ್ಯೀಕರಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದರಿಂದ ಉದ್ಯೋಗ ಮತ್ತು ಸಂಶೋಧನೆಗೆ ಅವಕಾಶಗಳು ಮತ್ತು ದಾಖಲಾತಿ ಪ್ರಕ್ರಿಯೆಗಳು ಹೆಚ್ಚಾಗುತ್ತವೆ.

ಸಿ. ವಿದ್ಯಾರ್ಥಿ ವಿವರ– ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ; ರಾಜ್ಯ/ ದೇಶದ ಇತರ ವಿಶ್ವವಿದ್ಯಾನಿಲಯಗಳು; ಪುರುಷ–ಮಹಿಳೆ(ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗ/ ಮಹಿಳೆ/ ಅಂತರಾಷ್ಟ್ರೀಯ/ ಇತರೆ)

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಸ್ನಾತಕೋತ್ತರ ಡಿಪ್ಲೋಮೋ ಕೋರ್ಸುಗಳು–೨೦೧೮

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1.	ಸಂಯೋಜಿತ ಕಾಲೇಜುಗಳು 2018	68	31	05	06	01	04	04	26	21	32	**99**

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಸ್ನಾತಕೋತ್ತರ ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧.	ಆವರಣ/ ಕ್ಯಾಂಪಸ್	238	349	58	69	14	15	220	122	57	32	**587**
೭.	ಸಂಯೋಜಿತ ಕಾಲೇಜುಗಳು	2485	2873	422	265	92	57	1540	1116	819	1047	**5358**
ಒಟ್ಟು												**5945**

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಎಸ್‌ಸಿ		ಎಸ್‌ಟಿ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
೧	ಸಂಯೋಜಿತ ಕಾಲೇಜುಗಳು	14931	16815	2704	2112	435	375	8513	7194	5163	5250	**31746**

ಡಿ. ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ (ಸಿಬಿಸಿಎಸ್)ಯ ಅನುಷ್ಠಾನದ ನಂತರ ಕ್ರೆಡಿಟ್ ಶೇಖರಣೆ ಮತ್ತು ವರ್ಗಾವಣೆ ವ್ಯವಸ್ಥೆ: ಸಿಬಿಸಿಎಸ್ ಅಡಿಯಲ್ಲಿ ಅಧ್ಯಯನ ಮಾಡದ ಅಂತರ್‌ರಾಷ್ಟ್ರೀಯ ಮತ್ತು ಇತರ ರಾಜ್ಯಗಳ ವಿದ್ಯಾರ್ಥಿಗಳು ಲ್ಯಾಟರಲ್ ಪ್ರವೇಶ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮತ್ತು ದಾಖಲಾತಿ.

ಸ್ನಾತಕೋತ್ತರ ಹಂತದಲ್ಲಿ ಸಿಬಿಸಿಎಸ್ ನ ಅನುಷ್ಠಾನ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಪದವಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯದ ಸಿಬಿಸಿಎಸ್ ಸೆಮಿಸ್ಟರ್ ನಿಯಮಗಳನ್ನು ಅಳವಡಿಸಿಕೊಂಡಿದೆ. ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಬಿಸಿಎಸ್ ಸೆಮಿಸ್ಟರ್ ಸ್ಕೀಮ್ ಸ್ನಾತಕೋತ್ತರ ಪದವಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಹೆಚ್ ಇ ಕುಲಪತಿಗಳ ಅನುಮತಿಯನ್ನು ಪಡೆಯಲು ಕರಡು ನಿಯಮಾವಳಿಗಳನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ನಿಯಮಾವಳಿಗಳು ವಿಶ್ವವಿದ್ಯಾಲಯ ಧನಸಹಾಯ ಆಯೋಗ. ನವದೆಹಲಿ. ಯಿಂದ ಹೊರಡಿಸಲಾದ ಪದವಿ ಮತ್ತು ಸ್ನಾತಕೋತ್ತರ ಪದವಿಗಳೆರಡು ಹಂತದಲ್ಲಿ ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ(ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್)ಯ ಅನುಷ್ಠಾನಕ್ಕೆ ಸಂಬಂಧಿಸಿರುವ ನಿಯಮಾವಳಿಗಳು/ ನಿರ್ದೇಶನಗಳು/ ಮಾರ್ಗಸೂಚಿಗಳಿಗೆ ಅನುಗುಣವಾಗಿವೆ ಮತ್ತು ಉನ್ನತ ಶಿಕ್ಷಣ ಕೌನ್ಸಿಲ್ ಹಾಗೂ ಕರ್ನಾಟಕ ಸರ್ಕಾರದ ಸಲಹೆ ಸೂಚನೆಗಳಿಗೆ ಅನುಗುಣವಾಗಿವೆ. ಸಿಬಿಸಿಎಸ್ ಯೋಜನೆಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪದವಿಗಳನ್ನು ಜಾಗತಿಕ ಮಾನದಂಡಗಳನ್ನು ಕಾಯ್ದುಕೊಳ್ಳುತ್ತವೆ. ಇದರಿಂದಾಗಿ ವಿಶ್ವವಿದ್ಯಾನಿಲಯವು ಒದಗಿಸುವ ಕಾರ್ಯಕ್ರಮಗಳು ಮತ್ತು ಪದವಿಗಳು ಹೋಲಿಕೆಯೊಂದಿಗೆ ಒಪ್ಪಿತವಾಗುತ್ತವೆ. ಭಾರತ ಸರ್ಕಾರವು ಪರಿಚಯಿಸಿದ ಹೊಸ ಶಿಕ್ಷಣ ನೀತಿ ೨೦೨೦ರ ದೃಷ್ಟಿಯಿಂದ ಮುಂಬರುವ ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು ನಿಯಮಗಳನ್ನು ಮರು ರೂಪಿಸಬೇಕಾಗುತ್ತದೆ.

ಆಯ್ಕೆ ಆಧಾರಿತ ಸೆಮಿಸ್ಟರ್ ಯೋಜನೆ(ಸಿಬಿಸಿಎಸ್) (ಸೆಮಿಸ್ಟರ್ ಸ್ಕೀಮ್) ನ ಪ್ರಮುಖ ಲಕ್ಷಣಗಳು:

ಪ್ರತಿಯೊಂದು ಕೋರ್ಸ್ ನಿರ್ದಿಷ್ಟ ಸಂಖ್ಯೆಯ ಕ್ರೆಡಿಟ್ ಗಳನ್ನು ಹೊಂದಿರಬೇಕು, ಇದು ಸಾಮಾನ್ಯವಾಗಿ ಕೋರ್ಸ್‌ನ ಪ್ರಾಮುಖ್ಯತೆಯನ್ನು ಪ್ರತಿನಿಧಿಸುತ್ತದೆ ಮತ್ತು ಬೋಧನಾ ಕಾರ್ಯಗಳನ್ನು ಹಾಗೂ ಕಲಿಕೆ ಮತ್ತು ಮೌಲ್ಯಮಾಪನದ ಬೋಧನಾ ಅವದಿಗಳು, ಕೋರ್ಸ್‌ನ ವಿಷಯ, ಬೋಧನಾ ವಿಧಾನ, ಕಲಿಕಾ ಉದ್ದೇಶಗಳು, ಮುಂತಾದ ತಂತ್ರಗಳನ್ನು ಹೊಂದಿರುತ್ತದೆ. ಉದ್ದೇಶಿತ ಕೋರ್ಸ್‌ಗಳಲ್ಲಿ ಕ್ರೆಡಿಟ್‌ಗಳು ವಾರದಲ್ಲಿನ ಬೋಧನಾ ಗಂಟೆಗಳ ಸಂಖ್ಯೆಯನ್ನು ಆದರಿಸಿದೆ. ಸಾಮಾನ್ಯವಾಗಿ ಒಂದು ಕ್ರೆಡಿಟ್ ಎಂದರೆ ವಾರದಲ್ಲಿ ಬರುವ ಒಂದು ಗಂಟೆಯ ಥಿಯೆರಿ ಬೋಧನೆ ಅಥವಾ ಒಂದು ಅಥವಾ ಎರಡು ಗಂಟೆಯ ಟುಟೋರಿಯಲ್ ಅಥವಾ ಒಂದೂವರೆ ಅಥವಾ ಎರಡು ಗಂಟೆಯ ಪ್ರಾಯೋಗಾಲಯ/ಕ್ಷೇತ್ರ ಕಾರ್ಯ/ ಪ್ರಾಜೆಕ್ಟ್ ಕಾರ್ಯ/ ಇಂಟರ್‌ಷಿಪ್‌ಗೆ ಸಮವಾಗಿರುತ್ತದೆ.

ಸಿಬಿಸಿಎಸ್ (ಸೆಮಿಸ್ಟರ್ ಸ್ಕೀಮ್) ಯೋಜನೆಯ ಇತರ ಲಕ್ಷಣಗಳು

- ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಯೋಜನೆಯ ಆಧಾರದಲ್ಲಿ ರಚಿಸಲ್ಪಟ್ಟಿವೆ.
- ಅಧ್ಯಯನ ವಿಷಯಗಳು ಮತ್ತು ಚಟುವಟಿಕೆಗಳ ತುಲನಾತ್ಮಕ ಪ್ರಾಮುಖ್ಯತೆಯನ್ನು ಕ್ರೆಡಿಟ್‌ಗಳ ಆಧಾರದಲ್ಲಿ ಪ್ರಮಾಣಿಕರಿಸಲಾಗಿದೆ. ಸಾಮಾನ್ಯವಾಗಿ ಒಂದು ಕೋರ್ಸ್ ಒಟ್ಟು ೮೦ ರಿಂದ ೧೦೦ ಕ್ರೆಡಿಟ್‌ಗಳನ್ನು ಹೊಂದಿರುತ್ತದೆ.
- ಪ್ರತಿಯೊಂದು ಅಧ್ಯಯನ ಕೋರ್ಸ್ 'ಮೂಲ'(ಕೋರ್) ಮತ್ತು 'ಐಚ್ಛಿಕ' (ಎಲೆಕ್ಟಿವ್) ಕೋರ್ಸ್‌ಗಳನ್ನು ಒಳಗೊಂಡಿದ್ದು ಮುಂದುವರಿದು ಮೂಲ ಕೋರ್ಸ್ 'ಕ್ಲಿಷ್ಟ'(ಹಾರ್ಡ್) ಮತ್ತು 'ಸುಲಭ' (ಸಾಫ್ಟ್) ಕೋರ್ಸ್‌ಗಳನ್ನು ಒಳಗೊಂಡಿರುತ್ತದೆ.
- ಒಂದೇ ನಿಕಾಯದ ಅಥವಾ ಇತರೆ ನಿಕಾಯದ ಕೋರ್ಸ್‌ಗಳಿಂದ ವಿಷಯಗಳ ಮುಕ್ತ ಐಚ್ಛಿಕ ಆಯ್ಕೆಗೆ ಅವಕಾಶವಿರುತ್ತದೆ.
- ಪ್ರತಿ ಸೆಮಿಸ್ಟರ್‌ನ ಕೊನೆಯವರೆಗೆ ಗಳಿಸಿದ ಗ್ರೇಡ್ ಪಾಯಿಂಟ್ ಆವರೇಜ್(ಜಿಪಿಎ) ಮತ್ತು ಕ್ಯುಮುಲೇಟಿವ್ ಗ್ರೇಡ್ ಪಾಯಿಂಟ್ ಆವರೇಜ್ (ಸಿಜಿಪಿ)ಗಳ ಆಧಾರದಲ್ಲಿ ಫಲಿತಾಂಶ ಪ್ರಕಟಿಸಲಾಗುತ್ತದೆ.
- ಕೋರ್ಸ್‌ನ ಕೊನೆಯವರೆಗೂ ಗಳಿಸಿದ ಆವರೇಜ್(ಸಜಿಪಿಎ) ಆಲ್ಫಾ ಸೈನ್ ಗ್ರೇಡ್‌ಗೆ ಅನುಗುಣವಾಗಿರುತ್ತದೆ.

೧೨. ವಿದ್ಯಾರ್ಥಿಗಳ ಬೆಂಬಲ:

ಎ. ವಿದ್ಯಾರ್ಥಿ ವೇತನಗಳು, ದತ್ತಿಗಳು, ಬಹುಮಾನಗಳು, ಮನ್ನಾ ಇತ್ಯಾದಿ.

– ಸರ್ಕಾರವು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ರೂ.೭೯,೪೨,೭೨೦ ಅನುದಾನವನ್ನು ಮಂಜೂರು ಮಾಡಿದೆ.

– ಈ ಅನುದಾನದ ಮೂಲಕ ಒಟ್ಟು ೪೯೯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ.

ಬಿ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು (ಗಂಡು ಮತ್ತು ಹೆಣ್ಣು ಮಕ್ಕಳು):

– ಪ್ರಸ್ತುತ ವಿಶ್ವವಿದ್ಯಾನಿಲಯವು ಯಾವುದೇ ಹಾಸ್ಟೆಲ್ ಸೌಲಭ್ಯವನ್ನು ಹೊಂದಿರುವುದಿಲ್ಲ.

ಸಿ. ಗುಂಪು ವಿಮೆಯ: ಸೌಲಭ್ಯ ಒದಗಿಸಿಲ್ಲ.

ಡಿ. ಮಂದಗತಿಯ ಕಲಿಕಾರ್ಥಿಗಳಿಗೆ ಪ್ರೋತ್ಸಾಹ (ತರಬೇತಿ ತರಗತಿಗಳು).

– ಸಂಬಂಧಪಟ್ಟ ವಿಭಾಗಗಳಲ್ಲಿ ಪರಿಹಾರ ಬೋಧನೆ ಕಲ್ಪಿಸಲಾಗಿದೆ.

ಇ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ.

ಪ್ರತಿಭಾನ್ವಿತ ವಿದ್ಯಾರ್ಥಿಗಳು ವಿವಿಧ ರಾಷ್ಟ್ರೀಯ/ ಅಂತರಾಷ್ಟ್ರೀಯ ಕಾರ್ಯಾಗಾರಗಳು/ ವಿಚಾರಸಂಕಿರಣಗಳಲ್ಲಿ ಭಾಗವಹಿಸಲು ರಾಷ್ಟ್ರೀಯ ನಿಯತಕಾಲಿಕೆಗಳು/ ಸಮ್ಮೇಳನಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸುವಂತೆ ಪ್ರೋತ್ಸಾಹಿಸುವ ಯೋಜನೆ.

ಎಫ್. ವಿದ್ಯಾರ್ಥಿವೇತನಗಳು, ಉಚಿತ ವೇತನಗಳು, ಬಹುಮಾನಗಳು ಮತ್ತು ಇತ್ಯಾದಿ. –

–ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಮೂಲಕ ವಿದ್ಯಾರ್ಥಿವೇತನವನ್ನು ನೀಡಲಾಗುತ್ತದೆ.

–ಹಿಂದುಳಿದ ವರ್ಗಗಳ ಇಲಾಖೆಯಿಂದ ಒಬಿಸಿ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತ ವಿಭಾಗದ ವಿದ್ಯಾರ್ಥಿವೇತನ

– ವಿದ್ಯಾರ್ಥಿ ವೇತನಕ್ಕಾಗಿ ವಿವಿಧ ಏಜೆನ್ಸಿಗಳಿಗೆ ಅರ್ಜಿ ಸಲ್ಲಿಸುವಂತೆ ಇತರೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

ಜಿ. ಸಂಶೋದನಾ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು.

– ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನೀಡಬೇಕಾದ ಸಂಶೋಧನಾ ಫೇಲೊಶಿಪ್ ಗಳಿಗೆ ಸಂಬಂಧಿಸಿದಂತೆ ಪೋಷಕ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಜಾರಿಗೊಳಿಸಲು ಮತ್ತು ವಿಸ್ತರಿಸಲು ವಿಶ್ವವಿದ್ಯಾನಿಲಯವು ಪ್ರಯತ್ನಿಸುತ್ತದೆ.

– ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರುವಂತೆ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಪ್ರಾಜೆಕ್ಟ್‌ಥೀಸಿಸ್/ರಿಪೋರ್ಟ್ ಸಿದ್ಧ ಪಡಿಸಲು ತಗುಲುವ ರೂ. ೫೦೦೦ ಮೊತ್ತ ವೆಚ್ಚವನ್ನು ಭರಿಸುವ ಯೋಜನೆಯನ್ನು ಇಲ್ಲಿನ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸಲಾಗಿದೆ.

– ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನೀಡಬೇಕಾದ ಸಂಶೋಧನಾ ಫೇಲೊಶಿಪ್ ಗಳಿಗೆ ಸಂಬಂಧಿಸಿದಂತೆ ಮೂಲ

ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ನಿಬಂದನೆಗಳನ್ನು ಅನುಷ್ಠಾನಗೊಳಿಸಲು ಪರಿಗಣಿಸಲಾಗುವುದು.

- ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪ್ರಾಜೆಕ್ಟ್ ಥೀಸಿಸ್/ವರದಿಗಳು ಸಿದ್ದಪಡಿಸಲು ಮಾಡಿದ ನಿಗದಿತ ಸೀಲಿಂಗ್‌ಗೆ ಒಳಪಟ್ಟಿರುವ ವೆಚ್ಚದ ಮರುಪಾವತಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ವಿಶ್ವವಿದ್ಯಾಲಯದ ನಿಭಂದನೆಗಳನ್ನು ಅಧ್ಯಯನ ಮಾಡಲಾಗುವುದು.

ಹೆಚ್. ಇಂಟರ್‌ನ್‌ಷಿಪ್/ ತರಬೇತಿ/ ಶೈಕ್ಷಣಿಕ ಉದ್ದೇಶಕ್ಕೆ ಕೈಗಾರಿಕೋದ್ಯಮ/ಸಂಸ್ಥೆಗಳ ಭೇಟಿಯ ವ್ಯವಸ್ಥೆ.

ಇಂಟರ್‌ನ್‌ಷಿಪ್/ಪ್ರಾಜೆಕ್ಟ್ ವರ್ಕಗಳನ್ನು ನಿಯೋಜಿಸಲಾಗಿದೆ. ಅದು ಸಾಮಾಜಿಕವಾಗಿ ಪ್ರಸ್ತುತವಾಗಿದೆ ಮತ್ತು ಸಮಾಜದ ಅಭಿವ್ರದ್ದಿಗೆ ಉಪಯಕ್ತವಾಗಿದೆ.

ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸ್ಥಳೀಯ ವ್ಯಾಪಾರ ವ್ಯವಹಾರ/ ಕೈಗಾರಿಕೆ/ ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಲಾಗುವುದು.

ಐ. ಕ್ರೀಡೆ, ಪ್ರದರ್ಶನ ಕಲೆಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ನಾಯಕತ್ವದ ಸಹಜ ಪ್ರತಿಭೆಗಳನ್ನು ಉತ್ತೇಜಿಸುವ ಕ್ರಮಗಳು.

- ಕ್ರೀಡೆ /ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಮೀಸಲಾತಿ ಕಲ್ಪಿಸುವುದು.
- ಪ್ರತಿಭೆಗಳನ್ನು ಗುರುತಿಸಿ ನಗದು ಬಹುಮಾನ ಮತ್ತು ಪದಕಗಳನ್ನು ನೀಡಲಾಗುವುದು.
- ಕ್ರೀಡಾ/ಸಾಂಸ್ಕೃತಿಕ ಚಟುವಟಿಕೆಗಳ ಉತ್ತೇಜನಕ್ಕಾಗಿ ರಜೆ ಸೌಲಭ್ಯಗಳನ್ನು ನೀಡಲಾಗುವುದು.

ಜೆ. ವಿದ್ಯಾರ್ಥಿ ನಿಯತಕಾಲಿಕೆ/ಪತ್ರಿಕೆ: ಲಭ್ಯವಿಲ್ಲ

ಕೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ಮತ್ತು ವಿತರಣೆಯಾದ ವಿದ್ಯಾರ್ಥಿ ವೇತನ ಮತ್ತು ಶಿಷ್ಯವೇತನಗಳು

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದೆ.

ವಿದ್ಯಾರ್ಥಿ ನಿಲಯಗಳ ನಿರ್ವಹಣೆ, ದಾಖಲಾತಿ ಶುಲ್ಕ, ಪರೀಕ್ಷಾ ಶುಲ್ಕ, ಇತರೆ ಮರು ಪಾವತಿಯ ಉದ್ದೇಶದಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ಮತ್ತು ವಿತರಣೆ ಮಾಡಿದ ವಿವರಗಳನ್ನು ಈ ಕೆಳಗೆ ನೀಡಿದೆ.

ಕ್ರ.ಸಂ.	ಪಂಗಡ	ಇಲಾಖೆಯಿಂದ ಬಂದ ಅನುದಾನ	ಮಂಜೂರಾದ ಮೊತ್ತ		ವಿತರಿಸಿದ ಮೊತ್ತ	
1	ಪರಿಶಿಷ್ಟ ಜಾತಿ	ಸಮಾಜ ಕಲ್ಯಾಣ ಇಲಾಖೆ	45	9,77,750/-	43	1,83,320/-
2	ಪರಿಶಿಷ್ಟ ಪಂಗಡ	ಪರಿಶಿಷ್ಟ ಪಂಗಡ ಕ್ಷೇಮಾಭಿವ್ರದ್ಧಿ ನಿರ್ದೇಶನಾಲಯ	18	4,17,270/-	17	90,100/-
3	ಹಿಂದುಳಿದ ವರ್ಗಗಳು	ಹಿ.ವ. ಮತ್ತು ಅ. ಕ. ಇಲಾಖೆ	219	31,73,575/-	208	30,20,630/-

ಸೂಚನೆಗಳು:

೧. ೨೦೧೮–೧೯ನೇ ಸಾಲಿನಲ್ಲಿ ೪೫ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ರೂ.9,77,750-00 ಮಂಜೂರು ಮಾಡಲಾಗಿತ್ತು. ಈ ಮೊತ್ತದ ಪೈಕಿ ರೂ.1,83,320-00 ಅನ್ನು ೪೩ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ೪೩ ವಿದ್ಯಾರ್ಥಿಗಳ ಭೋದನ ಮತ್ತು ಪರೀಕ್ಷಾ ಶುಲ್ಕಗಳನ್ನು ಒಳಗೊಂಡಂತೆ ಉಳಿದ ಮೊತ್ತ ರೂ.7,94,430-00ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಲಾಗಿದೆ. ಉಳಿದ ಮೊತ್ತ ರೂ.70,630-00ಪೈಕಿರೂ.17,440-00ಶ್ರೀ ನವೀನ್ ಕುಮಾರ್‌ಹೆಚ್.ಎನ್.(M.Com.-IB)ಎಂಬ ವಿದ್ಯಾರ್ಥಿಗೆ ಹಾಗೂ ರೂ.53,190-00 ಕುಮಾರಿ. ಇಂದುಮತಿ .(M.Com.-FA)ಎಂಬ ವಿದ್ಯಾರ್ಥಿಗೆ ಸೇರಿರುತ್ತದೆ. ಈ ಇಬ್ಬರೂ ವಿದ್ಯಾರ್ಥಿಗಳು ವ್ಯಾಸಂಗವನ್ನು ನಿಲ್ಲಿಸಿರುವುದರಿಂದ ಒಟ್ಟು ಮೊತ್ತ ರೂ.70,630-00 ನ್ನು ಸಮಾಜ ಕಲ್ಯಾಣ ಇಲಾಖೆಗೆ ಮರುಪಾವತಿಸಲಾಗುವುದು.

೨. ೨೦೧೮–೧೯ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.4,17,270-00ಮಂಜೂರು ಮಾಡಲಾಗಿತ್ತು. ಈ ಮೊತ್ತದ ಪೈಕಿ ರೂ.90,100-00 ಅನ್ನು ೧೭ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಉಳಿದ ಮೊತ್ತ ರೂ.3,27,170-00 ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಲಾಗಿದೆ. ಸೋಮಶೇಖರ್ ಬಿ. ಎಂಬ ವಿದ್ಯಾರ್ಥಿಗೆ ರೂ.5,300-00 ನಿರ್ವಹಣಾ ಭತ್ಯೆ ಮಂಜೂರು ಆಗಿರುವುದಿಲ್ಲ. ಮೊತ್ತ ರೂ.70,630-00 ಪೈಕಿರೂ.17,440-00ಶ್ರೀ ಅನಿಲ್ ಕುಮಾರ್(M.Com.-IB)ಎಂಬ ವಿದ್ಯಾರ್ಥಿಯು ವ್ಯಾಸಂಗವನ್ನು ನಿಲ್ಲಿಸಿರುವುದರಿಂದಆ ವಿದ್ಯಾರ್ಥಿಗೆ ಮಂಜೂರು ಮಾಡಿರುವ ವಿದ್ಯಾರ್ಥಿ ವೇತನ ರೂ.53,190-00 **ಸಮಾಜ ಕಲ್ಯಾಣ ಇಲಾಖೆಗೆ ಮರುಪಾವತಿಸಲಾಗುವುದು**.

೩. ೨೦೧೮–೧೯ನೇ ಸಾಲಿನಲ್ಲಿ 219 ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ರೂ. 31,73,575-00 ಮಂಜೂರು ಮಾಡಲಾಗಿತ್ತು.11ವಿದ್ಯಾರ್ಥಿಗಳು ವ್ಯಾಸಂಗವನ್ನು ನಿಲ್ಲಿಸಿರುವುದರಿಂದ ಆ ವಿದ್ಯಾರ್ಥಿಗಳಿಗೆ ಮಂಜೂರು ಮಾಡಿರುವ ವಿದ್ಯಾರ್ಥಿ ವೇತನ ರೂ.1,53,345-00 ಹಿಂದುಳಿದ ವರ್ಗದ ಕಲ್ಯಾಣ ಇಲಾಖೆಗೆ ಮರುಪಾವತಿಸಲಾಗುವುದು.ರೂ.4,21,830-00 ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಲಾಗಿದೆ.

ಎಲ್. ವಿದ್ಯಾರ್ಥಿ ವಿನಿಮಯ ಕೋರ್ಸ್‌ಗಳು: ಇಲ್ಲ

ಎಮ್. ಅಂತರ್ ರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಒದಗಿಸಿದ ಸೌಲಭ್ಯಗಳು: ಇಲ್ಲ

ಪ್ರಸ್ತುತದಲ್ಲಿ ವಿಶ್ವವಿದ್ಯಾನಿಲಯವು ಅಂತರಾಷ್ಟ್ರೀಯ ವಿದ್ಯಾರ್ಥಿಗಳಿಗಾಗಿ ಸೌಲಭ್ಯಗಳನ್ನು ಹೊಂದಿರುವುದಿಲ್ಲ ಮತ್ತು ವಿಶ್ವವಿದ್ಯಾನಿಲಯದಲ್ಲಿ ಈ ವಿದ್ಯಾರ್ಥಿಗಳ ದಾಖಲಾತಿ ಇರುವುದಿಲ್ಲ. ವಿಶ್ವವಿದ್ಯಾನಿಲಯವು ತನ್ನ ಬೋಧನಾ ಮತ್ತು ಸಂಶೋಧನ ಕಾರ್ಯಕ್ರಮಗಳಲ್ಲಿ ಜಾಗತಿಕ ದೃಷ್ಟಿಕೋನ ಉತ್ತೇಜಿಸಲು ಅಂತರಾಷ್ಟ್ರೀಯ ವಿದ್ಯಾರ್ಥಿ ಕೇಂದ್ರ(ಇಂಟರ್ನ್ಯಾಷನಲ್ ಸ್ಟೂಡೆಂಟ್ ಸೆಂಟರ್) ಸ್ಥಾಪಿಸುವ ಯೋಜನೆಯಲ್ಲಿದೆ.

ಎನ್. ವಿಕಲಚೇತನ (ದಿವ್ಯಾಂಗಿನ್)ರಿಗೆ ಅನುಕೂಲಕರ ಕ್ರಮಗಳು (ವಿಕಲಚೇತನರ ಹಕ್ಕುಗಳ ಕಾಯ್ದೆ, ೨೦೧೬)

- ದಾಖಲಾತಿ/ಉದ್ಯೋಗದಲ್ಲಿ ಮೀಸಲಾತಿಯ ಆದ್ಯತೆಯನ್ನು ಸೇರಿಸಲಾಗಿದೆ.

- ಅಸ್ತಿತ್ವದಲ್ಲಿರುವ ಕಟ್ಟಡಗಳ ದುರಸ್ತಿ ಮತ್ತು ನವೀಕರಣದ ವಿಸ್ತರಣಾ ಯೋಜನೆಯಲ್ಲಿ, ದೈಹಿಕ ಅಂಗವಿಕಲರಿಗೆ ಅಗತ್ಯವಿರುವ ಲಂಬವಾದ ಅಥವಾ ಇಳಿಜಾರಾದ ವೇದಿಕೆ, ಶೌಚಾಲಯ ಲಿಫ್ಟ್ ಇತ್ಯಾದಿ ಸೌಲಭ್ಯಗಳು.

ಓ. ಕುಂದುಕೊರತೆ ನಿವಾರಣಾ ವಿಧಾನಗಳು

ಕುಂದುಕೊರತೆ ನಿವಾರಣಾ ಕಾರ್ಯವಿಧಾನವನ್ನು ನಿಯಮಗಳ ಪ್ರಕಾರ ಕಾರ್ಯಗತಗೊಳಿಸಲು ಯೋಜಿಸಲಾಗಿದೆ.

ಪಿ. ಪ್ಲೇಸ್ಮೆಂಟ್ ಸೆಲ್ (ಉದ್ಯೋಗ ಕೋಶ)ಮತ್ತು ಕ್ಯಾಂಪಸ್ ನೇಮಕಾತಿ

ವಿಶ್ವವಿದ್ಯಾಲಯ ಉದ್ಯೋಗ ಕೋಶ (ಪ್ಲೇಸ್ಮೆಂಟ್ ಸೆಲ್)ಮತ್ತು ಕ್ಯಾಂಪಸ್ ನೇಮಕಾತಿಯನ್ನು ಹೊಂದಿರುವುದಿಲ್ಲ. ಅದಾಗ್ಯೂ ಮುಂಬರುವ ವರ್ಷಗಳಲ್ಲಿಉದ್ಯೋಗ ಕೋಶ (ಪ್ಲೇಸ್ಮೆಂಟ್ ಸೆಲ್)ಪ್ರಾರಂಭಿಸಲು ಪ್ರಯತ್ನಿಸಲಾಗುವುದು.

ಕ್ಯೂ. ಉದ್ಯಮಶೀಲತೆ /ವಿಕಾಸ ಕೋಶ (ಇನ್‌ಕ್ಯುಬೇಷನ್ ಸೆಲ್)

ವಿಶ್ವವಿದ್ಯಾಲಯವು ತನ್ನ ಅಡಿಯಲ್ಲೇ ಕಾರ್ಯನಿರ್ವಹಿಸಲು ವಿಕಾಸ ಕೋಶ (ಇನ್‌ಕ್ಯೂಬೇಶನ್ ಸೆಲ್) ವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ.

ಆರ್. ವಿಶ್ವವಿದ್ಯಾಲಯ ಮತ್ತು ಅದರ ಕಾಲೇಜುಗಳಲ್ಲಿ ಸಂದರ್ಭೋಚಿತ ಅನುಷ್ಠಾನಕ್ಕಾಗಿ ಇತರ ರಾಜ್ಯ/ ರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಂಡಿರುವ ವಿದ್ಯಾರ್ಥಿ ಪರ ಸೇವೆಗಳ ಉತ್ತಮ ಡೇಟಾಬೇಸ್

- ವಿಶ್ವವಿದ್ಯಾಲಯವು ವಿದ್ಯಾರ್ಥಿ ಪರ ಸೇವೆಗಳ ಉತ್ತಮ ಡೇಟಾಬೇಸ್ ಅನ್ನು ರಚಿಸುತ್ತದೆ.

ಎಸ್. ಕ್ಯಾಂಪಸ್‌ನಲ್ಲಿ ಶಿಸ್ತು ಮತ್ತು ಶಾಂತಿಯುತ /ಶೈಕ್ಷಣಿಕ ವಾತಾವರಣವನ್ನು ಕಾಯ್ದುಕೊಳ್ಳುವ ಕ್ರಮಗಳು.

- ನಿರಂತರ ಹಾಜರಾತಿಯನ್ನು ಖಚಿತ ಪಡಿಸಿಕೊಳ್ಳುವುದು.
- ವಿಭಾಗಗಳಲ್ಲಿ ಮುಖ್ಯಸ್ಥರು ವಿದ್ಯಾರ್ಥಿಗಳ ಶಿಸ್ತು, ತರಗತಿ ಮತ್ತು ಇತರ ಶೈಕ್ಷಣಿಕ ಚಟುವಟಿಕೆಗಳ ಆಯೋಜನೆಯನ್ನು ಖಚಿತಪಡಿಸಿಕೊಳ್ಳುವುದು.
- ಶಿಸ್ತು ಸಮಿತಿಗಳು, ಲೈಂಗಿಕ ಕಿರುಕುಳ ಪರಿಹಾರ ಸಮಿತಿ ಮತ್ತು ರ್‍ಯಾಗಿಂಗ್ ವಿರೋಧಿ ಸಮಿತಿಗಳು ಚಾಲ್ತಿಯಲ್ಲಿವೆ.

೧೩. ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ:

ಎ. ಶೈಕ್ಷಣಿಕವಾಗಿ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆಗಳು

– ಪುರುಷರು ಮತ್ತು ಮಹಿಳೆಯರಿಗಾಗಿ ಅಂತರ್ ಕಾಲೇಜು ಮಟ್ಟದಲ್ಲಿ ಕ್ರೀಡೆಗಳು ಮತ್ತು ಆಟಗಳನ್ನು ಆಯೋಜಿಸಲಾಗಿತ್ತು.

– ವಿಶ್ವವಿದ್ಯಾನಿಲಯವು 35 ಅಂತರ್ ವಿಶ್ವವಿದ್ಯಾನಿಲಯ ಸ್ಪರ್ಧೆಗಳ ಪುರುಷರ ವಿಭಾಗದಲ್ಲಿ ಭಾಗವಹಿಸಿದ್ದರು.

– ವಿಶ್ವವಿದ್ಯಾನಿಲಯವು 34 ಮಹಿಳೆಯರ ಅಂತರ್ ವಿಶ್ವವಿದ್ಯಾನಿಲಯ ಸ್ಪರ್ಧೆಗಳಲ್ಲಿ ಭಾಗವಹಿಸಿದೆ.

– ವಿಶ್ವವಿದ್ಯಾನಿಲಯವು 18 ದಕ್ಷಿಣ ವಲಯ/ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಸ್ಪರ್ಧೆಗಳ ಪುರುಷರ ವಿಭಾಗದಲ್ಲಿ ಭಾಗವಹಿಸಿದ್ದರು.

– ವಿಶ್ವವಿದ್ಯಾನಿಲಯವು 9 ದಕ್ಷಿಣ ವಲಯ/ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಸ್ಪರ್ಧೆಗಳ ಮಹಿಳೆಯರ ವಿಭಾಗದಲ್ಲಿ ಭಾಗವಹಿಸಿದ್ದರು.

– ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಸ್ಪರ್ಧೆಗಳಲ್ಲಿ ಮಹಿಳಾ ತಂಡಗಳು ಭಾಗವಹಿಸಿವೆ.

ಬಿ. ಕೆಎಸ್‌ಯು ಕಾಯ್ದೆ, ೨೦೦೦ ಪ್ರಕಾರ ಅಕಾಡೆಮಿಕ್ ಕೌನ್ಸಿಲ್‌ಗೆ ನಾಮ ನಿರ್ದೇಶನ.

ಕಾಯ್ದೆಗಳ ಅನುಮೋದನೆಯ ನಂತರ ಅಗತ್ಯ ಕಾನೂನುಗಳ ಕರಡನ್ನು ಸಿದ್ಧಪಡಿಸಲಾಗುವುದು. ವಿದ್ಯಾರ್ಥಿಗಳನ್ನು ಅಕಾಡೆಮಿಕ್ ಕೌನ್ಸಿಲ್‌ಗೆ ನಾಮ ನಿರ್ದೇಶನ ಮಾಡುವ ಕಾರ್ಯವು ಪ್ರಾರಂಭವಾಗುವುದು.

ಸಿ. ಎನ್ ಸಿ ಸಿ, ಎನ್‌ಎಸ್‌ಎಸ್, ವೈ ಆರ್ ಸಿ ಇತ್ಯಾದಿ

ಎನ್‌ಎಸ್‌ಎಸ್

ಅ) ಎನ್ ಎಸ್ ಎಸ್ ನಲ್ಲಿ ಭಾಗವಹಿಸಿದ ಕಾಲೇಜುಗಳ ಸಂಖ್ಯೆ ಮತ್ತು ಘಟಕಗಳ ಸಂಖ್ಯೆ: ೧೧೫ ಕಾಲೇಜುಗಳು, ೧೧೦ ಘಟಕಗಳು

ಆ) ಎನ್ ಎಸ್ ಎಸ್ ನಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳ ಸಂಖ್ಯೆ: ೧೫,೪೬೦ (ಪುರುಷರು–೯,೫೩೧ ಮತ್ತು ಮಹಿಳೆಯರು–೫೯೨೯)

ಇ) ವಿಶೇಷ ಶಿಬಿರಗಳ ಸಂಖ್ಯೆ: ೯೦ ವಿಶೇಷ ಶಿಬಿರಗಳು, ಭಾಗವಹಿಸಿದವರ ಸಂಖ್ಯೆ:೪,೫೦೦ (ಪುರುಷರು:೨,೭೫೦ ಮಹಿಳೆಯರು:೨,೨೫೦)

ಈ) ಈ ವರ್ಷದಲ್ಲಿ ಇದಕ್ಕೆ ಲಭ್ಯವಿರುವ ಒಟ್ಟು ನಿಧಿ/ ದೇಣಿಗೆ :

ಎ) ನಿರಂತರ ಚಟುವಟಿಕೆಗಳು:

ಮೊದಲ ಕಂತು :ರೂ 15,75,000/-

ಬಿ) ವಿಶೇಷ ಶಿಬಿರ ಕಾರ್ಯಕ್ರಮ

ಮೊದಲ ಕಂತು :ರೂ.14,17,500/-

ವಿಶ್ವವಿದ್ಯಾನಿಲಯ /ರಾಜ್ಯ/ ರಾಷ್ಟ್ರೀಯ/ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಆಯೋಜನೆ ಗೊಂಡ ಕಾರ್ಯಕ್ರಮಗಳು/ಸ್ಪರ್ಧೆಗಳು, ಗಳಿಸಿದ ಬಹುಮಾನಗಳು ಮತ್ತು ಪ್ರಶಸ್ತಿಗಳು ಮತ್ತು ಭಾಗವಹಿಸುವಿಕೆ.

ಎ. ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳು ಆಯೋಜಿಸಿದ್ದ ೨ ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳಲ್ಲಿ ವಿಶ್ವವಿದ್ಯಾನಿಲಯದ ಎನ್ ಎಸ್ ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು.

ಬಿ. ಏರ್ ಪೋರ್ಸ ಸ್ಟೇಷನ್‌ನಲಿಆಯೋಜಿಸಲಾಗಿದ್ದ ಏರೋ ಇಂಡಿಯಾ 2019 ರಲ್ಲಿ ಎನ್.ಎಸ್.ಎಸ್ ಸಂಯೋಜನಾಧಿಕಾರಿ ನೋಡಲ್ ಅಧಿಕಾರಿಯಾಗಿ7ದಿನ ಭಾಗವಹಿಸಿದ್ದರು.

ಸಿ. ಏರ್ ಪೋರ್ಸ ಸ್ಟೇಷನ್‌ನಲ್ಲಿ ಆಯೋಜಿಸಲಾಗಿದ್ದ ಏರೋ ಇಂಡಿಯಾ 2019 ರಲ್ಲಿ ಎನ್ ಎಸ್ ಎಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಭಾಗವಹಿಸಿದ್ದರು.

ಡಿ. ಮತದಾನದಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಪಾದಯಾತ್ರೆ ಮತ್ತು ತರಬೇತಿ ಕಾರ್ಯಕ್ರಮವನ್ನು ಜ್ಞಾನಜ್ಯೋತಿ ಅಡಿಟೋರಿಯಂನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 3000 ಎನ್ ಎಸ್ ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು.ಬಿಬಿಎಂಪಿ ಆಯುಕ್ತರು, ಚುನಾವಣಾ ನೋಡಲ್ ಅಧಿಕಾರಿಗಳು, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

ಇ. ಸಂಯೋಜಿತ ಕಾಲೇಜುಗಳ ಎಲ್ಲಾ ಎನ್‌ಎಸ್‌ಎಸ್ ಘಟಕಗಳು ೨೦೧೮ರ ಸಂಸತ್ ಚುನಾವಣೆಯಲ್ಲಿ ಮತದಾನದ ಕುರಿತು ಅರಿವು ಮೂಡಿಸಲು ರ್‍ಯಾಲಿಗಳನ್ನು, ಪಾದಯಾತ್ರೆ, ಕಾರ್ಯಕ್ರಮಗಳನ್ನು ಆಯೋಜಿಸಿದ್ದವು.

ಎಫ್. ಎನ್ ಎಸ್ ಎಸ್ ಘಟಕಗಳು ಮತದಾನದ ಕುರಿತು ಅರಿವು ಮೂಡಿಸಲು ರಸಪ್ರಶ್ನೆ ಕಾರ್ಯಕ್ರಮಗಳನ್ನು ಆಯೋಜಿಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಿವೆ.

ಜಿ. ಎನ್ ಎಸ್ ಎಸ್ ಕಾರ್ಯಕ್ರಮದ ಅಧಿಕಾರಿಗಳ ಸಭೆಯನ್ನು ಎಲ್ಲಾ ಕಾರ್ಯಕ್ರಮದ ಅಧಿಕಾರಿಗಳಿಗೆ ನಡೆಸಲಾಯಿತು.

ಹೆಚ್. ಪಿ.ಎಫ್.ಎಂ.ಎಸ್ ತರಬೇತಿಯನ್ನು ಎಲ್ಲಾ ಕಾರ್ಯಕ್ರಮ ಅಧಿಕಾರಿಗಳಿಗೆ ಅಯೋಜಿಸಲಾಗಿತ್ತು.

ಐ. ಸಂಯೋಜಿತ ಕಾಲೇಜುಗಳ ಎನ್.ಎಸ್.ಎಸ್. ಘಟಕಗಳಿಂದ ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆ ಕಟ್ಟಡಗಳಿಗೆ ಬಣ್ಣ ಬಳಿಯಲಾಗಿದೆ.

ಜೆ. ರಾಜ್ಯ ಸರ್ಕಾರ ಅಯೋಜಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಚರಣೆಯಲ್ಲಿ ೧೫೦೦ಕ್ಕೂ ಹೆಚ್ಚು ಎನ್.ಎಸ್.ಎಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಮತ್ತು ಉದ್ಯಮಶೀಲತೆಯನ್ನು ಬೆಳೆಸುವ ಕ್ರಮಗಳು

ಸ್ವಯಂಸೇವಕರಲ್ಲಿ ನಿಸ್ವಾರ್ಥ ಸಮುದಾಯ ಸೇವಾ ಮನೋಭಾವವನ್ನು ಉತ್ತೇಜಿಸುವ ಸಲುವಾಗಿ, ೨೦೧೮ –೨೦೧೯ ರ ಅಧಿವೇಶನದಲ್ಲಿ ೧೧೫ ಕಾಲೇಜುಗಳಿಂದ ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಕೋಶದ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಡ್ಡಾಯ ಸ್ವಯಂಸೇವೆಯ ಪರಿಕಲ್ಪನೆಯನ್ನು ಪರಿಚಯಿಸಲಾಯಿತು ಮತ್ತು ಬೆಕೇವಿಯು ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಇದನ್ನು ಕಡ್ಡಾಯಗೊಳಿಸಲಾಯಿತು. ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ಚಟುವಟಿಕೆಗಳ ಸರಿಯಾದ ಮೇಲ್ವಿಚಾರಣೆಯನ್ನು ಈ ಕಾರ್ಯ ವಿಧಾನದ ಮೂಲಕ ಖಾತ್ರಿ ಪಡಿಸಲಾಯಿತು.

- **ಯೋಗ ಮತ್ತು ವ್ಯಕ್ತಿತ್ವ ವಿಕಸನ:**
  - ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಕೋಶವು ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಯೋಗ ಶಿಬಿರವನ್ನು ಆಯೋಜಿಸಿದ್ದು, 1500ಕ್ಕೂ ಹೆಚ್ಚು ಎನ್.ಎಸ್.ಎಸ್. ಸ್ವಯಂ ಸೇವಕರು ಇದರಲ್ಲಿ ಭಾಗವಹಿಸಿ ಇದರ ಲಾಭ ಪಡೆದರು.
  - ಸಂಯೋಜಿತ ಕಾಲೇಜುಗಳ ಎಲ್ಲಾ ಎನ್‌ಎಸ್‌ಎಸ್ ಘಟಕಗಳು **೨೧ ಜೂನ್ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸಿದವು.**
  - ವಿಶೇಷ ಶಿಬಿರಗಳಲ್ಲಿ ಎನ್‌ಎಸ್‌ಎಸ್ ಘಟಕಗಳಿಂದ ವ್ಯಕ್ತಿತ್ವವಿಕಸನ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

- **ಸಾಕ್ಷರತಾ ಕಾರ್ಯಕ್ರಮ:**
  - ಎನ್‌ಎಸ್‌ಎಸ್ ಘಟಕಗಳು ತಮ್ಮ ವಿಶೇಷ ವಾರ್ಷಿಕ ಶಿಬಿರಗಳ ಸಂದರ್ಭದಲ್ಲಿ ಗ್ರಾಮಸ್ಥರು, ಕೊಳಗೇರಿ ನಿವಾಸಿಗಳು ಮತ್ತು ಯುವಕರಿಗೆ ಸಾಕ್ಷರತಾ ಕಾರ್ಯಕ್ರಮಗಳನ್ನು ಆಯೋಜಿಸಿವೆ.

- **ವ್ಯಕ್ತಿತ್ವ ವಿಕಾಸ:**
  - ಸ್ವಯಂಸೇವಕರ ವ್ಯಕ್ತಿತ್ವ ವಿಕಸನಕ್ಕಾಗಿ ವಿಚಾರ ಸಂಕಿರಣಗಳು, ಉಪನ್ಯಾಸಗಳು, ಕಾರ್ಯಾಗಾರಗಳು ಮತ್ತು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
  - ಸ್ವಯಂಸೇವಕರು ವಿವಿಧ ರಾಜ್ಯಗಳ ಯುವಜನೋತ್ಸವದಲ್ಲಿ ಭಾಗವಹಿಸಿದ್ದರು.

- **<u>ದತ್ತು ಗ್ರಾಮಗಳಲ್ಲಿನ ಚಟುವಟಿಕೆಗಳು:</u>**
- **ಸಸಿ ನೆಡುವುದು**
  - ೨೦೦೦ಕ್ಕೂ ಹೆಚ್ಚಿನ ಸಸಿಗಳನ್ನು ವಿವಿಧ ಸ್ಥಳಗಳಲ್ಲಿ ನೆಡಲಾಯಿತು.
- **ಸಾಮಾಜಿಕ ಆರ್ಥಿಕ ಸಮೀಕ್ಷೆ:**
  ಸಂಯೋಜಿತ ಕಾಲೇಜುಗಳಿಂದ ಎಲ್ಲಾ ದತ್ತು ಗ್ರಾಮಗಳಲ್ಲಿ ಸಮೀಕ್ಷೆ ನಡೆಸಲಾಯಿತು.
- **ಶ್ರಮದಾನ ಚಟುವಟಿಕೆಗಳು:**
  ಕಾಲೇಜುಗಳು, ಹತ್ತಿರದ ಪ್ರದೇಶಗಳು ಮತ್ತು ಎಲ್ಲಾ ದತ್ತು ಪಡೆದ ಸ್ಥಳಗಳಲ್ಲಿ ಎಲ್ಲಾ ಕಾಲೇಜುಗಳ ವಿಶೇಷ ಶಿಬಿರಗಳ ಸಂದರ್ಭದಲ್ಲಿ ನಿಯಮಿತವಾಗಿ ಶ್ರಮದಾನ ಮಾಡಲಾಯಿತು.
- **ರಕ್ತದಾನ ಮತ್ತು ನೇತ್ರದಾನ**
  - ಕಾಲೇಜು ಎನ್ ಎಸ್ ಎಸ್ ಘಟಕಗಳು ವಿವಿಧ ಸ್ಥಳಗಳಲ್ಲಿ 80ಶಿಬಿರಗಳನ್ನು ಆಯೋಜಿಸಿದ್ದವು.
- **ಜನಸಂಖ್ಯಾ ಶಿಕ್ಷಣ:**
  ಕುಟುಂಬ, ಸಮುದಾಯ, ರಾಷ್ಟ್ರ ಮತ್ತು ಪ್ರಪಂಚದ ಜನಸಂಖ್ಯೆಯ ಪರಿಸ್ಥಿತಿ ಮತ್ತು ಈ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಮತ್ತು ಜನಸಂಖ್ಯೆ ಪರಿಸ್ಥಿತಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ತರ್ಕಬದ್ಧ ಮತ್ತು ಜವಾಬ್ದಾರಿಯುತ ಮನೋಭಾವ ಮತ್ತು ವರ್ತನೆ ಮತ್ತು ಆರ್ಥಿಕ ಅಭಿವೃದ್ಧಿ, ಜನಸಂಖ್ಯೆ ಮತ್ತು ಸಾಮಾಜಿಕ ಅಭಿವೃದ್ಧಿ, ಜನಸಂಖ್ಯೆ ಮತ್ತು ಪರಿಸರ–ಸಂಪನ್ಮೂಲಗಳು, ಜನಸಂಖ್ಯೆ ಮತ್ತು ಕುಟುಂಬ ಜೀವನ, ಆರೋಗ್ಯ ಮತ್ತು ಪೌಷ್ಠಿಕತೆ, ಹದಿಹರೆಯದವರಲ್ಲಿ ಕಂಡುಬರುತ್ತಿರುವ ಸಮಸ್ಯೆಗಳು, ಸರ್ಕಾರದ ಯೋಜನೆಗಳ ಕುರಿತು ಅಧ್ಯಯನ ನಡೆಸುವ ಒಂದು ಶೈಕ್ಷಣಿಕ ಕಾರ್ಯಕ್ರಮವನ್ನು ಕಾಲೇಜುಗಳು ಆಯೋಜಿಸಿವೆ.
- **ಏಡ್ಸ್ ಜಾಗೃತಿ ಕಾರ್ಯಕ್ರಮ:**
  - ಬೆಕೇವಿಯ ಕಾಲೇಜುಗಳ ಎನ್ಎಸ್ಸ್ ಘಟಕಗಳಿಂದ ಡಿಸೆಂಬರ್ ೧ರಂದು ಏಡ್ಸ್ ಜಾಗೃತಿ ದಿನವನ್ನು ಆಚರಿಸಲಾಯಿತು. ಏಡ್ಸ್ ಕುರಿತು ತಿಳುವಳಿಕೆ ನೀಡಲು ಉಪನ್ಯಾಸಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.
- **ಆರೋಗ್ಯ ಶಿಬಿರ:**
  - ಕಾಲೇಜು ಎನ್ಎಸ್ಎಸ್ ಘಟಕಗಳು ವಿವಿಧ ಪ್ರದೇಶಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿವೆ.
- **ಸಾಂಸ್ಕೃತಿಕ ಚಟುವಟಿಕೆಗಳು:**
  - ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಲು ಎನ್ಎಸ್ಎಸ್ ಘಟಕಗಳು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿವೆ.

- **ಕಾಲೇಜು ಕ್ಯಾಂಪಸ್‌ನ ಸುಂದರಗೊಳಿಸುವಿಕೆ:**
  ಕೇಂದ್ರೀಯ ಕಾಲೇಜು ಆವರಣವನ್ನು ಸುಂದರಗೊಳಿಸಲು ವಿಶ್ವವಿದ್ಯಾನಿಲಯವಿಶೇಷ ಶಿಬಿರಗಳನ್ನು ಆಯೋಜಿಸಿತ್ತು ಮತ್ತು ಹೆಚ್ಚಿನ ಕಾಲೇಜುಗಳಲ್ಲಿ ಎನ್ ಎಸ್ ಎಸ್ ಘಟಕಗಳು ಅವರಣ ಮತ್ತು ಕೆಲವು ಕಾಲೇಜುಗಳ ಸಾರ್ವಜನಿಕ ಉದ್ಯಾನಗಳನ್ನು ಸುಂದರಗೊಳಿಸಲು ಮುಂದಾಗಿವೆ.

- **ಯುವಜನ ವಿನಿಮಯ ಕಾರ್ಯಕ್ರಮ:**
    - ಎನ್‌ಎಸ್‌ಎಸ್ ಸ್ವಯಂಸೇವಕರು ತಮ್ಮ ವಿಚಾರಗಳು, ಸಂಸ್ಕೃತಿಗಳನ್ನು ವಿನಿಮಯ ಮಾಡಿಕೊಳ್ಳಲು ಎನ್. ಐ.ಸಿಗಳಲ್ಲಿ ಬಾಗವಹಿಸಿದ್ದರು.
- **ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ:**

  ಎನ್‌ಎಸ್‌ಎಸ್ ಸ್ವಯಂಸೇವಕರು ಸಾಂಸ್ಕೃತಿಕ ವಿನಿಮಯಕ್ಕಾಗಿ ಎನ್ ಐಸಿಯಲ್ಲಿ ಭಾಗವಹಿಸಿದ್ದರು ಮತ್ತು ಕಾಲೇಜಿನ ವಾರ್ಷಿಕ ವಿಶೇಷ ಶಿಬಿರ ಗಳಲ್ಲಿ ಸಾಂಸ್ಕೃತಿಕವಾಗಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಪ್ರತಿದಿನ ಸಂಜೆಯಲ್ಲಿ ಆದ್ಯತೆ ನೀಡಲಾಗುತ್ತದೆ.

  ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಘಟಕದ ವತಿಯಿಂದ ಜಾನಪದದ ಮೇಲೆ ಜಿಲ್ಲಾ ಮಟ್ಟದ ಸಾಂಸ್ಕೃತಿಕವಿನಿಮಯ ಕಾರ್ಯಕ್ರಮವನ್ನು ಗುರುನಾನಕ್ ಭವನದಲ್ಲಿ ಆಯೋಜಿಸಲಾಗಿತ್ತು.
- **ಸ್ವಚ್ಛತಾ ಪಕ್ವಾರ(೧ ಆಗಸ್ಟ್ ೨೦೧೮ ರಿಂದ ೧೫ ಆಗಸ್ಟ್ ೨೦೧೮):**

  ವಿಚಾರ ಸಂಕಿರಣಗಳು, ಸಂಯೋಜಿತ ಸ್ಥಳಗಳ ಸ್ವಚ್ಛತೆ ಮತ್ತು ಕಲ್ಯಾಣ ಏಜೆನ್ಸಿಗಳಿಗೆ ಜಾಗೃತಿ ಮತ್ತು ಭೇಟಿಗಳಂತಹ ಸರಣಿ ಚಟುವಟಿಕೆಗಳನ್ನು ಆಯೋಜಿಸುವುದರ ಮೂಲಕ ಸ್ವಚ್ಛತಾ ಪಕ್ವಾರವನ್ನು ಆಚರಿಸಲಾಯಿತು.
- **ಯುವ ಮತದಾರರ ದಾಖಲಾತಿಗಾಗಿ ತರಬೇತಿ:**

  ಎನ್ ಎಸ್ ಎಸ್ ಕೋಶವು ಬೆಂಗಳೂರು ಚುನಾವಣಾ ಆಯೋಗದ ಸಹಯೋಗದಲ್ಲಿ ಎನ್‌ಎಸ್‌ಎಸ್ ಸ್ವಯಂಸೇವಕರಿಗೆ ಯುವ ಮತದಾರರ ದಾಖಲಾತಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಶಿಬಿರದ ಸಂದರ್ಭದಲ್ಲಿ ಕಾಲೇಜಿನಲ್ಲಿ ಫ್ಲಾಶ್‌ಮಾಬ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.
- **ಎನ್‌ಎಸ್‌ಎಸ್ ದಿನದ ಆಚರಣೆ (೨೪ ಸಪ್ಟೆಂಬರ್ ೨೦೧೮):**

  ಎನ್‌ಎಸ್‌ಎಸ್ ಘಟಕಗಳಲ್ಲಿ ಆಯೋಜಿಸಲಾದ ಬೀದಿ ನಾಟಕಗಳು, ಜಾಗೃತಿ ಮತ್ತು ಘೋಷವಾಕ್ಯ ಬರೆಯುವ ಸ್ಪರ್ಧೆಗಳ ಮೂಲಕ ಎನ್‌ಎಸ್‌ಎಸ್ ದಿನವನ್ನು ಆಚರಿಸಲಾಯಿತು.
- **ಗಣರಾಜ್ಯೋತ್ಸವ (೨೬ ಜನವರಿ ೨೦೧೯):**

  ವಿಶ್ವವಿದ್ಯಾಲಯ ಮತ್ತು ಎಲ್ಲಾ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು.
- **ರಾಷ್ಟ್ರೀಯ ಯುವ ದಿನಾಚರಣೆ (೧೨ ಜನವರಿ ೨೦೧೯):**

  ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಚರಿಸಲಾಯಿತು. ಎನ್.ಎಸ್.ಎಸ್ ಸ್ವಯಂಸೇವಕರು ವಿವಿಧ ಕಾಲೇಜುಗಳಿಗೆ ಜನ ಸಮೂಹವನ್ನು ಸಜ್ಜುಗೊಳಿಸಿದರು.
- **ರಾಷ್ಟ್ರೀಯ ಮತದಾರರ ದಿನ (೨೫ ಜನವರಿ ೨೦೧೯):**

  ಸ್ವಯಂಸೇವಕರಲ್ಲಿ ಪ್ರಜಾಪ್ರಭುತ್ವ ನಿಯಮಗಳನ್ನು ಬಲಪಡಿಸುವ ಸಲುವಾಗಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ಸ್ವಯಂ ಸೇವಕರು ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವದ ಪರಂಪರೆಯನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಮಾಡಿದರು ಮತ್ತು ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- **ವಿಶ್ವ ಜಲ ದಿನ (೨೨ ಮಾರ್ಚ್ ೨೦೧೯):**ಜಲ ಸಮಸ್ಯೆಯ ಬಗ್ಗೆ ಜಾಗೃತಿಯನ್ನು ಉತ್ತೇಜಿಸಲು ಮತ್ತು ಸಿಹಿ ನೀರಿನ ಸಂಪನ್ಮೂಲಗಳ ಸಮರ್ಥ ನಿರ್ವಹಣೆಗಾಗಿ ವಿಶ್ವಜಲ ದಿನವನ್ನು ಆಚರಿಸಲಾಯಿತು. ಸ್ವಯಂ ಸೇವಕರು ತಮ್ಮ ತಮ್ಮ ಕಾಲೇಜುಗಳಲ್ಲಿ ಜಲ ಸಂರಕ್ಷಣೆಯ ಪ್ರತಿಜ್ಞೆಯನ್ನು ಮಾಡಿದರು.
- **ಯುವ ರೆಡ್ ಕ್ರಾಸ್:**

  ಏಪ್ರಿಲ್2018 ರಿಂದ ಮಾರ್ಚ್ 2019 ರವರೆಗಿನ ಯುವ ರೆಡ್ ಕ್ರಾಸ್‌ನ ವರದಿ:

- ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ವಿಭಾಗವು ೩೦ ಮತ್ತು ೩೧ನೇ ಆಗಸ್ಟ್ ೨೦೧೮ ರಂದು ಸೆನೆಟ್ ಸಭಾಂಗಣದಲ್ಲಿ ಯುವ ರೆಡ್ ಕ್ರಾಸ್‌ನ ಕಾರ್ಯಕ್ರಮ ಅಧಿಕಾರಿಗಳ ಸಭೆಯನ್ನು ನಡೆಸಿತು. ಇದರಲ್ಲಿ ೭೮ ಅಧಿಕಾರಿಗಳು ಭಾಗವಹಿಸಿದ್ದರು.
- ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಮಂಡ್ಯ ಜಿಲ್ಲಾ ಘಟಕ,ಮಂಡ್ಯ ಅವರು 19-8-2018 ರಿಂದ 21-8-2018 ರವರೆಗೆ ಆಯೋಜಿಸಿದ್ದ ರಾಜ್ಯ ಮಟ್ಟದ ವಿಪತ್ತು ಪ್ರತಿಕ್ರಿಯೆ ತಂಡ ತರಬೇತಿಯಲ್ಲಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ೨ ವೈ.ಆರ್.ಸಿ ಆಧಿಕಾರಿಗಳು ಮತ್ತು ೨೨ ಸ್ವಯಂ ಸೇವಕರು ಭಾಗವಹಿಸಿದ್ದರು.
- ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ರೆಸ್ ಕೋರ್ಸ್ ರೋಡ್‌ರವರು ಆಯೋಜಿಸಿದ್ದ ವಿಶ್ವ ವಿಪತ್ತು ಕಡಿಮೆ ಮಾಡುವ ದಿನದ ಕಾರ್ಯಕ್ರಮದಲ್ಲಿ ೩೪ ವೈ.ಆರ್.ಸಿ ಸ್ವಯಂ ಸೇವಕರು ಭಾಗವಹಿಸಿದ್ದರು. ಡಿಸೆಂಬರ್ ೨೦೧೮ ರಲ್ಲಿ ಒಂದು ವಾರಗಳ ಕಾಲ ವಿಶ್ವವಿದ್ಯಾನಿಲಯ ಮಟ್ಟದ ರಸ ಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು.
- ವಿಶ್ವವಿದ್ಯಾನಿಲಯ ಮಟ್ಟದ ರಸ ಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು.
- Cardio Pulmonary Resuscitation (CPR)ತರಬೇತಿಯನ್ನು ಸಮಾಜ ಕಾರ್ಯ ವಿಭಾಗದವರು ೨೩ ರಂದು ಆಯೋಜಿಸಿದ್ದರು. ಇದರಲ್ಲಿ ೩ ವೈ.ಆರ್.ಸಿ ಆಧಿಕಾರಿಗಳುಪಾಲ್ಗೊಂಡಿದ್ದರು.
- ಶ್ರೀ ನಟರಾಜ ವಸತಿ ಶಾಲೆ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮೈಸೂರು ಅವರು ದಿನಾಂಕ: ೮ ರಿಂದ ೧೨ ಜನವರಿ ೨೦೧೯ ರವರೆಗೆ ಆಯೋಜಿಸಿದ್ದ ಬಾಲಕಿಯರ ಪ್ರೇರಣ ಶಿಬಿರದಲ್ಲಿ ೧೪ವೈ.ಆರ್.ಸಿ ಸ್ವಯಂ ಸೇವಕರು ಪಾಲ್ಗೊಂಡಿದ್ದರು.
- ರೆಡ್ ಕ್ರಾಸ್ ಭವನ, ಬೆಂಗಳೂರುನಲ್ಲಿ ದಿನಾಂಕ: 12-1-2019 ರಂದು ನಡೆದ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ೧೪ವೈ.ಆರ್.ಸಿ ಸ್ವಯಂ ಸೇವಕರು ಒಬ್ಬರು ವೈ.ಆರ್.ಸಿ ಆಧಿಕಾರಿ ಪಾಲ್ಗೊಂಡಿದ್ದರು.
- ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ಕ್ಯಾಂಪಸ್ ನಲ್ಲಿ ೮ ರಿಂದ ೧೨ ಫೆಬ್ರವರಿ ೨೦೧೯ ರವರೆಗೆ ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರೇರಣ ಶಿಬಿರದಲ್ಲಿ ೫ವೈ.ಆರ್.ಸಿ ಸ್ವಯಂ ಸೇವಕರು ಪಾಲ್ಗೊಂಡಿದ್ದರು.
- ೦೮ ವೈ.ಆರ್.ಸಿ ಸ್ವಯಂ ಸೇವಕರು ದಿನಾಂಕ:೨೩-೦೩-೨೦೧೯ ರಿಂದ ೨೭-೦೩-೨೦೧೯ರವರೆಗೆ ಹಂಪಿಯಲ್ಲಿ ನಡೆದ ರಾಷ್ಟ್ರೀಯಯುವ ರೆಡ್ ಕ್ರಾಸ್ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಡಿ, ವಿದ್ಯಾರ್ಥಿಗಳಲ್ಲಿ ನಾಯಕತ್ವ ಮತ್ತು ಉದ್ಯಮಶೀಲತೆಯನ್ನು ಬೆಳೆಸುವ ಕ್ರಮಗಳು

- ಯೋಗ ಮತ್ತು ವ್ಯಕ್ತಿತ್ವ ವಿಕಸನ:
- ಸಾಕ್ಷರತಾ ಕಾರ್ಯಕ್ರಮ
- ವ್ಯಕ್ತಿತ್ವ ವಿಕಸನ
- ದತ್ತು ಗ್ರಾಮಗಳಲ್ಲಿನ ಚಟುವಟಿಕೆಗಳು
- ಸಸಿ ನೆಡುವುದು
- ಸಾಮಾಜಿಕ ಆರ್ಥಿಕ ಸಮೀಕ್ಷೆ:
- ಶ್ರಮದಾನ ಚಟುವಟಿಕೆಗಳು:
- ರಕ್ತದಾನ ಮತ್ತು ನೇತ್ರದಾನ
- ಜನಸಂಖ್ಯಾ ಶಿಕ್ಷಣ
- ಏಡ್ಸ್ ಜಾಗೃತಿ ಕಾರ್ಯಕ್ರಮ
- ಆರೋಗ್ಯ ಶಿಬಿರ

- ಸಾಂಸ್ಕೃತಿಕ ಚಟುವಟಿಕೆಗಳು
- ಚಾರಣ ಕಾರ್ಯಕ್ರಮ
- ಕಾಲೇಜು ಕ್ಯಾಂಪಸ್‌ನ ಸುಂದರಗೊಳಿಸುವಿಕೆ
- ಯುವಜನ ವಿನಿಮಯ ಕಾರ್ಯಕ್ರಮ
- ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ
  ಹೋಮ್ ಸ್ಟೇ ಕಾರ್ಯಕ್ರಮ
- ಬೇಸಿಗೆ ಶಿಬಿರ

.೧೪. ಹಳೆಯ ವಿದ್ಯಾರ್ಥಿಗಳು

ಹಳೆಯ ವಿದ್ಯಾರ್ಥಿಗಳ ಸಂಘ: ಸ್ನಾತಕೋತ್ತರ ವಿದ್ಯಾರ್ಥಿಗಳ ಬ್ಯಾಚ್ ಈ ವರ್ಷವಷ್ಟೇ ತೇರ್ಗಡೆಯಾಗಿ ಹೊರಬರುತ್ತಿರುವುದರಿಂದ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಲು ಪ್ರಯತ್ನಿಸಲಾಗುವುದು.

ಎ) ಸಾಧನೆಗೈದ ಹಳೆಯ ವಿದ್ಯಾರ್ಥಿಗಳು: ಇಲ್ಲ

ಬಿ) ಡೇಟಾಬೇಸ್ ಸ್ಥಾಪಿಸಲಾಗಿದೆಯೇ: ಸ್ಥಾಪಿಸಲಾಗುವುದು

ಸಿ) ನೋಂದಾಯಿತ ಸಂಘವು ಅಸ್ತಿತ್ವದಲ್ಲಿದೆಯೇ

ಮತ್ತು ಕಾರ್ಯ ನಿರ್ವಹಿಸುತ್ತಿದೆಯೇ? ಇನ್ನೂ ನೋಂದಾಯಿಸಬೇಕಿದೆ.

ಆರಂಭಿಸಬೇಕಾಗಿರುವ ಚಟುವಟಿಕೆಗಳು:

- ಎಲ್ಲಾ ಹಳೆಯ ವಿದ್ಯಾರ್ಥಿಗಳ ಡೇಟಾಬೇಸ್ ರಚಿಸುವುದು.
- ಹಳೆಯ ವಿದ್ಯಾರ್ಥಿಗಳೊಂದಿಗೆ ನಿಯಮಿತ ಸಂಪರ್ಕವನ್ನು ಸ್ಥಾಪಿಸಿ ನಿರ್ವಹಿಸುವುದು.
- ವಿವಿಧ ಪ್ರದೇಶಗಳಲ್ಲಿರುವ ಹಳೆಯ ವಿದ್ಯಾರ್ಥಿಗಳ ನಡುವೆ ಸಂಪರ್ಕ ಕಲ್ಪಿಸಲು ಪ್ರಯತ್ನಿಸುವುದು.
- ವಿಶಿಷ್ಟ ಕೆಲಸಕ್ಕಾಗಿ ಹಳೆಯ ವಿದ್ಯಾರ್ಥಿಗಳನ್ನು ಗೌರವಿಸುವುದು.
- ವಿಶ್ವವಿದ್ಯಾಲಯದ ಚಿತ್ರಣವನ್ನು ರೂಪಿಸಲು ಹಳೆಯ ವಿದ್ಯಾರ್ಥಿಗಳ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು ಮತ್ತು ಸಹಕಾರಿಯಾಗುವುದು.
- ಹಳೆಯ ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ಶೈಕ್ಷಣಿಕ ಸಂಬಂಧ ವೃದ್ಧಿಸುವುದು ಮತ್ತು ಉತ್ತೇಜಿಸುವುದು.
- ಫೆಲೋಶಿಪ್ ಮತ್ತು ಪ್ರವೇಶ ಸೇರಿದಂತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕ ಸಾಧಿಸಲು ಹಳೆಯ ವಿದ್ಯಾರ್ಥಿಗಳ ಸಹಕಾರವನ್ನು ಪಡೆಯುವುದು.
- ಶೈಕ್ಷಣಿಕ ಹುದ್ದೆಗಳ ಭರ್ತಿ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳ ಮಾರ್ಗದರ್ಶನ ಮತ್ತು ಸಹಾಯವನ್ನು ಕೋರುವುದು.
- ವಿಶ್ವವಿದ್ಯಾನಿಲಯ ಅಸ್ಥಿತ್ವಕ್ಕೆ ಎಲ್ಲಾ ಹಳೆಯ ವಿದ್ಯಾರ್ಥಿಗಳ ಕೊಡುಗೆಗಳಿಗೆ ಪರಿಣಾಮಕಾರಿಯಾದ ಕೊಂಡಿಯಾಗಿ ಕಾರ್ಯ ನಿರ್ವಹಿಸುವುದು.
- ಶೈಕ್ಷಣಿಕ ಮತ್ತು ಉದ್ಯೋಗದ ಅನುಕೂಲತೆಗಳಿಗೆ ಕೈಗಾರಿಕೋದ್ಯಮ ಮತ್ತು ವಿಶ್ವವಿದ್ಯಾಲಯದ ನಡುವೆ ಜಾಲವಾಗಿ ಕಾರ್ಯ ನಿರ್ವಹಿಸುವುದು.

ಡಿ) ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ಹಳೆಯ ವಿದ್ಯಾರ್ಥಿಗಳು/ ಸಂಘ ಭಾಗಿಯಾಗಲು ರೂಪಿಸಬೇಕಿರುವ ತಂತ್ರಗಳು.

– ಔದ್ಯೋಗಿಕ ಅವಕಾಶಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳು

– ಶಿಕ್ಷಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳು

– ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು

– ಕೈಗಾರಿಕೋದ್ಯಮದೊಂದಿಗೆ ಸಂಪರ್ಕ ಹಾಗೂ ಉದ್ಯೋಗ ಮೇಳಗಳು

೧೫. ಸಂಯೋಜನೆ:

* ಸಂಯೋಜಿತ ಕಾಲೇಜುಗಳ ಸಂಖ್ಯೆ– 233

* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸೇರಿದಂತೆ ನ್ಯಾಕ್ ಶ್ರೇಣಿಗಳನ್ನು ಹೊಂದಿರುವ ಸಂಯೋಜಿತ ಕಾಲೇಜುಗಳ ಸಂಖ್ಯೆ: 53

* ಶ್ರೇಷ್ಟತೆಯ ಸಂಭಾವ್ಯತೆ ಇರುವ ಕಾಲೇಜುಗಳ ಸಂಖ್ಯೆ:

* ನ್ಯಾಕ್ ಶ್ರೇಣಿಗಳನ್ನು ಹೊಂದಿರುವ ಸ್ವಾಯತ್ತ ಕಾಲೇಜುಗಳ ಸಂಖ್ಯೆ: 10

* ಕೆ.ಎಸ್‌ಯು ಕಾಯ್ದೆ ೨೦೦೦ರ ಕಡ್ಡಾಯ ಅನುಸರಣೆ: 233

೧೬. ಕಾಲೇಜು ಅಭಿವೃದ್ಧಿ ಮಂಡಳ: ಇನ್ನೂ ಪ್ರಾರಂಭಿಸಬೇಕಿದೆ

ಕಾಲೇಜು ಅಭಿವೃದ್ಧಿ ಮಂಡಳಿಯು (ಸಿಡಿಸಿ) ಕಾಲೇಜುಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲು ಶೈಕ್ಷಣಿಕ ಮಾರ್ಗದರ್ಶನ ಒದಗಿಸುವುದು. ಯುಜಿಸಿ ಮಾರ್ಗಸೂಚಿಗೆ ಅನುಗುಣವಾಗಿ ಮತ್ತು ವಿಶ್ವವಿದ್ಯಾಲಯದ ಸಮ್ಮತಿ ಮೇರೆಗೆ ಕಾಲೇಜುಗಳಲ್ಲಿನ ಶೈಕ್ಷಣೀಕ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಸೂಕ್ತ ಮೂಲಸೌಕರ್ಯ ನಿರ್ಮಾಣಕ್ಕೆ ಸರಿಯಾದ ಯೋಜನೆ ರೂಪಿಸಲು ಅಗತ್ಯವಾದ ಕ್ರಮಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಂಘಟಿಸಲು ಅದು ಉತ್ತೇಜಿಸುತ್ತದೆ. ಅದು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳು ಹಾಗೂ ಯುಜಿಸಿ, ಎಐಸಿಟಿಇ, ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಕಾಲೇಜುಗಳ ನಡುವೆ ಮಹತ್ವದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ.

ಕಾಲೇಜು ಅಭಿವೃದ್ಧಿ ಮಂಡಳ: ಕಾರ್ಯಚಟುವಟಿಕೆಗಳು:

– ಕಾಲೇಜುಗಳ ಅಭಿವೃದ್ಧಿಗೆ ಸರಿಯಾದ ದೃಷ್ಟಿಕೋನ ಯೋಜನೆ ತಯಾರಿಸಲು ಮತ್ತು ಕಾಲೇಜುಗಳ ಸಮಗ್ರ ಅಭಿವೃದ್ಧಿ, ಪ್ರಾದೇಶಿಕ ತಾರತಮ್ಯಗಳ ನಿವಾರಣೆ ಹಾಗೂ ಸ್ವಾಯುತ್ತ ಸ್ಥಾನಮಾನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡುವುದು.

– ಶೈಕ್ಷಣಿಕ, ಆಡಳಿತಾತ್ಮಕ, ಆನ್‌ಲೈನ್ ಮತ್ತು ಮೂಲಸೌಕರ್ಯ ಸೌಲಭ್ಯಗಳ ಸುಧಾರಣೆ ಮತ್ತು ನಿರ್ವಹಣೆ ನಿಟ್ಟಿನಲ್ಲಿ ಕಾಲೇಜುಗಳಿಗೆ ತಮ್ಮ ಸಾಮರ್ಥ್ಯಗಳನ್ನು ಮನಗಾಣಲು ನೆರವಾಗುವುದು.

– ವಿಶ್ವವಿದ್ಯಾಲಯದ ಸಂಯೋಜನೆಯ ನೀತಿಯನ್ನು ತರ್ಕಸಮ್ಮತಗೊಳಿಸುವ ಹಾಗೂ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಕ್ಕೆ ನೆರವಾಗುವುದು.

- ಕಾಲೇಜುಗಳನ್ನು ವಿಶ್ವವಿದ್ಯಾಲಯದ ನಿಕಾಯಗಳಿಗೆ ನಿಕಟಗೊಳಿಸಲು ಹಾಗೂ ಹೆಚ್ಚಿನ ಶೈಕ್ಷಣಿಕ ಸಂವಾದ ಮತ್ತು ಸಹಕಾರಕ್ಕಾಗಿ ಪ್ರಯೋಜನಕಾರಿ ಸಂಪರ್ಕ ಕೊಂಡಿಗಳನ್ನು ಬೆಸೆಯುವುದು.
- ಮಾಹಿತಿ ಅನಾವರಣದ ಮೂಲಕ ಯುಜಿಸಿ ಹಾಗೂ ಇತರೆ ಧನಸಹಾಯ ಸಂಸ್ಥೆಗಳ ಸಮಕ್ಷಮದಲ್ಲಿ ವಿವಿಧ ಅಭಿವೃದ್ಧಿ ಅನುದಾನ ಮತ್ತು ಕಾರ್ಯಕ್ರಮಗಳಿಗೆ ಪ್ರಸ್ತಾವನೆಗಳನ್ನು ರೂಪಿಸಲು ನೆರವಾಗುವುದ ಹಾಗೂ ಈ ಅನುದಾನ ಮತ್ತು ಯೋಜನೆಗಳ ಪರಿಣಾಮಕಾರಿ ಬಳಕೆಯ ನಿಟ್ಟಿನಲ್ಲಿ ಮಾರ್ಗದರ್ಶನ ಮಾಡುವುದು.
- ಕಾಲೇಜುಗಳಿಂದ ಯುಜಿಸಿ ಮತ್ತು ಇತರೆ ಧನಸಹಾಯ ಸಂಸ್ಥೆಗಳ ಅನುದಾನದ ಸಮರ್ಪಕ ಬಳಕೆಯನ್ನು ಖಾತರಿಪಡಿಸಲು ಕಾಲೇಜುಗಳಿಗೆ ಭೇಟಿಯಿತ್ತು ಯೋಜನೆಗಳ ಪ್ರಗತಿ ಹಾಗೂ ಕಾಲೇಜುಗಳ ವರದಿಗಳನ್ನು ಪರಾಮರ್ಶಿಸಿ ಅಂತಹ ಅನುದಾನ ಸಂಸ್ಥೆಗಳಿಗೆ ಅವುಗಳು ಕಾಲೇಜುಗಳಿಗೆ ಬಿಡುಗಡೆ ಮಾಡಿದ ಅನುದಾನದ ಬಳಕೆ ಸರ್ಟಿಫಿಕೇಟ್‌ಗಳು ಮತ್ತು ಇತರೆ ದಾಖಲೆಗಳನ್ನು ಸಲ್ಲಿಸುವುದು.
- ಕಾಲೇಜುಗಳ ಅಧ್ಯಾಪಕರನ್ನು ಪಿಎಚ್‌ಡಿ ಹಾಗೂ ಸ್ನಾತಕೋತ್ತರ ಡಾಕ್ಟರೇಟ್ ಅಧ್ಯಯನಕ್ಕಾಗಿ ಯುಜಿಸಿಯ ನಿಕಾಯ ಅಭಿವೃದ್ಧಿ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಲು, ಅಂತಾರಾಷ್ಟ್ರೀಯ ಸಮ್ಮೇಳನ/ವಿಚಾರ ಸಂಕಿರಣಗಳು ಮುಂತಾದ ವೇದಿಕೆಗಳಲ್ಲಿ ಪ್ರಬಂಧ ಮಂಡಿಸಲು ಹಾಗೂ ಯುಜಿಸಿ ಮತ್ತು ಇತರೆ ಅನುದಾನ ಸಂಸ್ಥೆಗಳ ಕಿರು ಅಥವಾ ಪ್ರಮುಖ ಸಂಶೋಧನಾ ಯೋಜನೆಗಳಿಗೆ ಅರ್ಜಿ ಸಲ್ಲಿಸುವಂತೆ ಪ್ರೋತ್ಸಾಹಿಸುವುದು.
- ಕಾಲೇಜುಗಳನ್ನು ಪ್ರವೇಶಕ್ಕೆ ಸಂಬಂಧಿಸಿದಂತೆ ಒಳಗೊಳ್ಳುವಿಕೆ ನೀತಿಗಳನ್ನು ಅಳವಡಿಸಿಕೊಳ್ಳಲು, ಗುಣಮಟ್ಟದ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಾಮಾಜಿಕ ಸಂವೇದನಾಶೀಲತೆ ಬೆಳೆಸಲು ಪ್ರೋತ್ಸಾಹಿಸುವುದು.
- ಅನುದಾನ ಸಂಸ್ಥೆಗಳು ಕಾಲೇಜುಗಳಿಗೆ ಒದಗಿಸಿರುವ ಬೆಂಬಲ ಯೋಜನೆಗಳು ಮತ್ತು ಅವುಗಳ ಬಳಕೆ ಮತ್ತು ಪರಿಣಾಮಗಳ ಕುರಿತು ದತ್ತಾಂಶ ಶೇಖರಣೆ ಮಾಡುವುದು.
- ಪ್ರತಿ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಕಾಲೇಜುಗಳ ಅಧ್ಯಾಪಕರ ಡೇಟಾ ವಿವರ ನಿರ್ವಹಿಸುವುದು.
- ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅಥವಾ ಸಾಮಾಜಿಕ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ನಿರ್ವಹಣೆಗಾಗಿ ವಿಶ್ವವಿದ್ಯಾಲಯವು ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಇತರೆ ಕಾರ್ಯಗಳನ್ನು ನೆರವೇರಿಸುವುದು.

---

೧೭. ಪಠ್ಯಕ್ರಮ ವಿನ್ಯಾಸ ಮತ್ತು ಅಭಿವೃದ್ಧಿ:

೧. ಭಾಷಾ ಸಬಲೀಕರಣ – ಕನ್ನಡ ಭಾಷೆಗೆ ಪ್ರೋತ್ಸಾಹ

೨. ಅಂತಾರಾಷ್ಟ್ರೀಯ ಭಾಷೆಗಳ ಕೇಂದ್ರ – ಹೌದು, ವಿಶ್ವವಿದ್ಯಾಲಯವು ಸಹಾಯಕ ಪ್ರಾಧ್ಯಾಪಕರ ನೇತೃತ್ವದಲ್ಲಿ ಜಾಗತಿಕ ಭಾಷೆಗಳ ಕೇಂದ್ರವನ್ನು ಹೊಂದಿದೆ.

೩. ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಕ್ಕೆ ಪೂರಕವಾಗುವಂತೆ ಹೊಸ ಮತ್ತು ವಿಶೇಷವಾದ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ.

ಹೊಸ ಸ್ನಾತಕೋತ್ತರ ಪದವಿ ವಿಭಾಗಗಳನ್ನು ಆರಂಭಿಸಲು ಸರ್ಕಾರ ಅನುಮೋದನೆ ನೀಡಿದ್ದು ಮುಂದಿನ ವರ್ಷದಿಂದ ಇವುಗಳನ್ನು ಪ್ರಾರಂಭಿಸಲಾಗುವುದು

೧) ಪರಿಸರ ಮತ್ತು ಹವಾಮಾನ ಬದಲಾವಣೆ
೨) ತಂತ್ರಜ್ಞಾನ
೩) ಕಲೆ ಮತ್ತು ಸೌಂದರ್ಯಶಾಸ್ತ್ರ

೪) ನಗರ ಅಧ್ಯಯನ ಮತ್ತು ಯೋಜನೆ
೫) ಕಾನೂನು ಮತ್ತು ಸಾರ್ವಜನಿಕ ನೀತಿ

೪. ಅಂತರ್‌ಶಿಸ್ತೀಯ ಕೋರ್ಸ್‌ಗಳ ಪರಿಚಯ: ಇಲ್ಲ

೫. ಪ್ರವೇಶಾತಿ ನಿಗಧಿಪಡಿಸಿರುವ ಮತ್ತು ಕಡಿಮೆ ಪ್ರವೇಶ ಹೊಂದಿರುವ ಕೋರ್ಸ್‌ಗಳ ವಿವರ

ಕಡಿಮೆ ಪ್ರವೇಶ ಸಮಸ್ಯೆಯನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೌನ್ಸೆಲಿಂಗ್ ಸಂದರ್ಭದಲ್ಲಿ ಆಯಾಯ ಕೋರ್ಸ್‌ಗಳಿಗೆ ಸಂಬಂಧಿಸಿದ ಅಧ್ಯಾಪಕರೊಂದಿಗೆ ವಿದ್ಯಾರ್ಥಿಗಳು ಮಾತನಾಡಲು ಅವಕಾಶ ನೀಡಲಾಗಿದೆ. ಈ ಸಂವಾದದ ಸಮಯದಲ್ಲಿ ಉದ್ಯೋಗಾವಕಾಶಗಳು ಮತ್ತು ಉನ್ನತ ಅಧ್ಯಯನಗಳು (ಸಂಶೋಧನೆ) ಕುರಿತು ಮಾಹಿತಿ ನೀಡಲಾಗುವುದು.

೬. ವಿಷಯಾಧಾರಿತ ಉಪನ್ಯಾಸಗಳು/ಕಾರ್ಯಾಗಾರಗಳು, ಮೌಲ್ಯವರ್ಧಿತ ಕೋರ್ಸ್‌ಗಳು ಮತ್ತು ಆನ್‌ಲೈನ್ ಸಂಪನ್ಮೂಲಗಳ ಮೂಲಕ (MOOCs etc) ಪಠ್ಯಕ್ರಮವನ್ನು ಅಭಿವೃದ್ಧಿಗೊಳಿಸುವುದು:

- ವಿಭಾಗಗಳು ಈಗಾಗಲೇ MOOC ಕೋರ್ಸ್‌ಗಳನ್ನು ಪಟ್ಟಿ ಮಾಡಿದ್ದು, ಇವುಗಳನ್ನೇ ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಲಾಗುವುದು.
- MOOC ಕಾರ್ಯಕ್ರಮಗಳು/GIAN ಕಾರ್ಯಕ್ರಮಗಳನ್ನು ಮೇಲ್ವಿಚಾರಣೆ ಮಾಡಲು ವಿಶ್ವವಿದ್ಯಾಲಯ ಮಟ್ಟದಲ್ಲಿ ಒಬ್ಬ ಸಂಯೋಜಕರನ್ನು ನೇಮಕ ಮಾಡಲಾಗುವುದು.

೧೮. ಪ್ರಸಾರಾಂಗ ಮತ್ತು ಮುದ್ರಣಾಲಯ:

ಒಪ್ಪಂದದ ಆಧಾರದ ಮೇಲೆ ಸಂಯೋಜಕರಾಗಿ ನೇಮಕಗೊಂಡವರು ಮಧ್ಯದಲ್ಲಿಯೇ ಸೇವೆಯಿಂದ ಬಿಟ್ಟು ಹೋದ ಕಾರಣ, ಹೊಸಬರನ್ನು ನೇಮಿಸಬೇಕು/ನಾಮನಿರ್ದೇಶನ ಮಾಡಬೇಕಾಗಿದೆ.

ಉದ್ದೇಶಗಳು:

- ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಸಾಹಿತ್ಯದ ಬಗ್ಗೆ ಅರಿವು ಮೂಡಿಸುವುದು.
- ವಿಶೇಷ ಸಂಶೋಧನಾ ಸಂಪುಟಗಳು, ವಿಶೇಷ ಉಪನ್ಯಾಸಗಳು ಮತ್ತು ಪಠ್ಯ ಪುಸ್ತಕಗಳನ್ನು ಪ್ರಕಟಿಸುವುದು.
- ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಮತ್ತು ಕನ್ನಡದಲ್ಲಿ ಪರೀಕ್ಷೆಗಳನ್ನು ಬರೆಯುವವರ ಅನುಕೂಲಕ್ಕಾಗಿ ಮೂಲ ಪರಾಮರ್ಶೆ/ಪಠ್ಯ ಪುಸ್ತಕಗಳು/ಶ್ರೇಷ್ಠ ಸಂಪುಟಗಳ ಅನುವಾದವನ್ನು ಕನ್ನಡದಲ್ಲಿ ಪ್ರಕಟಿಸುವುದು.
- ಶ್ರವಣ – ದೃಶ್ಯ ಮಾದ್ಯಮ, ಸುಧಾರಣಾ ಕಲೆಗಳು ಮತ್ತು ನಿಯಮಿತ ಪುಸ್ತಕಗಳ ಪ್ರದರ್ಶನಗಳು ಮತ್ತು ಮಾರಾಟ ಮೇಳಗಳನ್ನು ಆಯೋಜಿಸುವ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶದ ಜನರಲ್ಲಿ ಜ್ಞಾನವನ್ನು ಪ್ರಸಾರ ಮಾಡುವುದು.
- ಮೌಖಿಕ ಮಹಾಕಾವ್ಯಗಳು, ಜಾನಪದ ಹಾಡುಗಳು, ಪ್ರದರ್ಶನ ಕಲೆಗಳ, ಧಾರ್ಮಿಕ ಅಂಶಗಳಿರುವ ಶ್ರೇಷ್ಠ ಮೌಖಿಕ ಸಂಪ್ರದಾಯಗಳನ್ನು ದಾಖಲಿಸುವುದು.
- ಅಳಿವಿನಂಚಿನಲ್ಲಿರುವ ಜಾನಪದ ಸಾಹಿತ್ಯವನ್ನು ಸಂರಕ್ಷಿಸುವುದು.

– ಈ ಪ್ರದೇಶದ ಸಾಂಸ್ಕೃತಿಕ ಅಸ್ಮಿತೆಯನ್ನು ಶೋಧಿಸಲು ಲಿಂಗ ಆಧಾರಿತ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಅಧ್ಯಯನ ಮಾಡುವುದು.

ಪಠ್ಯ ಪುಸ್ತಕಗಳ ಸರಣಿ ಪ್ರಕಟಣೆಗಳು:

ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ಮಲಯಾಳಂ, ತೆಲುಗಿನ ಇ–ಪಠ್ಯ ಪುಸ್ತಕವನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಕೂಲಕ್ಕಾಗಿ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲಾಗಿದೆ.

. ೧೯. ಶುಲ್ಕದ ವಿವರ:

೨೦೧೮–೧೯ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾನಿಲಯದ ವಿಭಾಗಗಳು ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಸಾಮಾನ್ಯ ಮತ್ತು ಸ್ವ–ಹಣಕಾಸು ವಿಭಾಗದ ಅಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪ್ರವೇಶಕ್ಕಾಗಿ ವಿಧಿಸುವ ಸಾಮಾನ್ಯ ಶುಲ್ಕದ ವಿವರಗಳು

ಎ) ಮೊದಲ ವರ್ಷದ ಎಂ.ಎ.,/ಎಂಎಸ್‌ಡಬ್ಲ್ಯೂ/ಎಂ.ಎ (ಫ್ರೆಂಚ್/ಸ್ಪ್ಯಾನಿಷ್/ಜರ್ಮನ್) ಎಂ.ಎ ಸಂಯೋಜಿತ (ಫ್ರೆಂಚ್)

ಕ್ರ ಸಂ	ಶುಲ್ಕ ವಿವರಗಳು	ಎಂ.ಎ/ಎಂಬಿಎ	ಎಂಎಸ್‌ಡಬ್ಲ್ಯೂ	ಎಂ.ಎ., ಫ್ರೆಂಚ್/ ಸ್ಪ್ಯಾನಿಶ್/ ಜರ್ಮನ್	ಐದು ವರ್ಷ ಸಂಯೋಜಿತ
೧	ನೋಂದಣಿ	550	550	550	550
೨	ಪ್ರವೇಶ	550	550	550	550
೩	ವಾರ್ಷಿಕ ಬೋಧನಾ ಶುಲ್ಕ	4785	4785	11715	29315
೪	ಪ್ರಯೋಗಾಲಯ ಶುಲ್ಕ (ಕ್ಷೇತ್ರ ಅಧ್ಯಯನ)	-	3465	--	-
೫	ವೈದ್ಯಕೀಯ ಸೌಲಭ್ಯ	110	110	110	110
೬	ಕ್ರೀಡೆ	1100	1100	1100	1100
೭	ಗ್ರಂಥಾಲಯ	550	550	550	550
೮	ವಿದ್ಯಾರ್ಥಿ ಚಟುವಟಿಕೆ	110	110	110	110
೯	ವಿದ್ಯಾರ್ಥಿ ಗುರುತಿನ ಪತ್ರ	110	110	110	110
೧೦	ಸಾಂಸ್ಕೃತಿಕ ಚಟುವಟಿಕೆಗಳು	110	110	110	110
೧೧	ಬಳಕೆ ಶುಲ್ಕ ಕಂಪ್ಯೂಟರ್ ಇಂಟರ್‌ನೆಟ್	110	110	110	110
೧೨	ಎನ್‌ಎಫ್‌ಟಿಡಬ್ಲ್ಯೂ*	20	20	20	20
೧೩	ಕೆಎಸ್‌ಟಿಬಿಎಫ್*	27	27	27	27
೧೪	ಕೆಎಸ್‌ಎಸ್‌ಡಬ್ಲ್ಯೂಎಫ್*	28	28	28	28
೧೫	ಎನ್.ಎಸ್.ಎಸ್.				
	ಒಟ್ಟು	9160	11625	17400	35000

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿದಂತೆ.

ಬಿ) ಮೊದಲ ವರ್ಷದ ಎಂ.ಎಸ್‌ಸಿ./ಎಂ.ಎಸ್‌ಸಿ(ಬಿಟಿ/ಎಂ.ಬಿ) ಎಂ.ಎಸ್‌ಸಿ(ದೃಶ್ಯಮಾಧ್ಯಮ/ ಮನೋವೈಜ್ಞಾನಿಕ ಕೌನ್ಸೆಲಿಂಗ್/ ಮನೋವಿಜ್ಞಾನ) ಎಂಎಸ್‌ಸಿ(ಎಫ್‌ಎಡಿ) ಎಂ.ಸಿ.ಎ.

ಕ್ರ. ಸಂ.	ಶುಲ್ಕ ವಿವರಗಳು	ನಿಗದಿಪಡಿಸಬೇಕಿರುವ ವಾರ್ಷಿಕವಾರು ಶುಲ್ಕ				
		ಎಂ.ಎಸ್‌ಸಿ.	ಎಂ.ಎಸ್‌ಸಿ. (ಬಿಟಿ/ಎಂಬಿ)	ಎಂ.ಎಸ್‌ಸಿ. (ದೃಶ್ಯ ಮಾಧ್ಯಮ/ ಮನೋವೈಜ್ಞಾನಿಕ ಕೌನ್ಸೆಲಿಂಗ್, ಮನೋವಿಜ್ಞಾನ)	ಎಂ.ಎಸ್‌ಸಿ. (ಎಫ್‌ಡಿಎ)	ಎಂ.ಸಿ.ಎ.
೧	ನೋಂದಣಿ	550	550	550	550	550
೨	ಪ್ರವೇಶ	550	550	550	550	550
೩	ವಾರ್ಷಿಕ ಬೋಧನಾ ಶುಲ್ಕ	4,785	11,000	16,500	19,800	22,000
೪	ಪ್ರಯೋಗಾಲಯ ಶುಲ್ಕ	2,310	6,600	11,000	2,310	2,310
೫	ವೈದ್ಯಕೀಯ ರಕ್ಷಣೆ	110	110	110	550	110
೬	ಕ್ರೀಡೆ	1,100	1,100	1,100	550	1,100
೭	ಗ್ರಂಥಾಲಯ	550	550	550	550	550
೮	ವಿದ್ಯಾರ್ಥಿ ಚಟುವಟಿಕೆ	110	110	110	550	110
೯	ವಿದ್ಯಾರ್ಥಿ ಗುರುತಿನ ಪತ್ರ	110	110	110	550	110
೧೦	ಸಾಂಸ್ಕೃತಿಕ ಚಟುವಟಿಕೆಗಳು	110	110	110	550	110
೧೧	ಬಳಕೆ ಶುಲ್ಕ ಕಂಪ್ಯೂಟರ್ ಇಂಟರ್‌ನೆಟ್	110	110	110	550	110
೧೨	ಎನ್‌ಎಫ್‌ಟಿಡಬ್ಲ್ಯೂ*	20	20	20	550	20
೧೩	ಕೆಎಸ್‌ಟಿಬಿಎಫ್*	27	27	27	550	27
೧೪	ಕೆಎಸ್‌ಎಸ್‌ಡಬ್ಲ್ಯೂಎಫ್*	28	28	28	550	28
೧೫	ಎನ್.ಎಸ್.ಎಸ್.					
	ಒಟ್ಟು	**10470**	**20975**	**30875**	**27685**	**27685**

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗಧಿಪಡಿಸಿದಂತೆ.

ಸಿ) ಮೊದಲ ವರ್ಷದ ಎಂ.ಕಾಂ./ಎಂ.ಕಾಂ(ಎಫ್‌ಎ/ಐಬಿ)ಎಂಟಿಟಿಎಂ/ಎಂ.ಬಿ.ಎ.(ಹಗಲು) ಎಂ.ಬಿ.ಎ.(ಸಂಜೆ)

ಕ್ರ ಸಂ	ಶುಲ್ಕ ವಿವರಗಳು	ನಿಗದಿಪಡಿಸಬೇಕಿರುವ ವಾರ್ಷಿಕವಾರು ಶುಲ್ಕ				
		ಎಂ. ಕಾಂ	ಎಂ.ಕಾಂ (ಎಫ್‌ಎ/ ಐಬಿ)	ಎಂಟಿಟಿಬಿ	ಎಂ.ಬಿ.ಎ. (ಹಗಲು)	ಎಂ.ಬಿ.ಎ. (ಸಂಜೆ)
೧	ನೋಂದಣಿ	550	550	550	550	550
೨	ಪ್ರವೇಶ	550	550	550	550	550
೩	ವಾರ್ಷಿಕ ಬೋಧನಾ ಶುಲ್ಕ	4785	44000	44000	30800	33000
೪	ಪ್ರಯೋಗಾಲಯ ಶುಲ್ಕ	2310	-	-	-	-
೫	ಗ್ರಂಥಾಲಯ	550	550	550	550	550

೬	ಕ್ರೀಡೆ	1100	1100	1100	1100	1100
೭	ವೈದ್ಯಕೀಯ ಸೌಲಭ್ಯ	110	110	110	110	110
೮	ವಿದ್ಯಾರ್ಥಿ ಚಟುವಟಿಕೆ	110	110	110	110	110
೯	ವಿದ್ಯಾರ್ಥಿ ಗುರುತಿನ ಪತ್ರ	110	110	110	110	110
೧೦	ಸಾಂಸ್ಕೃತಿಕ ಚಟುವಟಿಕೆಗಳು	110	110	110	110	110
೧೧	ಬಳಕೆ ಶುಲ್ಕ (ಕಂಪ್ಯೂಟರ್ ಇಂಟರ್‌ನೆಟ್)	110	110	110	110	110
೧೨	ಎನ್‌ಎಫ್‌ಟಿಡಬ್ಲ್ಯೂ*	20	20	20	20	20
೧೩	ಕೆಟಿಬಿಎಫ್*	27	27	27	27	27
೧೪	ಕೆಎಸ್‌ಎಸ್‌ಡಬ್ಲ್ಯೂಎಫ್	29	29	29	29	29
೧೫	ಎನ್.ಎಸ್.ಎಸ್.					
	ಒಟ್ಟು	10,470	47,375	47,375	34,175	36,375

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿದಂತೆ.

ಡಿ) ಕೆಳಗಿನ ಸ್ನಾತಕೋತ್ತರ ಪದವಿಗಳ ಪೇಮೆಂಟ್ ಸೀಟುಗಳಿಗೆ ವಿಧಿಸಬೇಕಾದ ಶುಲ್ಕದ ವಿವರಗಳು ೨೦೧೯–೨೦ (೧ ವರ್ಷ)

ಕ್ರ ಸಂ	ಶುಲ್ಕದ ವಿವರಗಳು	ವಾರ್ಷಿಕ ಶುಲ್ಕ (೨ ಸೆಮಿಸ್ಟರ್‌ಗಳಿಗೆ)	
		ಸಾಮಾನ್ಯ ವರ್ಗ ರೂ.	ಎಸ್‌ಸಿ/ಎಸ್‌ಟಿ ವರ್ಗ ರೂ.
೧	ಎಂಎಸ್‌ಸಿ ರಾಸಾಯನಶಾಸ್ತ್ರ	50,000	25,000
೨	ಎಂಎಸ್‌ಸಿ ಜೀವರಸಾಯನಶಾಸ್ತ್ರ	50,000	25,000
೩	ಎಂಎಸ್‌ಸಿ ಗಣಿತಶಾಸ್ತ್ರ	50,000	25,000
೪	ಎಂಎಸ್‌ಸಿ ಎಫ್‌ಎಡಿ	50,000	25,000
೫	ಎಂಎಸ್‌ಸಿ ಭೌತಶಾಸ್ತ್ರ	-	-
೬	ಎಂಎಸ್‌ಸಿ ಸಸ್ಯಶಾಸ್ತ್ರ	-	-
೭	ಎಂಎಸ್‌ಸಿ ಪ್ರಾಣಿಶಾಸ್ತ್ರ	-	-
೮	ಎಂ.ಕಾಂ	60,500	30,250
೯	ಎಂಎಸ್‌ಡಬ್ಲ್ಯೂ	60,000	30,000
೧೦	ಎಂ.ಎ ಇಂಗ್ಲೀಷ್	40,000	20,000
೧೧	ಎಂ.ಎ ಕನ್ನಡ	40,000	20,000
೧೨	ಎಂ.ಎ. ಅರ್ಥಶಾಸ್ತ್ರ	50,000	25,000
೧೩	ಎಂ.ಎ. ರಾಜ್ಯಶಾಸ್ತ್ರ	40,000	20,000
೧೪	ಎಂ.ಎ. ಸಮಾಜಶಾಸ್ತ್ರ	40,000	20,000
೧೫	ಎಂ.ಎ. ಇತಿಹಾಸ	40,000	20,000
೧೬	ಎಂ.ಎ. ಪ್ರವಾಸೋದ್ಯಮ ಮತ್ತು ಸಮೂಹ ಸಂವಹನ	-	-
೧೭	ಎಂ.ಎ. ಜಾಗತಿಕ ಭಾಷೆಗಳು		

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿದಂತೆ.

ಇ) ಪಿ ಜಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಕ್ಕಾಗಿ ವಿಧಿಸುವ ಸಾಮಾನ್ಯ ಶುಲ್ಕದ ವಿವರಗಳು.

ಕ್ರ. ಸಂ	ಶುಲ್ಕ ವಿವರಗಳು	ಪಿ.ಜಿ. ಡಿಪ್ಲೋಮಾ ಕೋರ್ಸ್‌ಗೆ ನಿಗದಿಸಬೇಕಾದ ಶುಲ್ಕ (ರೂ)	ಸರ್ಟಿಫಿಕೇಟ್ ಕೋರ್ಸ್‌ಗೆ ನಿಗದಿಸಬೇಕಾದ ಶುಲ್ಕ (ರೂ)
೧	ನೋಂದಣಿ	1650	-
೨	ಪ್ರವೇಶ	825	-
೩	ವಾರ್ಷಿಕ ಬೋಧನಾ ಶುಲ್ಕ	-	-
೪	ಪ್ರಯೋಗಾಲಯ ಶುಲ್ಕ	-	-
೫	ವೈದ್ಯಕೀಯ ಸೇವೆ	-	-
೬	ಕ್ರೀಡೆ	1100	-
೭	ಗ್ರಂಥಾಲಯ	-	-
೮	ವಿದ್ಯಾರ್ಥಿ ಚಟುವಟಿಕೆ	-	-
೯	ವಿದ್ಯಾರ್ಥಿ ಗುರುತಿನ ಪತ್ರ	-	-
೧೦	ಸಾಂಸ್ಕೃತಿಕ ಚಟುವಟಿಕೆಗಳು	-	-
೧೧	ಬಳಕೆ ಶುಲ್ಕ ಕಂಪ್ಯೂಟರ್/ಇಂಟರ್‌ನೆಟ್	-	-
	ಒಟ್ಟು	3575	-

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗಧಿಪಡಿಸಿದಂತೆ.

ಎಫ್) ಅಂತರ್‌ರಾಷ್ಟ್ರೀಯ ಸ್ನಾತಕ ಪದವಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭರಿಸಬೇಕಾದ ಶುಲ್ಕ

ಶುಲ್ಕದ ವಿವರಗಳು	ಕಲಾ ವಿಭಾಗ ಮತ್ತು ವಾಣಿಜ್ಯ ವಿಭಾಗ	ವಿಜ್ಞಾನ ವಿಭಾಗ
ನೋಂದಣಿ	400/-	4,260/-
ಪ್ರವೇಶ	2,930/-	2,930/-
ಕ್ರೀಡಾ ಶುಲ್ಕ (ಒಟ್ಟು ರೂ.೭೩೨/– ಮೊತ್ತದ ಶೇ.೭೦% ರಷ್ಟು ವಿಶ್ವವಿದ್ಯಾನಿಲಯದ ನಿಧಿಗೆ)	470/-	470/-
ಸೇವಾ ಶುಲ್ಕ	7,320/-	7,320/-
ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ	140/-	140/-
ಅರ್ಹತಾ ಶುಲ್ಕ	8,790/-	8,790/-
ಒಟ್ಟು	**20,050/-**	**23,910/-**

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿದಂತೆ.

ಜಿ. ವಿಶ್ವವಿದ್ಯಾನಿಲಯಕ್ಕೆ ಅಂತಾರಾಷ್ಟ್ರೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾವತಿಸಬೇಕಾದ ಕಡ್ಡಾಯ ಶುಲ್ಕ – ಪಿ.ಜಿ.

ಶುಲ್ಕದ ವಿವರಗಳು	ಎಂ.ಎ., ಎಂ.ಎಸ್‌ಸಿ, ಎಂ.ಕಾಂ	ಎಂ. ಎಂ.ಎ, ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ, ಎಂ.ಇಡಿ, ಎಂ.ಕಾಂ (ಎಫ್‌ಎ), ಎಂ.ಕಾಂ(ಐಬಿ), ಎಂಟಿಟಿಎಂ, ಎಂಎಸ್‌ಸಿ (ಯೋಟೆಕ್ನೋಲಜಿ) ಸೂಕ್ಷ್ಮ ಜೀವವಿಜ್ಞಾನ, ಸೈಕಾಲಾಜಿಕಲ್ ಕೌನ್ಸೆಲಿಂಗ್, ದೃಶ್ಯ ಮಾಧ್ಯಮ, ಅಪ್ಲೈಟ್ ಜೆನೆಟಿಕ್ಸ್, ಎಫ್‌ಎಡಿ, ಸ್ಪೀಚ್ ಅಂಡ್ ಹಿಯರಿಂಗ್, ಆಡಿಯಾಲಜಿ ಅಂಡ್ ಸ್ಪೀಚ್ ಲಾಂಗ್ವೇಜ್ ಪ್ಯಾಥಾಲಜಿ, ಎಂ.ಸಿ.ಎ ಮತ್ತು ಎಂಬಿಎ ಕೋರ್ಸ್‌ಗಳು
ಪ್ರವೇಶ ಶುಲ್ಕ	750	750
ನೋಂದಣಿ ಶುಲ್ಕ	1,500	3,750
ಕ್ರೀಡಾ ಶುಲ್ಕ	1,000	1,000
ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ	100	100
ಸೇವಾ ಶುಲ್ಕ	500	500
ಅರ್ಹತಾ ಶುಲ್ಕ	8,000	8,000
ಒಟ್ಟು	**11,850**	**14,100**

ಸೂಚನೆ: * ಕಾಲಕಾಲಕ್ಕೆ ಸರ್ಕಾರದಿಂದ ನಿಗಧಿಪಡಿಸಿದಂತೆ.

೨೦. ಅಧ್ಯಾಪಕರ ವಿವರ:

ಎ) ನೇಮಕಾತಿ – ಕನಿಷ್ಟ ಮಾನದಂಡಗಳು ಮತ್ತು ಮೀಸಲಾತಿಗಳಿಗೆ ಸಂಬಂಧಿಸಿದಂತೆ ೨೦೧೦ರ ಯುಜಿಸಿ ನಿಯಮಗಳು ಮತ್ತು ಕಾಲಕಾಲಕ್ಕೆ ಹೊರಡಿಸುವ ಹೊಸ ಸೇರ್ಪಡೆಗಳು/ತಿದ್ದುಪಡಿಗಳು ಮತ್ತು ಸರ್ಕಾರಿ ಆದೇಶಗಳು (ಸಂವಿಧಾನದ ಅನುಚ್ಛೇದ ೩೧೭ ಜೆ ಅಡಿ ಬರುವ ಜಿಲ್ಲೆಗಳು ಸೇರಿ)

ವಿಶ್ವವಿದ್ಯಾನಿಲಯಕ್ಕೆ ಹುದ್ದೆಗಳು ಮಂಜೂರಾಗಿಲ್ಲ, ಆದ್ದರಿಂದ ೨೦೧೮–೧೯ರ ಅವಧಿಯಲ್ಲಿ ಯಾವುದೇ ನೇಮಕಾತಿ ಮಾಡಲಾಗಿಲ್ಲ

ಬಿ) ಒಟ್ಟು ಖಾಯಂ ಅಧ್ಯಾಪಕರು/ತಾತ್ಕಾಲಿಕ ಅಧ್ಯಾಪಕರು ಮತ್ತು ಅವರ ಹುದ್ದೆಗಳು, ಅರ್ಹತೆಗಳು ಮತ್ತು ಮೀಸಲಾತಿ ವರ್ಗದ ಸಂಖ್ಯೆ (ಎಸ್‌ಸಿ/ಎಸ್‌ಟಿ/ಒಬಿಸಿ/ಮಹಿಳೆಯರು/ವಿಶೇಷ ಚೇತನರು/ಇತರೆ) – ವಿಭಾಗವಾರು ಪಟ್ಟಿಯನ್ನು ನೀಡಬಹುದಾಗಿದೆ.

ವಿಭಾಗವಾರು ಖಾಯಂ ಬೋಧಕ ಸಿಬ್ಬಂದಿ

ಹೆಸರು ಮತ್ತು ವಿಭಾಗ	ಹುದ್ದೆ	ವಿದ್ಯಾರ್ಹತೆ	ಪ್ರವರ್ಗ
ಜೈವಿಕ ರಸಾಯನಶಾಸ್ತ್ರ:			
2019ರವರೆಗೆ ಅನ್ವಯಿಸಲ್ಪಡುತ್ತದೆ. (2017–2018–19). ಮುನ್ನುಡಿಯಲ್ಲಿ ತಿಳಿಸಿರುವಂತೆ ಈ ವಿಶ್ವವಿದ್ಯಾಲಯವು ಬೆಂಗಳೂರು ವಿಶ್ವವಿದ್ಯಾಲಯದಿಂದ ಮೂಲಸೌಕರ್ಯ, ಸ್ನಾತಕೋತ್ತರ ವಿಭಾಗಗಳ ವರ್ಗಾವಣೆ ಅಥವಾ ನಿಧಿಗಳು ಹಾಗೂ ಮಾನವ ಸಂಪನ್ಮೂಲಗಳ ವರ್ಗಾವಣೆ ವಿಷಯದಲ್ಲಿ ತನ್ನ ಅಸ್ತಿತ್ವ ಸ್ಥಾಪಿಸಲು ಬಹಳ ಸೆಣಸಾಡಬೇಕಾಯಿತು. ಮೂಲಸೌಕರ್ಯ, ಹಣಕಾಸು ಮತ್ತು ಮಾನವ ಸಂಪನ್ಮೂಲಗಳು ಸಂಸ್ಥಾಪನೆಯ ಆರಂಭಿಕ ಘಟ್ಟಗಳಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಆರಂಭಿಕ ದಿನಗಳಲ್ಲಿ ವಿಶ್ವವಿದ್ಯಾಲಯವು ಈ ಮೂರು ಮಹತ್ವದ ಉಪಾಂಗಗಳಲ್ಲಿ ಯಾವುದೊಂದನ್ನೂ ಸಹ ಹೊಂದಿರಲಿಲ್ಲ. ಸರ್ಕಾರಿ ಆದೇಶ ಹೊರಬಿದ್ದ ಮೇಲೂ ಸಹ ಒಂದಿಲ್ಲೊಂದು ನೆಪ ಮುಂದೊಡ್ಡಿ ಕಟ್ಟಡಗಳು/ಮೂಲಸೌಕರ್ಯಗಳ ವರ್ಗಾವಣೆಯಲ್ಲಿ ವಿಳಂಬ ಮಾಡಲಾಯಿತು. ಇಂದಿಗೂ ಸಹ ಕೆಲವು ಕಟ್ಟಡಗಳು ಬೆಂಗಳೂರು ವಿಶ್ವವಿದ್ಯಾಲಯದ ಅಧೀನದಲ್ಲಿದ್ದು ಅನೇಕ ಕಟ್ಟಡಗಳನ್ನು ಅಧಿಕೃತವಾಗಿ ಹಸ್ತಾಂತರಿಸಲಾಗಿಲ್ಲ. ಲಭ್ಯವಿರುವ ಕಟ್ಟಡಗಳ ಪರಿಸ್ಥಿತಿಯೂ ಅತ್ಯಂತ ಶೋಚನೀಯವಾಗಿದೆ. ವಿದ್ಯಾರ್ಥಿಗಳ ಪ್ರಾಣವನ್ನು ಪಣಕ್ಕಿಟ್ಟು ಅವುಗಳ ಬಳಕೆಗೆ ಅನುವುಮಾಡಿಕೊಡಲು ನನಗೆ ಭಯವಾಗುತ್ತಿದೆ. ಮತ್ತೊಂದೆಡೆ ಕ್ಯಾಂಪಸ್‌ನಲ್ಲಿ ಪ್ರಧಾನ ವಿಷಯಗಳಲ್ಲಿ ಸ್ನಾತಕೋತ್ತರ ವಿಭಾಗಗಳಿಲ್ಲದಿದ್ದ ಕಾರಣ ಕಲಾ ನಿಕಾಯದಲ್ಲಿ ಪಿಜಿ ಕೋರ್ಸ್‌ಗಳನ್ನು ಪ್ರಾರಂಭಿಸಬೇಕೆಂಬ ಅಪಾರ ಒತ್ತಾಯವಿತ್ತು. ಹೀಗಾಗಿ ಕೆಲವು ಹೊಸ ಕೋರ್ಸ್‌ಗಳನ್ನು ಆರಂಭಿಸುವ ಸಲುವಾಗಿ ಕೆಲವು ಕಟ್ಟಡಗಳ ತುರ್ತು ದುರಸ್ತಿ ಮತ್ತು ನವೀಕರಣ ಕಾರ್ಯ ಕೈಗೊಳ್ಳದೆ ಗತ್ಯಂತರವಿರಲಿಲ್ಲ. ವಿಶ್ವವಿದ್ಯಾಲಯ ಈ ಸವಾಲುಗಳನ್ನು ನಿಭಾಯಿಸಿ 2018–19ನೇ ಸಾಲಿನಲ್ಲಿ ಎಂಟು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವಲ್ಲಿ ಸಫಲವಾಯಿತು. ಸಂಯೋಜನೆ ಪ್ರಕ್ರಿಯೆಗೆ ಚಾಲನೆ, ಸ್ನಾತಕೋತ್ತರ/ ಪದವೀಧರ ಕೋರ್ಸ್‌ಗಳಿಗೆ ಪ್ರವೇಶ, ಕಾಲೇಜುಗಳು ಮಾಡಿಕೊಂಡಿದ್ದ ಪ್ರವೇಶಗಳ ಅನುಮೋದನೆಯ ಜೊತೆಗೆ ಪರೀಕ್ಷಾ ಚಟುವಟಿಕೆಗಳನ್ನೂ ಆರಂಭಿಸಬೇಕಾಗಿದ್ದು ಇನ್ನುಳಿದ ಸವಾಲುಗಳಾಗಿದ್ದವು. ವಿಶ್ವವಿದ್ಯಾಲಯ ಅನುಭವಿ ಸಿಬ್ಬಂದಿ ಮತ್ತು ಮೂಲಸೌಕರ್ಯ ಹೊಂದಿರಲಿಲ್ಲವೆಂಬುದನ್ನು ಯಾರೂ ಮರೆಯುವಂತಿಲ್ಲ; ಅನನುಭವಿ ಗುತ್ತಿಗೆ ಸಿಬ್ಬಂದಿಗೆ ನಿರಂತರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯ ಅಗತ್ಯವಿದೆ. ಸದ್ಯ ಹೇಗೋ ಲಭ್ಯವಿದ್ದ ಅನುಭವಿ ನಿವೃತ್ತ ನೌಕರರ ಸೇವೆ, ಬೋಧಕವರ್ಗದ ಸಕಾಲಿಕ ನೆರವು ಮತ್ತು ಅಧಿಕಾರಿಗಳ ನಿಷ್ಠೆಯಿಂದ ವಿಶ್ವವಿದ್ಯಾಲಯಕ್ಕೆ ಮೇಲ್ಕಾಣಿಸಿದ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಲು ಸಾಧ್ಯವಾಗಿದೆ. ಇದೇ ಹೊಸ ವಿಶ್ವವಿದ್ಯಾಲಯದ ಪ್ರಗತಿಗೆ ಅಪಾರ ವೇಗ ಮತ್ತು ಪ್ರೇರಣೆಯನ್ನು ಕೂಡಾ ಒದಗಿಸಿದೆ.

ಮುಂಬರುವ ವರ್ಷಗಳಲ್ಲಿ ವಿಶ್ವವಿದ್ಯಾಲಯವು ವಿಜ್ಞಾನ ನಿಕಾಯದಲ್ಲಿ ಸ್ನಾತಕೋತ್ತರ ವಿಭಾಗಗಳನ್ನು ತೆರೆಯುವ ಹಾಗೂ ಕಲಾ, ವಿಜ್ಞಾನ, ತಂತ್ರಜ್ಞಾನ ಮತ್ತು ಕಾನೂನು ವಿಷಯಗಳ ಸರಹದ್ದಿನ ಕ್ಷೇತ್ರಗಳಲ್ಲಿ ಕೆಲ ವಿಭಾಗಗಳನ್ನು ಪ್ರಾರಂಭಿಸುವ ಯೋಜನೆಗಳನ್ನು ಹೊಂದಿದೆ. ಆಡಳಿತಯಂತ್ರದ ಸ್ವಯಂಚಾಲೀಕರಣ, ಇಂಟರ್‌ನೆಟ್ ಸೌಲಭ್ಯ, ಸಿಸಿಟಿವಿ ಕಣ್ಗಾವಲು ಮತ್ತು ಮತ್ತಷ್ಟು ಪಾರದರ್ಶಕ ಆಡಳಿತ ಒದಗಿಸುವ ನಿಟ್ಟಿನಲ್ಲಿ ಮುತುವರ್ಜಿ ವಹಿಸಬೇಕಿದೆ.

ವಿಶ್ವವಿದ್ಯಾಲಯವು ಪರಿಸರ ಸಂರಕ್ಷಣೆ ಜಾಗೃತಿ, ಮಳೆ ಕೊಯ್ಲು, ಸೌರ ವಿದ್ಯುತ್ ವ್ಯವಸ್ಥೆ, ಗಿಡಗಳನ್ನು ನೆಡುವುದು, ಕ್ಯಾಪಸ್ ಸೌಂದರ್ಯೀಕರಣ, ಕಟ್ಟಡಗಳ ನವೀಕರಣ ಮತ್ತು ಬಹುಮಹಡಿ ಶೈಕ್ಷಣಿಕ

ಕಟ್ಟಡ ನಿರ್ಮಾಣ ಇತ್ಯಾದಿ ಕಾರ್ಯಗಳನ್ನು ಸಹ ಕೈಗೆತ್ತಿಕೊಂಡಿದೆ. ವಿಶ್ವವಿದ್ಯಾಲಯವು ಪರಿಸರಸ್ನೇಹಿ ಕ್ಯಾಂಪಸ್ ನಿರ್ಮಾಣದ ಉದ್ದೇಶವನ್ನು ಹೊಂದಿದ್ದು ಈ ನಿಟ್ಟಿನಲ್ಲಿ ಕೆಲವು ಕ್ರಮಗಳನ್ನು ಕೈಗೊಂಡಿದ್ದು ಸ್ವಚ್ಛ ಭಾರತ ಅಭಿಯಾನದ ಮೂಲಕ ಪ್ಲಾಸ್ಟಿಕ್ ಮುಕ್ತ ಆವರಣವಾಗಿ ಪರಿವರ್ತಿಸಲಾಗಿದೆ.

ಒಟ್ಟಾರೆಯಾಗಿ ವಿಶ್ವವಿದ್ಯಾಲಯವು ತನ್ನ ಎಲ್ಲ ಇತಿಮಿತಿಗಳು ಮತ್ತು ಕೊರತೆಗಳ ನಡುವೆಯೂ ಎಲ್ಲಾ ಹಕ್ಕುದಾರರಿಗೆ ಅತ್ಯುತ್ತಮ ಸೇವೆಯನ್ನು ಒದಗಿಸಲು ಪರಿಶ್ರಮಿಸುತ್ತಿದೆ. ಅಧಿಕಾರಿಗಳು, ಪ್ರಿನ್ಸಿಪಾಲರು, ಬೋಧಕ ಸಿಬ್ಬಂದಿ, ಅತಿಥಿ ಉಪನ್ಯಾಸಕರು (ನಿವೃತ್ತ ಪ್ರಾಧ್ಯಾಪಕರು ಸೇರಿ) ಮತ್ತು ಯುವ ನೌಕರವರ್ಗ ವಿಶ್ವವಿದ್ಯಾಲಯದ ಇದುವರೆಗಿನ ಸಾಧನೆಗಳ ಹಿಂದಿನ ಶಕ್ತಿಯಾಗಿದ್ದಾರೆ.

ತಂತ್ರಜ್ಞಾನ ಉಪಕ್ರಮಗಳ ಅವಶ್ಯಕತೆ:

- ಎಲ್ಲಾ ವಿಭಾಗಗಳು ಮತ್ತು ಕಚೇರಿಗಳಿಗೆ ಅತ್ಯುನ್ನತ ದರ್ಜೆಯ (ಎಚ್‌ಡಿ) ಅಂತರ್ಜಾಲ ಸಂಪರ್ಕ ಒದಗಿಸಿ ಕ್ಯಾಂಪಸ್‌ನ್ನು ವೈ–ಫೈ ವಲಯವಾಗಿ ಮಾರ್ಪಡಿಸುವುದು.
- ಎಲ್ಲಾ ಬೋಧಕೇತರ ಸಿಬ್ಬಂದಿಗೆ ಕಂಪ್ಯೂಟರ್‌ಗಳನ್ನು ಒದಗಿಸುವುದು.
- ಸಂಪೂರ್ಣ ಇ–ಆಡಳಿತವನ್ನು ಸಾಧಿಸಲು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.
- ಐಸಿಟಿ ಬೋಧನೆ ಮತ್ತು ಕಲಿಕೆಯ ಅವಿಭಾಜ್ಯ ಭಾಗವಾಗಿದ್ದು ಎಲ್ಲಾ ತರಗತಿ ಕೊಠಡಿಗಳಿಗೆ ಆಡಿಯೋ ವಿಶ್ಯುಯಲ್ ಮತ್ತು ಐಸಿಟಿ ಸೌಲಭ್ಯವನ್ನು ಒದಗಿಸುವುದು.
- ಎಲ್ಲಾ ನಿಕಾಯ ಸದಸ್ಯರಿಗೆ ಪರಿಣಾಮಕಾರಿ ಬೋಧನೆಗೆ ಇ–ಸಂಪನ್ಮೂಲಗಳ ಸಂಪೂರ್ಣ ಸದುಪಯೋಗ ಸಾಧ್ಯವಾಗುವಂತೆ ಲ್ಯಾಪ್‌ಟಾಪ್‌ಗಳನ್ನು ಒದಗಿಸುವುದು.
- ಎಸ್‌ಸಿ/ಎಸ್‌ಟಿ ಸಂಶೋಧನಾ ಸ್ಕಾಲರ್‌ಗಳು ಮತ್ತು ಪಿಜಿ ವಿದ್ಯಾರ್ಥಿಗಳಿಗೆ ಎಸ್‌ಸಿಪಿ/ಟಿಎಸ್‌ಪಿ ಅನುದಾನದ ಅಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು ವಿತರಿಸುವುದು.
- ಗ್ರಂಥಾಲಯವನ್ನು ಆಧುನೀಕರಿಸಬೇಕಾದ ಅಗತ್ಯವಿದ್ದು ಬಳಕೆದಾರರಿಗೆ ಗ್ರಂಥಾಲಯದಲ್ಲಿನ ಆನ್‌ಲೈನ್ ಸಂಪನ್ಮೂಲಗಳನ್ನು ಎಲ್ಲಿಂದಲಾದರೂ ಯಾವಾಗಬೇಕಾದರೂ ದೂರದ ಸ್ಥಳದಿಂದಲೂ ಸಂಪರ್ಕಿಸುವ ಸೌಲಭ್ಯವನ್ನು ಒದಗಿಸುವುದು.
- ಗ್ರಂಥಾಲಯದಲ್ಲಿ ಎಲ್ಲಾ ಸಂಶೋಧಕರೂ ತಮ್ಮ ಲೇಖನಗಳನ್ನು ಮತ್ತು ಪ್ರೌಢ ಪ್ರಬಂಧಗಳನ್ನು ಪರಿಶೀಲಿಸಿ ಪ್ರಕಟಣೆಗಳ ಗುಣಮಟ್ಟವನ್ನು ಸುಧಾರಿಸಲು ಸಾಧ್ಯವಾಗುವಂತೆ ಕೃತಿಚೌರ್ಯ ನಿರೋಧಕ ಸಾಫ್ಟ್‌ವೇರ್‌ನ್ನು ಅಳವಡಿಸುವುದು.
- ಇಡೀ ಕ್ಯಾಂಪಸ್‌ನಲ್ಲಿ ಸಿಸಿಟಿವಿ ಕ್ಯಾಮರಾಗಳ ಕಣ್ಗಾವಲನ್ನು ವ್ಯವಸ್ಥೆಗೊಳಿಸುವುದು.

–––––

ವಾರ್ಷಿಕ ವರದಿ

2019-20

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ

BE BOUNDLESS

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಸೆಂಟ್ರಲ್ ಕಾಲೇಜು ಆವರಣ,

ಬೆಂಗಳೂರು 560 001

ಕರ್ನಾಟಕ – ಭಾರತ

ವೆಬ್ ಸೈಟ್: https://www.bcu/ac.in

ವಾರ್ಷಿಕ ವರದಿಯ ಸಂಪಾದಕೀಯ ಮಂಡಳಿ

೧.	**ಪ್ರೊ. ರಮೇಶ್. ಬಿ** ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಅಧ್ಯಕ್ಷರು**
೨.	**ಡಾ. ಚೇತನ ಪಿ.ಅರ್** ಪ್ರಾಧ್ಯಾಪಕರು,ರಸಾಯನಶಾಸ್ತ್ರ ವಿಭಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೩.	**ಡಾ. ಕೆ.ಆರ್. ಜಲಜ** ಸಹ– ಪ್ರಾಧ್ಯಾಪಕರು,ವಾಣಿಜ್ಯ ವಿಭಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೪.	**ಡಾ. ಜ್ಯೋತಿ ವೆಂಕಟೇಶ್** ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು. ಜಾಗತಿಕ ಭಾಷೆಗಳ ಕೇಂದ್ರ ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**
೫.	**ಶ್ರೀಮತಿ. ಪದ್ಮ** ಅಧೀಕ್ಷಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ	**ಸದಸ್ಯರು**

ಈ ವಾರ್ಷಿಕ ವರದಿ ಸಿದ್ಧಪಡಿಸಲು ನೆರವಾದ ಕೆಳಗಿನ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ಕೃತಜ್ಞತೆಗಳು:–

೧. ಶ್ರೀ. ಮನೋಜ್. ಹೆಚ್.ಆರ್. ಅತಿಥಿ ಉಪನ್ಯಾಸಕರು, ಸಮಾಜಕಾರ್ಯ ವಿಭಾಗ
೨. ಡಾ. ನಾರಾಯಣಸ್ವಾಮಿ,
೩. ಶ್ರೀ. ಆಯನಾರ್ಡೊ ಡಿಸೋಜಾ
೪. ಡಾ. ಅಖ್ತರ್
೫. ಡಾ. ಅಸ್ಮ ಕೌಸರ್

ಪರಿವಿಡಿ

ಕ್ರ.ಸಂ.	ವಿಷಯ	ಪುಟ ಸಂಖ್ಯೆ
	ಮುನ್ನುಡಿ	6-12
1	ಸಾಮಾನ್ಯ ಮಾಹಿತಿ	13-17
2	ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳು	17-34
3	ಕಣ್ನೋಟ ಮತ್ತು ಧ್ಯೇಯ	35
4	ಸಂಘಟನೆ ಮತ್ತು ಆಡಳಿತ	36-37
5	2010ರ ಯುಜಿಸಿ ಅಧಿಸೂಚನೆ ಪ್ರಕಾರ ಐಕ್ಯೂಎಸಿ ನಿಯಮಾವಳಿಗಳು ಮತ್ತು ಅದರ ಕಾರ್ಯ ವೈಖರಿ	37-38
6	ಕೆಎಸ್‌ಯು ಕಾಯ್ದೆ 2000ರ ಪ್ರಕಾರ ಕಾರ್ಯಕ್ರಮ ಸಂವೀಕ್ಷಣೆ ಮತ್ತು ಮೌಲ್ಯಮಾಪನ ಮಂಡಳಿ(ಪಿಎಂಇಬಿ)ಯ ರಚನೆ ಮತ್ತು ಅದರ ಕಾರ್ಯವೈಖರಿ	38-39
7	ಕುಲಪತಿಯವರ/ಸರ್ಕಾರದ ನಿರ್ದೇಶನಗಳ ಅನುಷ್ಠಾನದ ವರದಿ	39-40
8	ಕೆಎಸ್‌ಎಚ್‌ಇಸಿ ಶಿಫಾರಸ್ಸುಗಳಂತೆ ಸರ್ಕಾರ ಹೊರಡಿಸಿದ ಅಧಿಸೂಚನೆಗಳ ಅನುಷ್ಠಾನದ ವರದಿ	40
9	ಸಾಮಾಜಿಕ ಹೊರಗುಳಿವಿಕೆ ಮತ್ತು ಒಳಗೊಳ್ಳುವಿಕೆ ನೀತಿಗಳ ಅಧ್ಯಯನ ಕೇಂದ್ರದ ವರದಿ	40
10	ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಅಧ್ಯಯನ ಕೇಂದ್ರ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸದ್ಬಳಕೆ	40
11	ದಾಖಲಾತಿ ಪ್ರಕ್ರಿಯೆಗಳು	40-51
12	ವಿದ್ಯಾರ್ಥಿಗಳ ಪ್ರೋತ್ಸಾಹ	51-56
13	ವಿದ್ಯಾರ್ಥಿಗಳ ಭಾಗವಹಿಸುವಿಕೆ	56-62

14	ಹಳೆ ವಿದ್ಯಾರ್ಥಿಗಳ ಸಂಘ	63
15	ಸಂಯೋಜನೆ	64
16	ಕಾಲೇಜು ಅಭಿವೃದ್ಧಿ ಮಂಡಳಿ	64
17	ಪಠ್ಯಕ್ರಮದ ವಿನ್ಯಾಸ ಮತ್ತು ಪ್ರಗತಿ	64-65
18	ಪ್ರಸಾರಾಂಗ ಮತ್ತು ಮುದ್ರಣಾಲಯ	65
19	ಶುಲ್ಕದ ವಿವರಗಳು	66-75
20	ಅಧ್ಯಾಪಕರ ವಿವರ	75-81
21	ಸಹಾಯಕ ಸಿಬ್ಬಂದಿ	81-82
22	ಪರೀಕ್ಷೆ ಮತ್ತು ಮೌಲ್ಯಮಾಪನ	82-91
23	ಘಟಿಕೋತ್ಸವ	92-95
24	ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಕೋಶ	95
25	ಸಂಶೋಧನಾ ನೀತಿ ಮತ್ತು ಪ್ರಗತಿ	95-98
26	ಆಹ್ವಾನಿತ ಪ್ರಾಧ್ಯಾಪಕರ ಭಾಷಣಗಳು	98-101
27	ಸಂಶೋಧನೆ ಯೋಜನೆಗಳು	101-106
28	ಸಂಶೋಧನಾ ಫಲಿತಾಂಶಗಳು	106-107
29	ಸಂಶೋಧನಾ ಪರಂಪರೆಯ ಪ್ರೋತ್ಸಾಹ	107-109
30	ರಾಜ್ಯ ನೀತಿ ರಚನೆ ಮತ್ತು ಸಾಮಾಜಿಕ ಜವಾಬ್ದಾರಿಗಳ ಅರಿತುಕೊಳ್ಳುವಿಕೆಗೆ ಸಂಶೋಧನಾ ಕೊಡುಗೆಗಳು	109
31	ಸಂಶೋಧನಾ ನೈತಿಕತೆ	109-110
32	ಸಾಂಸ್ಥಿಕ ಅಧ್ಯಯನ ಪೀಠಗಳ ಸ್ಥಾಪನೆ ಮತ್ತು ಅವುಗಳ ಕಾರ್ಯವೈಖರಿ	110
33	ಆಧುನಿಕ ಬೋಧನೆ–ಕಲಿಕೆ–ಸಂಶೋಧನಾ ಚಟುವಟಿಕೆಗಳ ಕೇಂದ್ರವಾಗಿ ಗ್ರಂಥಾಲಯ	110
34	ವಿಶ್ವವಿದ್ಯಾನಿಲಯ ಗ್ರಂಥಾಲಯ	110-116
35	ಭೌತಿಕ ಮೂಲಸೌಕರ್ಯ	116-123

36	ಹಣಕಾಸು	123-128
37	ಕ್ರೀಡೆ/ಎನ್‌ಎಸ್‌ಎಸ್/ಎನ್‌ಸಿಸಿ/ವೈಆರ್‌ಸಿ	128-141
38	ಮಹಿಳಾ ಸಬಲೀಕರಣ, ಪಜಾ/ಪಪಂ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಲಿಂಗ ಸಮಾನತೆ ಮತ್ತು ಇತರ ಕೋಶಗಳ ರಚನೆ ಮತ್ತು ಪ್ರತಿ ಕೋಶದ ಹಣಕಾಸು ಅನುದಾನ, ಖರ್ಚುವೆಚ್ಚ ಮತ್ತು ಇತರ ಚಟುವಟಿಕೆಗಳ ವರದಿ	141
39	ಅತ್ಯುತ್ತಮ ನಡವಳಿಕೆಗಳು	141-143
40	ಹೊಸತುಗಳು / ನಾವಿನ್ಯತೆಗಳು	143
41	ದಾವೆಗಳು	143
42	ಲೋಕಾಯುಕ್ತ ಪ್ರಕರಣಗಳು, ಯಾವುದಾದರೂ ಇದ್ದರೆ	143
43	ಶಾಸಕಾಂಗ ಸಮಿತಿಯ ನಡಾವಳಿಗಳು	143
44	ದೂರ ಶಿಕ್ಷಣ	143
45	ಶೈಕ್ಷಣಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯವು ಪ್ರಸ್ತಾಪಿಸುವ ವಿಶೇಷ ಯೋಜನೆಗಳು	143
46	ವಿಶ್ವವಿದ್ಯಾನಿಲಯದ ಸಾಧನೆಗಳನ್ನು ತೋರಿಸುವ ಇತರ ಮಾಹಿತಿಗಳು	143
47	ಉಪಕುಲಪತಿಯವರ ಕಣ್ಣೋಟದ ಅನಿಸಿಕೆಗಳು	144-145

ಮುನ್ನುಡಿ

2019-20ನೇ ಸಾಲಿನ ನಮ್ಮ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡುವುದು ನನಗೆ ಸಂತಸದ ವಿಷಯವಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಕ್ಕೆ ತಿದ್ದುಪಡಿ ಮಾಡುವ ಮೂಲಕ ಬೆಂಗಳೂರು ವಿಶ್ವವಿದ್ಯಾನಿಲಯವು 2015ರ ಆಗಸ್ಟ್ 13ರಂದು ಸ್ಥಾಪನೆಯಾಯಿತು. 2015 ರ ಆಗಸ್ಟ್‌ನಲ್ಲಿ ಕಾಯ್ದೆಯ ತಿದ್ದುಪಡಿಯಿಂದ ವಿಶ್ವವಿದ್ಯಾನಿಲಯ ಅಸ್ಥಿತ್ವಕ್ಕೆ ಬಂದರೂ ಸಹ, ದಿನಾಂಕ 26.07.2017 ರಂದು ಕುಲಪತಿಗಳ ನೇಮಕ ಮಾಡುವುದರ ಮೂಲಕ ಅಧಿಕೃತವಾಗಿ ಅನುಷ್ಠಾನಕ್ಕೆ ಬಂತು. 2019-20 ಶೈಕ್ಷಣಿಕ ವರ್ಷದ ಅಂತ್ಯಕ್ಕೆ ವಿಶ್ವವಿದ್ಯಾನಿಲಯ 3 ವರ್ಷ 8 ತಿಂಗಳ ಅವಧಿಯನ್ನು ಪೂರ್ಣಗೊಳಿಸಿದೆ. ಸರ್ಕಾರದ ಸುಗ್ರಿವಾಜ್ಞೆ ಮತ್ತು ಗೆಜೆಟ್ ಅಧಿಸೂಚನೆ ಮೂಲಕ 2020ರ ಜೂನ್ 19 ರಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾನಿಲಯ ಹೆಸರು **"ಬೆಂಗಳೂರು ನಗರ ವಿಶ್ವವಿದ್ಯಾನಿಲಯ"** ಎಂದು ಬದಲಾಯಿತು. ಈ ಬದಲಾವಣೆ ವಿಶ್ವವಿದ್ಯಾನಿಲಯದ ನೈಜ ಪ್ರಾದೇಶಿಕ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ. ಈ ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಬೆಂಗಳೂರು ನಗರದ ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಹೆಬ್ಬಾಳ, ಮಲ್ಲೇಶ್ವರಂ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ, ರಾಜಾಜಿನಗರ 13 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಈ ವಿಶ್ವವಿದ್ಯಾನಿಲಯವು 09 ಸರ್ಕಾರಿ ಕಾಲೇಜುಗಳು, 02 ಬಿಬಿಎಂಪಿ ಕಾಲೇಜುಗಳು, 29 ಅನುದಾನಿತ ಕಾಲೇಜುಗಳು, 183 ಖಾಸಗಿ ಅನುದಾನ ರಹಿತ ಕಾಲೇಜುಗಳು, 23 ಬಿಇಡಿ ಕಾಲೇಜುಗಳು, 01 ಬಿಪಿಇಡಿ ಕಾಲೇಜುಗಳು ಹಾಗೂ 08 ಸ್ವಾಯತ್ತ ಕಾಲೇಜುಗಳು ಸೇರಿದಂತೆ ಒಟ್ಟು 235 ಸಂಯೋಜಿತ ಕಾಲೇಜುಗಳನ್ನು ಹೊಂದಿದೆ. ಸರ್ಕಾರಿ ವಿ ಹೆಚ್ ಡಿ ಕೇಂದ್ರೀಯ ಗೃಹ ವಿಜ್ಞಾನ ಕಾಲೇಜು, ಸರ್ಕಾರಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮತ್ತು ಮಹಾರಾಣಿ ವಿಜ್ಞಾನ ಕಾಲೇಜುಗಳು ನಮ್ಮ ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಿದ್ದು ಕ್ಲಸ್ಟರ್ ವಿಶ್ವವಿದ್ಯಾನಿಲಯ ಮತ್ತು ನೃಪತುಂಗ ವಿಶ್ವವಿದ್ಯಾನಿಲಯಗಳ ಭಾಗವಾಗಿವೆ.

ಅ. ಬೋಧಕ ಮತ್ತು ಬೋಧಕೇತರ ಹುದ್ದೆಗಳ ಮಂಜೂರಾತಿ:

ಕರ್ನಾಟಕ ಸರ್ಕಾರವು ಒಟ್ಟು 144 ಹೊಸ ಬೋಧಕ ಹುದ್ದೆಗಳನ್ನು ಹಾಗೂ 123 ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಇವುಗಳಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ

ವರ್ಗಾವಣೆಗೊಂಡ ಹುದ್ದೆಗಳು ಸೇರಿದಂತೆ ಒಟ್ಟು 161 ಬೋಧಕ ಹುದ್ದೆಗಳನ್ನು ಮಂಜೂರು ಮಾಡಿದೆ. ಇತ್ತೀಚಿನ ಬೋದನ ಹುದ್ದೆಗಳ ಮಂಜೂರಾತಿಯೊಂದಿಗೆ ಯುಜಿಸಿಯು 1:2:4 ಎಂಬ ಅನುಪಾತವನ್ನು ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಹಾಗೂ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಲ್ಲಿ ಪೂರೈಸಿರುತ್ತದೆ. ಹೊಸ ಹುದ್ದೆಗಳಿಗೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ಮಾರ್ಗಸೂಚಿ ನೀಡಿದೆ. ಸರ್ಕಾರ ವಿಶ್ವವಿದ್ಯಾನಿಲಯಕ್ಕೆ ವಿವಿಧ ಹುದ್ದೆಗಳನ್ನು ಮಂಜೂರು ಮಾಡಿ, ಕೆಲವನ್ನು ನೇಮಕಾತಿ ಮಾಡಲು ಅನುಮತಿ ನೀಡಿದೆಯಾದರೂ, ಕೋವಿಡ್-19ಕ್ಕೆ ಸಂಬಂಧಿಸಿದ ಕಾರಣಗಳಿಂದ ರಾಜ್ಯದ ಆರ್ಥಿಕತೆಗೆ ತೊಂದರೆಯಾಗಿರುವುದರಿಂದ ಸರ್ಕಾರ ಸದರಿ ನೇಮಕಾತಿ ಪ್ರಕ್ರಿಯೆಗೆ ತಡೆಯೊಡ್ಡಿದೆ. ಇದರಿಂದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಿಂದಲೇ ನೆಲೆ ನಿಲ್ಲಬೇಕಾದ ವಿಶ್ವವಿದ್ಯಾನಿಲಯಕ್ಕೆ ದೊಡ್ಡ ಹಿನ್ನೆಡೆಯಾಗಿದೆ. ಮುಂದಿನ ವರ್ಷವಾದರೂ ಸರ್ಕಾರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಕ್ಕೆ ಅನುಮತಿ ನೀಡಬಹುದೆಂಬ ಭರವಸೆಯಿದೆ. ಖಾಸಗೀ ವಿಶ್ವವಿದ್ಯಾನಿಲಯಗಳು ಒಡ್ಡುತ್ತಿರುವ ಸ್ಪರ್ಧೆಯ ದೃಷ್ಟಿಕೋನದಿಂದ ಚಿಂತಿಸಿದರೆ ಸಾರ್ವಜನಿಕ ವಿಶ್ವವಿದ್ಯಾನಿಲಯವೊಂದರ ಉಳಿವು ಅದು ಪಡೆದುಕೊಳ್ಳುವ ಅರ್ಹ ಮತ್ತು ಸಮರ್ಥ ಬೋಧಕ ಸಿಬ್ಬಂದಿ ಹಾಗೂ ಉತ್ತಮ ಮೂಲಭೂತ ಸೌಕರ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಹೊಸ ವಿಶ್ವವಿದ್ಯಾನಿಲಯ ನಿರೀಕ್ಷಿತ ಬೆಳವಣಿಗೆ ಕಂಡಿಲ್ಲ. ಈಗಿರುವ ಬೋಧಕ ಸಿಬ್ಬಂದಿಯ ಜೊತೆಗೆ ಇನ್ನಷ್ಟು ಅತಿಥಿ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಳ್ಳುವ ಮೂಲಕ ಹೊಸ ಸ್ನಾತಕೋತ್ತರ ವಿಭಾಗಗಳ ಬೋಧನಾ ಕಾರ್ಯಗಳನ್ನು ನಡೆಸಬಹುದಾಗಿದೆ.

ಈಗಿರುವ ಬೋಧಕ ಸಿಬ್ಬಂದಿ ಶೈಕ್ಷಣಿಕ ಪ್ರಕ್ರಿಯೆಗಳನ್ನಷ್ಟೇ ನಡೆಸಲು ಹೈರಾಣಾಗುತ್ತಿದ್ದು ಇತರೆ ಜವಾಬ್ದಾರಿಗಳನ್ನು ನಿರ್ವಹಸಲು ಸಮಯವೇ ಇಲ್ಲದಾಗಿದೆ. ಇಷ್ಟೆಲ್ಲಾ ಸವಾಲುಗಳ ನಡುವೆ ನಮ್ಮ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯಂತೂ ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಕಾರ್ಯಗಳನ್ನು ಸಮರ್ಥವಾಗಿ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದಾರೆಂದು ದಾಖಲಿಸುವುದು ಹೆಮ್ಮೆಯ ಸಂಗತಿಯಾಗಿದೆ.

ಆ. ಶೈಕ್ಷಣಿಕ ಹಾಗೂ ಪರೀಕ್ಷಾ ಚಟುವಟಿಕೆಗಳು:

ಎ) ಪ್ರಸಕ್ತ ವರ್ಷ ಭೌತಶಾಸ್ತ್ರ, ಜೀವ ವಿಜ್ಞಾನ(ಸಸ್ಯ ವಿಜ್ಞಾನ) ಮತ್ತು ಜೀವ ವಿಜ್ಞಾನ(ಪ್ರಾಣಿ ವಿಜ್ಞಾನ) ಎಂಬ ಮೂರು ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಒಟ್ಟು 18 ಸ್ನಾತಕೋತ್ತರ ವಿಭಾಗಗಳಿವೆ. ಇತ್ತೀಚೆಗೆ ಹೆಚ್ಚು ಮುನ್ನಡೆಗೆ ಬರುತ್ತಿರುವ ಪರಿಸರ ಹಾಗೂ ಹವಾಮಾನ ಬದಲಾವಣೆ(ಎನ್ವಿರಾನ್‌ಮೆಂಟ್ ಅಂಡ್ ಕ್ಲೈಮೇಟ್ ಚೇಂಜ್),

ತಂತ್ರಜ್ಞಾನ(ಟೆಕ್ನಾಲಜಿ), ನಗರಾಧ್ಯಯನ ಹಾಗೂ ಯೋಜನೆ (ಅರ್ಬನ್ ಸ್ಟಡೀಸ್ ಅಂಡ್ ಪ್ಲ್ಯಾನಿಂಗ್), ಕಲೆ ಮತ್ತು ಸೌಂದರ್ಯ ಶಾಸ್ತ್ರ (ಆರ್ಟ್ಸ್ ಅಂಡ್ ಏಸ್ತೆಟಿಕ್ಸ್) ಹಾಗೂ ಕಾನೂನು ಸಾರ್ವಜನಿಕ ನೀತಿ(ಲಾ ಅಂಡ್ ಪಬ್ಲಿಕ್ ಪಾಲಿಸಿ)ಯಂತಹ ಕ್ಷೇತ್ರಗಳ ಹೊಸ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸಲು ಕರ್ನಾಟಕ ಸರ್ಕಾರ ಅನುಮತಿ ನೀಡಿದೆ ಎಂಬುದನ್ನು ತಿಳಿಸಲು ಇನ್ನಷ್ಟು ಸಂತೋಷವಾಗುತ್ತದೆ. ಕಳೆದ ಎರಡು ವರ್ಷಗಳ ಅಂತರದಲ್ಲಿ 15 ಸ್ನಾತಕೋತ್ತರ ಪದವಿ ವಿಭಾಗಗಳು ಆರಂಭವಾಗುವ ಮೂಲಕ ಒಟ್ಟು 8 ರಿಂದ 23ರಷ್ಟು ವಿಭಾಗಗಳು ಹೆಚ್ಚಾಗಿವೆ. ಕೋವಿಡ್-19 ಪಿಡುಗು ಉಲ್ಬಣವಾದ ಕಾರಣಕ್ಕೆ ಈ ಕೋರ್ಸ್‌ಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲು ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ.

ಬಿ) ವಿಶ್ವವಿದ್ಯಾನಿಲಯವು ಲಭ್ಯವಿರುವ ಮಾನವ ಸಂಪನ್ಮೂಲವನ್ನೇ ಬಳಸಿಕೊಂಡು 2019-20ರ ಸಾಲಿನ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಸಂಯೋಜನೆ, ದಾಖಲಾತಿಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಪೂರ್ವ ನಿಗದಿಯಂತೆ ಪರೀಕ್ಷೆಗಳನ್ನು ನಡೆಸಲಾಯಿತು ಹಾಗೆಯೇ ಸಮಯಕ್ಕೆ ಸರಿಯಾಗಿ ಫಲಿತಾಂಶವನ್ನು ಸಹ ನೀಡಲಾಯಿತು. ಯಾಂತ್ರೀಕೃತ ಪರೀಕ್ಷಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರಿಂದ ಪರೀಕ್ಷೆಗೆ ಸಂಬಂಧಿಸಿದ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಸಹಕಾರಿಯಾಯಿತು. ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಸಿಬ್ಬಂದಿ ಕಡಿಮೆ ಸಂಖ್ಯೆಯಿದ್ದರೂ ಪ್ರಸಕ್ತ ವರ್ಷ ಪರೀಕ್ಷಾ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವುದಕ್ಕೆ ವಿದ್ಯಾರ್ಥಿಗಳ, ಉಪನ್ಯಾಸಕ, ಪ್ರಾಂಶುಪಾಲ ಹಾಗೂ ಇತರೆ ಸಿಬ್ಬಂದಿಯ ಸಹಕಾರವೂ ಪ್ರಮುಖ ಪಾತ್ರ ವಹಿಸಿದೆ.

ಇ. **ಮೂಲಭೂತ ಸೌಕರ್ಯಗಳು:**

ಅ) ಕ್ಯಾಂಪಸ್‌ನ ಆವರಣದಲ್ಲಿರುವ ಕಟ್ಟಡಗಳನ್ನು ನವೀಕರಿಸಬೇಕಾಗಿದೆ ಮತ್ತು ಕೆಲವು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಕೆಡವಬೇಕಾಗಿದೆ. ವಿಶ್ವವಿದ್ಯಾನಿಲಯವು ಹೊಸ ಕ್ಯಾಂಪಸ್‌ನ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿದೆ. ನೀಲನಕ್ಷೆ ತಯಾರಿಕೆಗೆ ಟೆಂಡರ್ ಕರೆಯಲಾಗಿದ್ದು ಹೆಚ್ಚೆಚ್ಚು ಆಸಕ್ತರು ಮುಂದೆ ಬಂದಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಸ್ವತಂತ್ರವಾದ ಇಂಜಿನಿಯರಿಂಗ್ ವಿಭಾಗ ಇಲ್ಲದಿರುವುದರಿಂದ 150 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ, ನವೀಕರಣ ಹಾಗೂ ಭೂಮಿ ಸಮತಟ್ಟು ಮಾಡುವಂತಹ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರಕ್ಕೆ ಮನವಿ ಮಾಡಬೇಕೆಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಮಿತಿಯು ನಿರ್ಣಯ

ಕೈಗೊಂಡಿದೆ. ಅಗತ್ಯ ನೀಲನಕ್ಷೆ ರಚಿಸಬೇಕಾಗಿದ್ದು, ವಿಶ್ವವಿದ್ಯಾನಿಲಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು.

ಬಿ) ಈಗಿರುವ ಕಟ್ಟಡಗಳ ನವೀಕರಣ ಮತ್ತು ರಿಪೇರಿ ಮಾಡುವುದರ ಜೊತೆಗೆ ವಿಶ್ವವಿದ್ಯಾನಿಲಯವು ಕ್ಯಾಂಪಸ್‌ನಲ್ಲಿ ಆಡಳಿತ ಕಛೇರಿ, ಸಿಬ್ಬಂದಿ ಕಟ್ಟಡಗಳು, ವಿದ್ಯಾರ್ಥಿನಿಲಯಗಳು, ಅತಿಥಿ ಗೃಹ, ಆರೋಗ್ಯ ಕೇಂದ್ರ, ಕಾಫಿ/ಟೀ ಕೇಂದ್ರ, ಕ್ರೀಡೆಗೆ ಸಂಬಂಧಿಸಿದ ಜಿಮ್ನಾಶಿಯಮ್ ಕೇಂದ್ರ, ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣಗಳು ಸೆಂಟ್ರಲ್ ಕಾಲೇಜು ಮತ್ತು ಪ್ರಸನ್ನ ಕುಮಾರ ಬ್ಲಾಕ್‌ಗಳಿಗೆ ಸಂಪರ್ಕ ವ್ಯವಸ್ಥೆಯಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ವಿಶ್ವವಿದ್ಯಾನಿಲಯವನ್ನು ವಿಸ್ತರಿಸಿ ವಿವಿಧ ಕೇಂದ್ರಗಳನ್ನು ತೆರೆದು ಹೊಸ ಕೋರ್ಸ್‌ಗಳಿಗೆ ಅತ್ಯಾಧುನಿಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯಲ್ಲಿಯೇ 50 ಎಕರೆ ಭೂ ಪ್ರದೇಶ ಮಂಜೂರು ಮಾಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಸಿ) ವಿದ್ಯುತ್‌ಶಕ್ತಿ ಬಳಕೆಯಿಂದಾಗುವ ಹಣಕಾಸಿನ ಹೊರೆಯನ್ನು ತಪ್ಪಿಸಲು ಹಾಗೂ ಸರ್ಕಾರ ಮಾಡುವ ನವೀಕರಿಸಬಹುದಾದ ಶಕ್ತಿ ಸಂಘನ್ಮೂಲಗಳ ಬಳಕೆಯಂತಹ ಯೋಜನೆಗಳನ್ನು ಸಹ ಬಳಸಿಕೊಳ್ಳುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ಲಭ್ಯವಿರುವ ಕಟ್ಟಡಗಳ ಮೇಲೆ ಸೌರಶಕ್ತಿ ಫಲಕಗಳನ್ನು ಅಳವಡಿಸುವ ಕಾರ್ಯ ಕೈಗೊಂಡಿದೆ. ಅಂತರ್‌ಜಾಲ ವ್ಯವಸ್ಥೆಯ ಉತ್ತಮ ಸಂಪರ್ಕಕ್ಕೆ ವೈ-ಫೈ ಮತ್ತು ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಕ್ಯಾಂಪಸ್ ಉದ್ದಕ್ಕೂ ನಿರ್ಮಾಣ ಮಾಡಲಾಗುತ್ತದೆ.

ಈ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳು:

ಸಮಾಜ ಕಲ್ಯಾಣ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಲಭ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ವಿಶ್ವವಿದ್ಯಾನಿಲಯದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗಿದೆ. ಈ ಉದ್ದೇಶಕ್ಕೆಂದೇ ಇರುವ ವಿಭಾಗದ ವಿಶೇಷಾಧಿಕಾರಿಗೆ ಜವಾಬ್ದಾರಿಯನ್ನು ವಹಿಸಿ ಕಾಲಕಾಲಕ್ಕೆ ದೊರೆಯಬೇಕಾದ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಸರ್ಕಾರ ಮಂಜೂರು ಮಾಡಿರುವ ಎಸ್‌ಸಿಪಿ-ಟಿಎಸ್‌ಪಿ ಅನುದಾನದಡಿಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡಲಾಗಿದೆ.

ಉ. ಗ್ರಂಥಾಲಯ:

ವಿಶ್ವವಿದ್ಯಾನಿಲಯದ ಗ್ರಂಥಾಲಯದ ಕಟ್ಟಡವನ್ನು ಸಹ ದುರಸ್ತಿ ಮಾಡಿಸಿ ನವೀಕರಿಸಬೇಕಾಗಿದೆ. ಇದಲ್ಲದೆ ಗ್ರಂಥಾಲಯವನ್ನು ಆಧುನೀಕರಣ ಮಾಡುವ ಜರೂರಿದೆ. ಗ್ರಂಥಾಲಯವು ಒಟ್ಟು 29000 ಪುಸ್ತಕಗಳನ್ನು ಹೊಂದಿದ್ದು ಯುಜಿಸಿ ಇನ್ಫೋನೆಟ್‌ನಿಂದ ಡಾಟಾಬೇಸ್‌ಗಳ ಬಳಕೆಗೆ ಅವಕಾಶವಿದೆ. ಶೋದ್‌ಗಂಗಾ ಯೋಜನೆಯಡಿಯಲ್ಲಿ ಕೃತಿಚೌರ್ಯ ಪರಿಶೀಲನಾ ಸಾಫ್ಟ್‌ವೇರ್(ಆ್ಯಂಟಿ ಪ್ಲೇಗರಿಸಂ ಸಾಫ್ಟ್‌ವೇರ್) ಅಳವಡಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಗ್ರಂಥಪಾಲಕರಾದ ಡಾ. ಅಂಜನಪ್ಪ ಹಾಗೂ ಇಬ್ಬರು ಸಿಬ್ಬಂದಿಯ ಸಹಾಯದಿಂದ ಗ್ರಂಥಾಲಯದ ನಿರ್ವಹಣೆಯಾಗುತ್ತಿದೆ.

ಊ. ಪ್ರಸಾರಾಂಗ:

ವಿಶ್ವವಿದ್ಯಾಲಯದ ವ್ಯವಸ್ಥೆಯಲ್ಲಿ ಪ್ರಸಾರಾಂಗ ಪ್ರಮುಖ ಪಾತ್ರ ವಹಿಸುತ್ತದೆ. ವಿಶ್ವವಿದ್ಯಾನಿಲಯದ ಇತರೆ ಚಟುವಟಿಕೆಗಳು, ವಿವಿಧ ಪಠ್ಯಪುಸ್ತಕಗಳ ಪ್ರಕಟಣೆ, ಸಂಶೋಧನಾ ಪತ್ರಿಕೆಗಳನ್ನು ಹೊರತರುವುದು, ಸಮಕಾಲೀನ ಪುಸ್ತಕಗಳು, ಭಾಷಾಂತರಗಳ/ಆಕರಗ್ರಂಥಗಳ ಮುದ್ರಣ ಮಾಡುವುದರ ಮೂಲಕ ಕನ್ನಡದ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವಂತಹ ಕಾರ್ಯಗಳು ಈ ಪ್ರಸಾರಂಗದಿಂದಲೇ ನಡೆಯಬೇಕಾಗಿದೆ. ಇಂತಹ ಪ್ರಸಾರಂಗದ ನಿರ್ವಹಣೆಗೆ ತಾತ್ಕಾಲಿಕವಾಗಿ ಗೌರವ ಸಂಯೋಜಕರನ್ನು ನೇಮಕ ಮಾಡಿಕೊಳ್ಳಬೇಕು ಅಥವಾ ನಮ್ಮಲ್ಲಿರುವ ಅಧ್ಯಾಪಕರೊಬ್ಬರಿಗೆ ಪ್ರಭಾರ ಜವಾಬ್ದಾರಿ ವಹಿಸಬಹುದಾಗಿದೆ.

ಋ. ಎನ್.ಎಸ್.ಎಸ್. ಚಟುವಟಿಕೆಗಳು

ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಘಟಕದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜ್(ಸ್ವಾಯತ್ತ)ನ ಸಹ ಪ್ರಾಧ್ಯಾಪಕರಾದ ಶ್ರೀ. ಗೋವಿಂದೆಗೌಡರವರು ಗೌರವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ/ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ವಿವಿಧ ಎನ್.ಎಸ್.ಎಸ್. ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದರ ಜೊತೆಗೆ ವಿಶ್ವವಿದ್ಯಾಲಯ ಆಚರಿಸುವ ವಿವಿಧ ಕಾರ್ಯಕ್ರಮಗಳು/ ರಾಷ್ಟ್ರೀಯ ಪ್ರಮುಖ ದಿನಾಚರಣೆಗಳನ್ನು ಆಯೋಜಿಸಿ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಹಾಯ ಮಾಡುತ್ತಿದ್ದಾರೆ.

ಕ. ದೈಹಿಕ ಶಿಕ್ಷಣ ಮತ್ತು ಕ್ರೀಡೆ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದೆ. ರಾಷ್ಟ್ರಾದ್ಯಂತ ವಿವಿಧ ವಿಶ್ವವಿದ್ಯಾನಿಲಯಗಳು ಆಯೋಜಿಸುವ ಕ್ರೀಡಾ ಸ್ಪರ್ಧೆಗಳಲ್ಲಿ

ವಿದ್ಯಾರ್ಥಿಗಳು ಭಾಗವಹಿಸಲು ವಿಶ್ವವಿದ್ಯಾನಿಲಯವು ಪ್ರೋತ್ಸಾಹ ನೀಡುತ್ತಲೇ ಇದೆ. ಅತ್ಯಂತ ಸಂತೋಷದಾಯಕ ವಿಷಯ ಹೇಳುವುದಾದರೆ, ನಮ್ಮ ವಿಶ್ವವಿದ್ಯಾನಿಲಯದ ಪುರುಷರ ಹಾಕಿ ತಂಡವು ಒರಿಸ್ಸಾದ ಭುವನೇಶ್ವರದಲ್ಲಿ ಆಯೋಜಿಸಿದ್ದ ಖೇಲೋ ಇಂಡಿಯಾ ಟೂರ್ನ್‌ಮೆಂಟ್‌ನಲ್ಲಿ ನ್ಯಾಷನಲ್ ಚಾಂಪಿಯನ್‌ಷಿಪ್ ಪಡೆದಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಹ ಕುಲಾಧಿಪತಿಗಳಾದ(ಪ್ರೊ ಚಾನ್ಸಲರ್) ಡಾ ಸಿ ಎನ್ ಅಶ್ವತ್‌ನಾರಾಯಣರವರು ಗೆದ್ದ ಹಾಕಿ ತಂಡವನ್ನು ಗೌರವಿಸಿದ್ದಲ್ಲದೆ ತಂಡದ ಪ್ರತಿಯೊಬ್ಬ ಆಟಗಾರರಿಗೆ ಹಾಗೂ ಮುಖ್ಯಸ್ಥರುಗಳಿಗೆ ತಲಾ 25000 ನಗದು ಬಹುಮಾನವನ್ನೂ ಸಹ ಘೋಷಣೆ ಮಾಡಿದರು. ದಕ್ಷಿಣ ವಲಯ ಹಾಗೂ ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲುವ ತಂಡಗಳಿಗೆ ನಗದು ಬಹುಮಾನ ನೀಡುವ ಬೆಂಗಳೂರು ವಿಶ್ವವಿದ್ಯಾನಿಲಯದ ರೂಢಿಯನ್ನು ನಮ್ಮ ವಿಶ್ವವಿದ್ಯಾನಿಲಯವು ಸಹ ಅಳವಡಿಸಿಕೊಂಡಿದೆ. ಸಂಯೋಜಿತ ಕಾಲೇಜೊಂದರ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಇಲಿಯಾಸ್ ಮೊಹಮ್ಮದ ಅವರು ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದಾರೆ. ನಿರಂತರವಾಗಿ ಅಂತರ್‌ಕಾಲೇಜು ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ.

ಖ. ಕೋವಿಡ್-19 ಪಿಡುಗು:

ಈ ಕೋವಿಡ್-19 ಪಿಡುಗು ಇಡೀ ಜಗತ್ತಿನಾದ್ಯಂತ ಜನ ಜೀವನದ ಮೇಲೆ ದುಷ್ಪರಿಣಾಮ ಬೀರಿದೆ. ಕೇಂದ್ರ ಸರ್ಕಾರದಿಂದ ಘೋಷಣೆಯಾದ ಲಾಕ್‌ಡೌನ್ ಕಾರಣಕ್ಕೆ ವಿಶ್ವವಿದ್ಯಾನಿಲಯವು ಸಹ ಅನ್ಯದಾರಿಯಿಲ್ಲದೆ ಶೈಕ್ಷಣಿಕ ಹಾಗೂ ಪರೀಕ್ಷಾ ಚಟುವಟಿಕೆಗಳೆಲ್ಲವನ್ನು ಮುಂದೂಡಿತ್ತು. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ(ಯುಜಿಸಿ)/ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಕೊಡುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಿತ್ತು. ಸಲಹೆ ಸೂಚನೆಗಳಿಗೆ ಅನುಗುಣವಾಗಿ, ವಿಶ್ವವಿದ್ಯಾನಿಲಯವು ಕೇವಲ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಗಳನ್ನು ಆಯೋಜಿಸಬೇಕಿತ್ತು. ಇತರೆ ಸೆಮಿಸ್ಟರ್‌ಗಳ ಫಲಿತಾಂಶವನ್ನು ಹಿಂದಿನ ಸೆಮಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳು ತೋರಿದ ಕಾರ್ಯಕ್ಷಮತೆ ಮತ್ತು ಆಂತರಿಕ ಮೌಲ್ಯಂಕಗಳ ಮೂಲಕ ನೀಡಬೇಕಿತ್ತು. ಈ ವಿಷಯದಲ್ಲಿ ವಿವರವಾದ ಸಲಹೆ ಸೂಚನೆಗಳನ್ನು ನೀಡಲಾಗಿತ್ತು. 2020-21 ರ ಶೈಕ್ಷಣಿಕ ವರ್ಷದಲ್ಲಿಯೂ ಸಹ ನಿರುತ್ಸಾಹ ಮತ್ತು ಅನಿಶ್ಚಿತೆ ಮೇಲುಗೈ ಸಾಧಿಸಿದೆ.

ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಶೈಕ್ಷಣಿಕವಾಗಿ ಸರ್ವಶ್ರೇಷ್ಠ ಕೇಂದ್ರವಾಗಿ ಬೆಳೆಯುವ ಎಲ್ಲಾ ಸಾಮರ್ಥ್ಯಗಳನ್ನು ಹೊಂದಿದೆ. ಖಾಸಗೀ ವಿಶ್ವವಿದ್ಯಾನಿಲಯಗಳ ಮತ್ತು ಸ್ವಾಯತ್ತ ಶಿಕ್ಷಣ ಸಂಸ್ಥೆಗಳ ನಡುವಿನ ಸ್ಪರ್ಧೆಯನ್ನೆ ಅವಕಾಶವನ್ನಾಗಿ ಬಳಸಿಕೊಂಡು ಬೆಳೆಯಬೇಕಾಗಿದೆ. ವಿಶ್ವವಿದ್ಯಾನಿಲಯವು

ಉತ್ತಮವಾದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆ ಪಡೆಯಬೇಕಾಗಿದೆ. ವಿಶ್ವವಿದ್ಯಾನಿಲಯದ ವ್ಯವಹಾರಗಳನ್ನು ವೃತ್ತಿಪರವಾಗಿ ನಿರ್ವಹಿಸಲು ಪ್ರತಿಭಾನ್ವಿತ ಮತ್ತು ಸಮರ್ಥ ಬೋಧಕ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ಅನುಭವಿ ನಿವೃತ್ತ ಪ್ರಾಧ್ಯಾಪಕರ ಸೇವೆಯನ್ನು ಬಳಸಿಕೊಳ್ಳಬೇಕು, ಬೋಧನಾ ಚಟುವಟಿಕೆಗಳನ್ನು ನಿರ್ವಹಿಸಲು ಗೌರವ ಪ್ರಾಧ್ಯಪಕರ ಸೇವೆ ಪಡೆಯಬೇಕಾಗಿದೆ. ಉನ್ನತ ಶಿಕ್ಷಣದ ಕನಸುಗಳನ್ನು ನನಸಾಗಿಸಲು ಖಾಲಿ ಇರುವ ಹುದ್ದೆಗಳನ್ನು ಖಾಯಂ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಬೇಕು, ಅತ್ಯಾಧುನಿಕ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

ಶೈಕ್ಷಣಿಕ ಮತ್ತು ಸಂಶೋಧನಾ ವಾತಾವರಣವಷ್ಟೇ ಮುಖ್ಯವಾಗುವ ಹಾಗೇ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಅನ್ನು ರೂಪಿಸಬೇಕು. ಈ ನಿಟ್ಟಿನಲ್ಲಿ ಕ್ಯಾಂಪಸ್ ಆಕರ್ಷಕ ಕೇಂದ್ರವಾಗಿರಬೇಕು, ಹೆಚ್ಚೆಚ್ಚು ಗಿಡ–ಮರಗಳನ್ನು ಬೆಳೆಸಿ ಹಸಿರುಮಯವಾಗಿಸಿ ಬೋದನೆ, ಕಲಿಕೆ ಮತ್ತು ಸಂಶೋಧನೆಗಳೇ ವಿಶ್ವವಿದ್ಯಾನಿಲಯದ ಶ್ರೇಷ್ಠ ಅಂಶಗಳನ್ನಾಗಿ ರೂಪಿಸುವ ಪರಿಸರವನ್ನು ನಿರ್ಮಾಣ ಮಾಡಬೇಕು.

ಪ್ರೊ. ಲಿಂಗರಾಜ ಗಾಂಧಿ
ಉಪಕುಲಪತಿಗಳು

1. ಸಾಮಾನ್ಯ ಮಾಹಿತಿಗಳು:

ಎ. ವಿಶ್ವವಿದ್ಯಾನಿಲಯದ ಹೆಸರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಬಿ. ಸ್ಥಾಪನೆಯಾದ ವರ್ಷ, ವೆಬ್‌ಸೈಟ್ ವಿಳಾಸ ಮತ್ತು ನ್ಯಾಕ್ ಗ್ರೇಡ್:

ಸ್ಥಾಪನೆಯಾದ ವರ್ಷ: 2015ರ ಆಗಸ್ಟ್ 13, ಕೆಎಸ್‌ಯು(ತಿದ್ದುಪಡಿ) ಕಾಯಿದೆ ೨೦೧೫

ಜಾಲತಾಣ ವಿಳಾಸ: **www.bcu.ac.in**

ನ್ಯಾಕ್ ಗ್ರೇಡ್ : ನ್ಯಾಕ್ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬೇಕಾಗಿದೆ.

ಸಿ. ನಿಯಂತ್ರಕರು ನೀಡುವ ವಿಶೇಷ ಸ್ಥಾನಮಾನ (ಯುಪಿಇ ಇತ್ಯಾದಿ): ಯಾವುದೂ ಇಲ್ಲ

ಕುಲಪತಿಗಳ ಹೆಸರು: ಪ್ರೊ. ಎಸ್. ಜಾಫೆಟ್

ಡಿ. ಕುಲಸಚಿವರು (ಆಡಳಿತ), ಕುಲಸಚಿವರು (ಮೌಲ್ಯಮಾಪನ),ವಿತ್ತಾಧಿಕಾರಿಗಳ ಹೆಸರು:

ಕುಲಸಚಿವರು : **ಪ್ರೊ. ರಾಮಚಂದ್ರಗೌಡ:** 01.04.2019 **ರಿಂದ** 03.07.2019

ಪ್ರೊ. ವಿ.ಶಿವರಾಮ್: 05.07.2019 **ರಿಂದ** 20.04.2019

ಕುಲಸಚಿವರು (ಮೌಲ್ಯಮಾಪನ): ಪ್ರೊ: ಎಂ. ಚಂದ್ರಪ್ಪ: 01.04.2019 **ರಿಂದ** 31.12.2019

ಪ್ರೊ: ಎಂ. ಪಾಂಡುರಂಗಪ್ಪ: 31.12.2019 **ರಿಂದ** 30.01.2020

ಪ್ರೊ: ಬಿ.ರಮೇಶ್: 31.01.2020 **ರಿಂದ ಪ್ರಸ್ತುತ**

ವಿತ್ತಾಧಿಕಾರಿಗಳ ಹೆಸರು: ಪ್ರೊ: ಎಂ. ರಾಮಚಂದ್ರ ಗೌಡ 01.04.2019 **ರಿಂದ** 03.07.2019

ಪ್ರೊ: ಎಂ. ಚಂದ್ರಪ್ಪ: 03.07.2019 **ರಿಂದ** 14.07.2019

ಶ್ರೀ ವಿ.ಡಿ.ನಿಶ್ಚಿತ್ 15.07.2019 **ರಿಂದ** 03.03.2020

ಜಿ. ವಿಶ್ವವಿದ್ಯಾನಿಲಯದ ವ್ಯಾಪ್ತಿ: ಬೆಂಗಳೂರು ನಗರ ಜಿಲ್ಲೆ 13 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಹೆಬ್ಬಾಳ, ಮಲ್ಲೇಶ್ವರಂ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ, ರಾಜಾಜಿನಗರ.

ಹೆಚ್. ಭೂಪ್ರದೇಶ, ಕಟ್ಟಡ, ಆಡಳಿತಾತ್ಮಕ ವ್ಯವಸ್ಥೆಯ ವಿವರಗಳನ್ನೊಳಗೊಂಡ ಕ್ಯಾಂಪಸ್/ಸ್ನಾತಕೋತ್ತರ ಕೇಂದ್ರಗಳ ಸಂಖ್ಯೆ:

ಎ) ಸೆಂಟ್ರಲ್ ಕಾಲೇಜು ಕ್ಯಾಂಪಸ್

ನೈಸರ್ಗಿಕ ವಿಜ್ಞಾನದ ಬ್ಲಾಕ್(ಪರೀಕ್ಷಾಂಗ ವಿಭಾಗ), ಗಣಿತ ಮತ್ತು ವಾಣಿಜ್ಯ ವಿಭಾಗ, ರಸಾಯನಶಾಸ್ತ್ರ ಮತ್ತು ಜೀವ ರಸಾಯನಶಾಸ್ತ್ರ, ಆಡಳಿತ ಕಛೇರಿ, ಉಪಕುಲಪತಿಯವರ ಮತ್ತು ಕುಲಸಚಿವರ ಕಛೇರಿಗಳು, ಹಳೆಯ ಭೌತಶಾಸ್ತ್ರ ಬ್ಲಾಕ್(ಪ್ರಸ್ತುತ ಕಲಾ ವಿಭಾಗಗಳು ಇವೆ.) ಫ್ಯಾಷನ್ ಅಂಡ್ ಅಪ್ಯಾರೆಲ್ ಡಿಸೈನ್ ವಿಭಾಗ, ಗ್ರಂಥಾಲಯ, ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಮತ್ತು ಜ್ಞಾನ ಜ್ಯೋತಿ ಸಭಾಂಗಣಗಳಿವೆ. ಆಡಳಿತ ಕಛೇರಿ ಕಟ್ಟಡದ ಸ್ವಲ್ಪ ಸ್ಥಳವನ್ನು ಡಾ ಬಿ ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಮತ್ತು ಗ್ರಂಥಾಲಯ ಕಟ್ಟಡದ ಸ್ಥಳವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಬಳಸಿಕೊಂಡಿದೆ.

ಬಿ) ಪ್ರಸನ್ನ ಕುಮಾರ ಬ್ಲಾಕ್:

ಸಮೂಹ ಸಂವಹನ ಮತ್ತು ಪತ್ರಿಕೋಧ್ಯಮ ವಿಭಾಗ, ಜಾಗತಿಕ ಭಾಷೆಗಳ ಕೇಂದ್ರ, ವಾಣಿಜ್ಯ ವಿಭಾಗದ ಹೊಸ ಕಟ್ಟಡ, ಹಳೆಯ ಕಾನೂನು ಕಾಲೇಜು ಕಟ್ಟಡ, ಹಳೆಯ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಕಟ್ಟಡ, ಕೆಲವು ಸಿಬ್ಬಂದಿಯ ಶಿಥಿಲಾವಸ್ಥೆಯಲ್ಲಿರುವ ಕ್ವಾಟ್ರಸ್, ಕ್ರಿಕೆಟ್ ಪೆವಿಲಿಯನ್, ಕ್ರೀಡಾ ಸೌಲಭ್ಯಗಳು, ದೈಹಿಕ ಶಿಕ್ಷಣದ ನಿರ್ದೇಶಕರ ಕಛೇರಿಯು ಇರುವ ಸದರಿ ಬ್ಲಾಕ್ ಹೆಚ್ಚು ಹಸಿರುಮಯವಾಗಿದೆ. ಈ ಕ್ಯಾಂಪಸ್‌ನಲ್ಲಿರುವ ಕಟ್ಟಡಗಳನ್ನು ಯುಜಿಸಿ, ಎಐಸಿಟಿಐಇ, ಐಸಿಎಚ್‌ಆರ್, ಕರ್ನಾಕಟ ನಿವೃತ್ತ ಉಪಕುಲಪತಿಗಳ ವೇದಿಕೆ ಹಾಗೂ ಹಂಪಿ ವಿಶ್ವವಿದ್ಯಾನಿಲಯದ ಕಛೇರಿಗಳಿಗೆ ಭೋಗ್ಯ/ಬಾಡಿಗೆಗೆ ನೀಡಲಾಗಿದೆ.

ಐ. ನಿಕಾಯಗಳ ಸಂಖ್ಯೆ:

ಕಲಾ ನಿಕಾಯ
ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ
ವಾಣಿಜ್ಯ ನಿಕಾಯ
ಶಿಕ್ಷಣ ನಿಕಾಯ

ಜೆ. ವಿಭಾಗಗಳ ಸಂಖ್ಯೆ: 23 **ಸ್ನಾತಕೋತ್ತರ ಅಧ್ಯಯನ ವಿಭಾಗಗಳು**

ವಿಜ್ಞಾನ ನಿಕಾಯ	೧. ಗಣಿತಶಾಸ್ತ್ರ ೨. ರಸಾಯನಶಾಸ್ತ್ರ ೩. ಜೀವ ರಸಾಯನಶಾಸ್ತ್ರ ೪. ಫ್ಯಾಷನ್ ಮತ್ತು ಅಪ್ಯೇರಲ್ ತಂತ್ರಜ್ಞಾನ ೫. ಭೌತಶಾಸ್ತ್ರ ೬. ಜೀವ ವಿಜ್ಞಾನ (ಸಸ್ಯ ವಿಜ್ಞಾನ) ೭. ಜೀವ ವಿಜ್ಞಾನ (ಪ್ರಾಣಿ ವಿಜ್ಞಾನ) ೮. ಪರಿಸರ ಮತ್ತು ಹವಾಮಾನ ಬದಲಾವಣೆ ೯. *ತಂತ್ರಜ್ಞಾನ

ಕಲಾ ನಿಕಾಯ	೧೦. ಸಂವಹನ ಮತ್ತು ಪತ್ರಿಕೋದ್ಯಮ ೧೧. ಜಾಗತಿಕ ಭಾಷೆಗಳ ಕೇಂದ್ರ ೧೨. ಕನ್ನಡ ೧೩. ಇಂಗ್ಲಿಷ್ ೧೪. ಅರ್ಥಶಾಸ್ತ್ರ ೧೫. ಇತಿಹಾಸ ೧೬. ರಾಜ್ಯಶಾಸ್ತ್ರ ೧೭. ಸಮಾಜಶಾಸ್ತ್ರ ೧೮. ಸಮಾಜ ಕಾರ್ಯ ೧೯. *ನಗರ ಅಧ್ಯಯನ ಮತ್ತು ಯೋಜನೆ ೨೦ *ಕಲೆ ಮತ್ತು ಸೌಂದರ್ಯ ಶಾಸ್ತ್ರ
ವಾಣಿಜ್ಯ ನಿಕಾಯ	೨೧. ವಾಣಿಜ್ಯಶಾಸ್ತ್ರ ೨೨. ನಿರ್ವಹಣಾ ಶಾಸ್ತ್ರ
ಕಾನೂನು ನಿಕಾಯ	೨೩. *ಕಾನೂನು ಮತ್ತು ಸಾರ್ವಜನಿಕ ನೀತಿ
*ಸರ್ಕಾರದಿಂದ ಮಂಜೂರಾಗಿದ್ದು ವಿಭಾಗಗಳನ್ನು ಪ್ರಾರಂಭಿಸಬೇಕಾಗಿದೆ	

ಕೆ. ಕಾಲೇಜುಗಳ ಸಂಖ್ಯೆ(ಘಟಕ/ ವಿಶ್ವವಿದ್ಯಾನಿಲಯ ಆಡಳಿತ ನಡೆಸುವ/ ಸ್ವಾಯತ್ತ/ ಸಂಯೋಜಿತ): ಸ್ನಾತಕೋತ್ತರ ಮತ್ತು/ಅಥವಾ ಸಂಶೋಧನಾ ಕೇಂದ್ರಗಳಿರುವ ಕಾಲೇಜುಗಳು:

ಘಟಕ ಕಾಲೇಜುಗಳು:	ಇಲ್ಲ
ಸ್ವಾಯತ್ತ ಕಾಲೇಜುಗಳು:	09
ಸಂಯೋಜನೆಗೊಂಡ ಕಾಲೇಜುಗಳು:	227
ಸ್ನಾತಕೋತ್ತರ ಕೋರ್ಸ್‌ಗಳಿರುವ ಕಾಲೇಜುಗಳು:	96
ಸಂಶೋಧನಾ ಕೇಂದ್ರಗಳಿರುವ ಕಾಲೇಜುಗಳು:	31

ಎಲ್. ಕೋರ್ಸ್‌ಗಳ ಒಟ್ಟು ಸಂಖ್ಯೆ:

ಅ. ಸ್ನಾತಕ ಪದವಿ ಕೋರ್ಸ್‌ಗಳ ಸಂಖ್ಯೆ : 09

ಆ. ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಸಂಖ್ಯೆ : 07

ಇ. ಒಂದು ವರ್ಷದ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಕೋರ್ಸ್‌ಗಳು : 03

ಈ. ಸರ್ಟಿಫಿಕೇಟ್ ಕೋರ್ಸ್‌ಗಳು : 03

ಸ್ನಾತಕ ಪದವಿ ಕೋರ್ಸ್‌ಗಳು	ಸ್ನಾತಕೋತ್ತರ ಪದವಿ ಕೋರ್ಸ್‌ಗಳು	ಪಿ ಜಿ ಡಿಪ್ಲೊಮಾ ಕೋರ್ಸ್‌ಗಳು	ಸರ್ಟಿಫಿಕೇಟ್ ಕೋರ್ಸ್‌ಗಳು
೧. ಬಿ ಎ ೨. ಬಿ ವಿ ಎ ೩. ಬಿ ಎಸ್ಸಿ ೪. ಬಿ ಕಾಂ ೫. ಬಿ ಬಿ ಎಂ/ಬಿ ಬಿಎ ೬. ಬಿ ಎಸ್ ಡಬ್ಲ್ಯೂ ೭. ಬಿ ಸಿ ಎ ೮. ಬಿ ವೋಕ್ ೯. ಬಿ ಇಡಿ ೧೦. ಬಿ ಪಿ ಇಡಿ	೧. ಎಂ ಎ ೨. ಎಂ ವಿ ಎ ೩. ಎಂ ಎಸ್ಸಿ ೪. ಎಂ ಕಾಂ ೫. ಎಂ ಟಿ ಟಿ ಎಂ ೬. ಎಂ ಎಸ್ ಡಬ್ಲ್ಯೂ ೭. ಎಂ ಸಿ ಎ ೮. ಎಂ ಇಡಿ	೧. ಮಾನವ ಸಂಪನ್ಮೂಲ ನಿರ್ವಹಣೆಯ ಪಿ ಜಿ ಡಿಪ್ಲೊಮೊ ೨. ವ್ಯಾಪಾರ ನಿರ್ವಹಣೆಯಲ್ಲಿ ಪಿ ಜಿ ಡಿಪ್ಲೊಮೊ ೩. ಕೈಗಾರಿಕೆ ಮತ್ತು ನಿರ್ಮಾಣ ಸುರಕ್ಷತಾ ನಿರ್ವಹಣೆಯಲ್ಲಿ ಡಿಪ್ಲೊಮೊ	೧. ಜರ್ಮನ್ ಸರ್ಟಿಫಿಕೇಟ್ ಕೋರ್ಸ್–೧,೨ ೨. ಜಪಾನೀಸ್ ವಾರಾಂತ್ಯದ ಸರ್ಟಿಫಿಕೇಟ್ ಕೋರ್ಸ್–೨ ೩. ಸರ್ಟಿಫಿಕೇಟ್ ಕೋರ್ಸ್: ಕನ್ನಡ

ಎಮ್. ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: ಸ್ನಾತಕ/ ಸ್ನಾತಕೋತ್ತರ(ಪುರುಷ/ಮಹಿಳೆ ಪ.ಜಾತಿ/ಪ.ಪಂಗಡ–ಸಮುದಾಯವಾರು)

ಕ್ಯಾಂಪಸ್‌ನಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಸ್ನಾತಕೋತ್ತರ 2019

ಕ್ರ. ಸಂ	ಹೆಸರು	ಪುರುಷ	ಮಹಿಳೆ	ಪ. ಜಾತಿ		ಪ. ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ		ಒಟ್ಟು
				ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	
೧.	ಕ್ಯಾಂಪಸ್ 2019	**463**	**442**	**186**	**59**	18	14	159	254	100	115	**905**

ಸಂಯೋಜಿತ ಕಾಲೇಜುಗಳಲ್ಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (ಸ್ನಾತಕೋತ್ತರ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು)

ಕ್ರ. ಸಂ	ಹೆಸರು	ಪುರುಷ	ಮಹಿಳೆ	ಪ. ಜಾತಿ		ಪ. ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ		ಒಟ್ಟು
				ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	
೨.	ಸಂಯೋಜಿತ ಕಾಲೇಜುಗಳು 2019	2520	2854	313	351	81	86	**1,204**	**1,591**	922	826	**5374**

ಸ್ನಾತಕ ಪದವಿ(ಯುಜಿ)ಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

ಕ್ರ. ಸಂ	ಹೆಸರು	ಪುರುಷ	ಮಹಿಳೆ	ಪ. ಜಾತಿ		ಪ. ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ		ಒಟ್ಟು
				ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	
೧	ಸಂಯೋಜಿತ ಕಾಲೇಜುಗಳು 2019	**30,530**	**32,802**	4312	5304	804	793	**15,085**	**16,750**	**10,329**	**9,955**	**63,332**

2. ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳು

ಅಕಾಡೆಮಿಕ್ ಕೌನ್ಸಿಲ್ ಸದಸ್ಯರು			
ಕ್ರ. ಸಂ	**ಗೌರವಾನ್ವಿತ ಸದಸ್ಯರ ಹೆಸರು**	**ಸ್ಥಾನಮಾನ**	**ಅವಧಿ**
1.	**ಉಪಕುಲಪತಿಯವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬೆಂಗಳೂರು – ೫೬೦ ೦೦೧	**ಅಧ್ಯಕ್ಷರು**	ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 15(2) ಪ್ರಕಾರ ಖಾಯಂ ಸದಸ್ಯರು
2.	**ಆಯುಕ್ತರು** ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(1)(ii) ಪ್ರಕಾರ ಖಾಯಂ ಸದಸ್ಯರು
3.	**ನಿರ್ದೇಶಕರು,** **ತಾಂತ್ರಿಕ** ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(iii) ಪ್ರಕಾರ ಖಾಯಂ ಸದಸ್ಯರು
ಕೆಎಸ್‌ಯು ಕಾಯಿದೆ 2000ರ ಸೆಕ್ಷನ್ 30(1)(iv) ಪ್ರಕಾರ ಕರ್ನಾಟಕ ವಿಧಾನ ಸಭೆಯ ಸಭಾಪತಿಗಳಿಂದ ವಿಧಾನ ಸಭೆಯ ಸದಸ್ಯರೊಬ್ಬರು/ಶಾಸಕರೊಬ್ಬರು ನಾಮನಿರ್ದೇಶನಗೊಂಡಿರುತ್ತಾರೆ.			
1	**ಶ್ರೀ ಎನ್ ಎ ಹ್ಯಾರಿಸ್‌ರವರು** ಮಾನ್ಯ ಶಾಸಕರು	**ಸದಸ್ಯರು**	
2.	**ಶ್ರೀಮತಿ, ಸೌಮ್ಯ ರೆಡ್ಡಿಯವರು,** ಮಾನ್ಯ ಶಾಸಕರು ೪೫೫/೭, ೧೫ನೇ ಕ್ರಾಸ್, ಲಕ್ಕಸಂದ್ರ, ಬೆಂಗಳೂರು – ೫೬೦ ೦೩೦	**ಸದಸ್ಯರು**	26.12.2018 **ರಿಂದ** 25.12.2021

ಕೆಎಸ್‌ಯು ಕಾಯಿದೆ 2000 ಸೆಕ್ಷನ್ 30(1)(v)ರ ಪ್ರಕಾರ ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿಗಳಿಂದ ವಿಧಾನ ಪರಿಷತ್‌ನ ಇಬ್ಬರು ಸದಸ್ಯರು ನಾಮನಿರ್ದೇಶನಗೊಂಡಿರುತ್ತಾರೆ.			
೧	**ಶ್ರೀ ಎಂ ಎ ಗೋಪಾಲಸ್ವಾಮಿ,** ಮಾನ್ಯ ವಿಧಾನ ಪರಿಷತ್ ಸದಸ್ಯರು, #೧೦, ಎರಡನೇ ಮಹಡಿ, ವೈಯಾಲಿಕಾವಲ್, ಬೆಂಗಳೂರು– ೫೬೦ ೦೦೩	**ಸದಸ್ಯರು**	30-06-2018 ರಿಂದ 02-07-2020
೨	**ಶ್ರೀ ಎಂ ನಾರಾಯಣಸ್ವಾಮಿ,** ಮಾನ್ಯ ವಿಧಾನ ಪರಿಷತ್ ಸದಸ್ಯರು, #೪೯೦, ಪ್ರಕೃತಿ, ೭ನೇ ಕ್ರಾಸ್, ೫ನೇ ಮುಖ್ಯ ರಸ್ತೆ ಜಗದೀಶ್‌ನಗರ, ಬೆಂಗಳೂರು–೫೬೦ ೦೭೫	**ಸದಸ್ಯರು**	30-06-2018 ರಿಂದ 02-07-2020
ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(1)(vi)ರ ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಸಂಯೋಜಿತ ಕಾಲೇಜುಗಳ ಹತ್ತು ಪ್ರಾಂಶುಪಾಲರುಗಳನ್ನು ರೊಟೇಷನ್ ಮಾದರಿಯಲ್ಲಿ ಮಾನ್ಯ ಉಪ ಕುಲಪತಿಗಳು ಎರಡು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡುತ್ತಾರೆ.			
1.	**ಡಾ. ಶಾಂತ ರಾಜೇಂದ್ರಕುಮಾರ್,** ಪ್ರಾಂಶುಪಾಲರು, ಡಾ. ಅಂಬೇಡ್ಕರ್ ಪದವಿ ಕಾಲೇಜು, ಬೆಂಗಳೂರು	**ಸದಸ್ಯರು**	30.10.2018 ರಿಂದ 31.12.2019
2.	**ಡಾ. ತೇಜಸ್ವಿನಿ,** ಪ್ರಾಂಶುಪಾಲರು, ಎಸ್‌ಜೆಆರ್‌ಸಿ ಮಹಿಳಾ ಪದವಿ ಕಾಲೇಜು, ಬೆಂಗಳೂರು.	**ಸದಸ್ಯರು**	30.10.2018 ರಿಂದ 31.12.2019
3.	**ಡಾ. ಹರೀಶ್ ಎಸ್,** ಪ್ರಾಂಶುಪಾಲರು, ವಿಜಯಾ ಸಂಜೆ ಕಾಲೇಜು, ಆರ್‌ವಿ ರಸ್ತೆ, ಬಸವನಗುಡಿ, ಬೆಂಗಳೂರು–೫೬೦ ೦೦೪	**ಸದಸ್ಯರು**	30.10.2018 ರಿಂದ 29.10.2020
4.	**ಡಾ. ಆಶಾ ಗಣೇಶ್** ಪ್ರಾಂಶುಪಾಲರು, ಸಿ ಬಿ ಭಂಡಾರಿ ಜೈನ್ ಕಾಲೇಜು ೮೪, ಕೆ ಕೆ ರೋಡ್, ಶಂಕರಪುರಂ ಬೆಂಗಳೂರು– ೫೬೦ ೦೦೪	**ಸದಸ್ಯರು**	
5.	**ಡಾ. ಲತಾ ಕುಮಾರಿ,** ಪ್ರಾಂಶುಪಾಲರು, ಸಂಜಯ್‌ಗಾಂಧಿ ಶಿಕ್ಷಣ ಕಾಲೇಜು, ಚೋಳ ನಗರ, ಹೆಬ್ಬಾಳ, ಬೆಂಗಳೂರು– ೫೬೦ ೦೩೨	**ಸದಸ್ಯರು**	

6.	**ಡಾ. ಬಿ ಎ ಅನುರಾಧ,** ಪ್ರಾಂಶುಪಾಲರು, ಆಲ್ ಅಮೀನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಲಾಲ್‌ಭಾಗ್ ಮುಖ್ಯ ದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–೫೬೦ ೦೨೭	**ಸದಸ್ಯರು**	
7.	**ಡಾ. ಪಾರ್ವತಿ** ಪ್ರಾಂಶುಪಾಲರು, ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು ೧೪ ನೇ ಮುಖ್ಯ ರಸ್ತೆ, ೨ನೇ ಹಂತ, ಜೆ ಪಿ ನಗರ, ಬೆಂಗಳೂರು–೫೬೦ ೦೭೮	**ಸದಸ್ಯರು**	
8.	**ಡಾ. ರಾಜೇಶ್ ಈ ಬಿ.** ಪ್ರಾಂಶುಪಾಲರು, ಕಾವೇರಿ ಬಿಇಡಿ ಕಾಲೇಜು ನಂ.೩/೧, ಕೊಡಿಗೆಹಳ್ಳಿ ಮುಖ್ಯ ರಸ್ತೆ, ಸಹಕಾರ ನಗರ, ಬೆಂಗಳೂರು–೫೬೦ ೦೯೨	**ಸದಸ್ಯರು**	
9.	**ಪ್ರೊ. ಡಿ. ಜಿ ಶ್ರೀನಿವಾಸಮೂರ್ತಿ** ಪ್ರಾಂಶುಪಾಲರು, ವಿವೇಕಾನಂದ ಶಿಕ್ಷಣ ಕಾಲೇಜು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ೨ನೇ ಹಂತ, ಬೆಂಗಳೂರು – ೫೬೦ ೦೫೫	**ಸದಸ್ಯರು**	
10.	**ಪ್ರೊ. ಕೆ ರಮೇಶ್** ಪ್ರಾಂಶುಪಾಲರು, ಆಲ್ ಅಮೀನ್ ಶಿಕ್ಷಣ ಕಾಲೇಜು, ಲಾಲ್‌ಭಾಗ್ ಮುಖ್ಯ ದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–೫೬೦ ೦೨೭	**ಸದಸ್ಯರು**	
11.	**ಡಾ. ಲೀಡಿಯಾ ಸ್ಯಾಮ್ಯುಯಲ್** ಪ್ರಾಂಶುಪಾಲರು, ಬಾಲ್ಡ್‌ವಿನ್ ವುಮೆನ್ಸ್ ಮೆಥಾಡಿಸ್ಟ್ ಕಾಲೇಜು, ನಂ.೯೦, ರಿಚ್‌ಮಂಡ್ ವೃತ್ತ, ಬೆಂಗಳೂರು–೫೬೦೦೨೫.	**ಸದಸ್ಯರು**	01.01.2020 ರಿಂದ 31.12.2021
12.	**ಡಾ. ಪದ್ಮಜಾ** ಪ್ರಾಂಶುಪಾಲರು, ಎಮ್‌ಎಲ್‌ಎ ಅಕಾಡೆಮಿ ಆಫ್ ಹೈಯರ್ ಲರ್ನಿಂಗ್, ೧೪ ನೇ ಕ್ರಾಸ್, ಮಲ್ಲೇಶ್ವರಮ್, ಬೆಂಗಳೂರು–೫೬೦ ೦೦೩	**ಸದಸ್ಯರು**	

ಕೆಎಸ್‌ಯು ಕಾಯಿದೆ 2000 ಸೆಕ್ಷನ್ 30(1)(vii) ರ ಪ್ರಕಾರ ಕೈಗಾರಿಕೋದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರೆ ವೃತ್ತಿ ನಿರತರನ್ನು ಕರ್ನಾಟಕ ಸರ್ಕಾರ ಮೂರು ವರ್ಷಗಳ ಅವಧಿ ಮೀರದಂತೆ ನಾಮನಿರ್ದೇಶನ ಮಾಡಿದ ಮೂವರು ಗಣ್ಯ ವ್ಯಕ್ತಿಗಳು.			
1.	**ಪ್ರೊ. ಕೆ ಎನ್ ಗೋದಾಮಣಿ, # ೭೪೯,** 'ಸಂಪಿಗೆ', ೬ನೇ ಬ್ಲಾಕ್, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–೫೬೦ ೦೧೦	**ಸದಸ್ಯರು**	30.06.2018 ರಿಂದ 29.06.2021
2.	**ಶ್ರೀಮತಿ ಅನುಪಮ ಎಸ್ ಬಿ** ಏಜೆನ್ಸೀಸ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–೫೬೦ ೦೬೦	**ಸದಸ್ಯರು**	30.06.2018 ರಿಂದ 29.06.2021
3	**ಡಾ. ಬಿ ಎನ್ ಉಮೇಶ್** #೧೪೪,೧೦ ಡೌನಿಂಗ್, ಕನ್ನಮಂಗಲ, ವೈಟ್‌ಫೀಲ್ಡ್ ಬೆಂಗಳೂರು–೫೬೦ ೦೬೭	**ಸದಸ್ಯರು**	30.06.2018 ರಿಂದ 29.06.2021
ಕೆಎಸ್‌ಯು ಕಾಯಿದೆ 2000 ಸೆಕ್ಷನ್ 30(1)(viii) ರ ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಐವರು ಪ್ರಾಧ್ಯಾಪಕರು.			
1	**ಡಾ. ಎಂ ಎಸ್ ಮಹದೇವ ನಾಯ್ಕ** ಪ್ರಾಧ್ಯಾಪಕರು, ಗಣಿತ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	26.04.2019 ರಿಂದ 05.06.2019 &12.02.2020 ರಿಂದ18.06.2020
2	**ಡಾ. ವಿ ಆರ್ ದೇವರಾಜ್** ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಜೀವರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	26.04.2019 ರಿಂದ 25.04.2021
3	**ಡಾ. ವಿ ಗಾಯತ್ರಿ** ಪ್ರಾಧ್ಯಾಪಕರು,ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	

4	**ಡಾ. ಎಸ್ ಹರಿಪ್ರಸಾದ್** ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	
5	**ಡಾ. ಪಿ ಆರ್ ಚೇತನ** ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಪ್ರಾಧ್ಯಾಪಕರು,ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು –೫೬೦ ೦೦೧	**ಸದಸ್ಯರು**	
6	**ಡಾ. ಮುನಿನಾರಾಯಣಪ್ಪ** ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	06.06.2019 ರಿಂದ11.02.2020

ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 30(1) (ix)ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ಎರಡು ವರ್ಷ ಅವದಿಗೆ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಡೀನ್‌ರು			
1	**ಡಾ. ಎಂ ಪಾಂಡುರಂಗಪ್ಪ , ಡೀನರು** ವಿಜ್ಞಾನ ನಿಖಾಯದ ಡೀನ್‌ರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	26.04.2019 ರಿಂದ 25.04.2021
2	**ಡಾ. ಎಂ ಮುನಿರಾಜು, ಡೀನರು** ವಾಣಿಜ್ಯ ನಿಖಾಯದ ಡೀನ್‌ರು, ವಾಣಿಜ್ಯ ವಿಭಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	
3	**ಡಾ. ಎನ್ ನರಸಿಂಹಮೂರ್ತಿ, ಡೀನರು** ಕಲಾ ನಿಖಾಯದ ಡೀನ್‌ರು, ಸಂವಹನ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	

ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 30(1)(x)ರಪ್ರಕಾರ ಎರಡು ವರ್ಷ ಅವದಿಗೆ ಉಪಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಆರು ವಿದ್ಯಾರ್ಥಿಗಳು	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 30(1)(xi)ರಪ್ರಕಾರ ಮೂರು ವರ್ಷಗಳ ಅವದಿಗೆ ಕರ್ನಾಟಕ ಸರ್ಕಾರದಿಂದ ನಾಮ ನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಆರು ವ್ಯಕ್ತಿಗಳು	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 30(1)(xii)ರಪ್ರಕಾರ ಗ್ರಂಥಪಾಲಕರು	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 30(1)(xiii)ರಪ್ರಕಾರ ವಿದ್ಯಾರ್ಥಿ ಕಲ್ಯಾಣ ಸಂಸ್ಥೆಯ ನಿರ್ದೇಶಕರು	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(1)(xiv)ರ ಪ್ರಕಾರ ಯೋಜನೆ, ಶಿಸ್ತು ಪಾಲನಾ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು.	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(1)(xv) ರ ಪ್ರಕಾರ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು.	**ಖಾಲಿಯಿದೆ**		
ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30(1)(xvi) ರ ಪ್ರಕಾರ ದೈಹಿಕ ಶಿಕ್ಷಣ ನಿರ್ದೇಶಕರು.	**ಖಾಲಿಯಿದೆ**		
1	**ಕುಲಸಚಿವರು(ಮೌಲ್ಯಮಾಪನ)** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 18(2) ಪ್ರಕಾರ ಖಾಯಂ ಸದಸ್ಯರು**
2	**ಹಣಕಾಸು ಅಧಿಕಾರಿ** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 19(3) ಪ್ರಕಾರ ಖಾಯಂ ಸದಸ್ಯರು**
3	**ಕುಲಸಚಿವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯ ಕಾರ್ಯದರ್ಶಿ**	**ಕೆಎಸ್‌ಯು ಕಾಯಿದೆ 2000 ರಸೆಕ್ಷನ್ 17(2) ಪ್ರಕಾರ ಖಾಯಂ ಸದಸ್ಯರು**

ಸಿಂಡಿಕೇಟ್ ಸದಸ್ಯರು

ಕ್ರ. ಸಂ	ಗೌರವಾನ್ವಿತ ಸದಸ್ಯರ ಹೆಸರು	ಸ್ಥಾನಮಾನ	ಅವಧಿ
1.	**ಉಪಕುಲಪತಿಯವರು** ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಬೆಂಗಳೂರು – ೫೬೦ ೦೦೧	**ಅಧ್ಯಕ್ಷರು**	**ಕೆಎಸ್‌ಯು ಕಾಯಿದೆ** 2000 ರಸೆಕ್ಷನ್ 18(2) **ಪ್ರಕಾರ ಖಾಯಂ ಸದಸ್ಯರು**
2.	**ಆಯುಕ್ತರು** ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	**ಕೆಎಸ್‌ಯು ಕಾಯಿದೆ** 2000 ರಸೆಕ್ಷನ್ 19(3) **ಪ್ರಕಾರ ಖಾಯಂ ಸದಸ್ಯರು**
3.	**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ,** ಕರ್ನಾಟಕ ಸರ್ಕಾರ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	**ಕೆಎಸ್‌ಯು ಕಾಯಿದೆ** 2000 ರಸೆಕ್ಷನ್ 17(2) **ಪ್ರಕಾರ ಖಾಯಂ ಸದಸ್ಯರು**
	ಕೆಎಸ್‌ಯು ಕಾಯಿದೆ 2000 28(1)(ಡಿ) **ರ ಪ್ರಕಾರ ಮಾನ್ಯ ಉಪಕುಲಪತಿಯವರಿಂದ ಒಂದು ವರ್ಷದ ಕಾಲಾವಧಿಗೆ ರೊಟೇಷನ್ ಆಧಾರದಲ್ಲಿ ನಾಮನಿರ್ದೇಶನಗೊಂಡ ಡೀನ್‌ರು**		
1.	**ಡಾ. ಎನ್. ನರಸಿಂಹಮೂರ್ತಿ** ಕಲಾ ನಿಖಾಯದ ಡೀನ್‌ರು, ಸಂವಹನ ಪತ್ರಿಕೋದ್ಯಮ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	21-03-2019 ರಿಂದ 9-10-2019
2.	**ಡಾ. ಎಂ ಪಾಂಡುರಂಗಪ್ಪ** ವಿಜ್ಞಾನ ನಿಖಾಯದ ಡೀನ್‌ರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	30.10.2019 ರಿಂದ 29.10.2020
	ಕೆಎಸ್‌ಯು ಕಾಯಿದೆ 2000 28(1)(ಇ) **ರ ಪ್ರಕಾರ ಕುಲಾಧಿಪತಿಯವರಿಂದ ನಾಮನಿರ್ದೇಶನಗೊಂಡ ಶಿಕ್ಷಣ ತಜ್ಞರು ಅಥವಾ ಕೈಗಾರಿಕೋದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರೆ ವೃತ್ತಿನಿರತ ಇಬ್ಬರು ಗಣ್ಯ ವ್ಯಕ್ತಿಗಳು.**		
1.	**ಡಾ. ಅರವಿಂದ್ ಹೆಚ್ ಟಿ** ನಂ. ೯೯, ಶ್ರೀ ಛಾಯಾ ನಿಲಯ, ೧ನೇ ಮುಖ್ಯ ರಸ್ತೆ, ಕನಕ ಲೇಔಟ್, ಬಿಎಸ್‌ಕೆ ೨ನೇ ಹಂತ, ಬೆಂಗಳೂರು – ೫೬೦ ೦೭೦.	**ಸದಸ್ಯರು**	31-07-2018 ರಿಂದ 30-07-2021

2.	**ಶ್ರೀ ಹೆಚ್. ಆರ್. ಸತೀಶ್** ನಂ. ೧೫, ೧ನೇ ಅಡ್ಡ ರಸ್ತೆ, ಸಿದ್ಧಿ ವಿನಾಯಕ ಲೇಔಟ್, ಸಂಜಯ್‌ನಗರ ಬೆಂಗಳೂರು –೫೬೦ ೦೯೪.	**ಸದಸ್ಯರು**	31-07-2018 ರಿಂದ 30-07-2021
	ಕೆಎಸ್‌ಯು ಕಾಯಿದೆ 2000 28(1)(ಎಫ್) ರ ಪ್ರಕಾರ ಮಾನ್ಯ ಉಪ ಕುಲಪತಿಯವರಿಂದ ಸೇವಾ ಹಿರಿತನದ ಆಧಾರದಲ್ಲಿ ರೊಟೇಷನ್ ಮಾದರಿಯಲ್ಲಿ ಒಂದು ವರ್ಷ ಅವದಿಗೆ ನಾಮನಿರ್ದೇಶನಗೊಂಡ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರುಗಳು– ಇವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗಿರಬೇಕು.		
1.	**ಡಾ. ಶಾಂತಿ ರಾಜೇಂದ್ರಕುಮಾರ್** ಪ್ರಾಂಶುಪಾಲರು, ಡಾ. ಅಂಬೇಡ್ಕರ್ ಪದವಿ ಕಾಲೇಜು, ಬೆಂಗಳೂರು	**ಸದಸ್ಯರು**	30-10-2018 ರಿಂದ 29-10-2019
2.	**ಡಾ. ಹರೀಶ್ ಎಸ್** ಪ್ರಾಂಶುಪಾಲರು, ವಿಜಯ ಸಂಜೆ ಕಾಲೇಜು, ಆರ್ ವಿ ರಸ್ತೆ, ಬಸವನಗುಡಿ, ಬೆಂಗಳೂರು–೫೬೦ ೦೦೪	**ಸದಸ್ಯರು**	
3.	**ಡಾ. ಆಶಾ ಗಣೇಶ್,** ಪ್ರಾಂಶುಪಾಲರು, ಸಿ ಬಿ ಬಂಡಾರಿ ಜೈನ್ ಕಾಲೇಜು, ೮೪, ಕೆ ಆರ್ ರಸ್ತೆ, ಶಂಕರಪುರಂ, ಬೆಂಗಳೂರು–೫೬೦ ೦೦೪	**ಸದಸ್ಯರು**	
4.	**ಡಾ. ಲತಾ ಕುಮಾರಿ,** ಪ್ರಾಂಶುಪಾಲರು, ಸಂಜಯ್‌ಗಾಂಧಿ ಶಿಕ್ಷಣ ಕಾಲೇಜು, ಚೋಳ ನಗರ, ಹೆಬ್ಬಾಳ ಬೆಂಗಳೂರು–೫೬೦ ೦೩೨	**ಸದಸ್ಯರು**	
5.	**ಡಾ. ಬಿ ಎ ಅನುರಾಧ,** ಪ್ರಾಂಶುಪಾಲರು, ಆಲ್ ಅಮೀನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಲಾಲ್‌ಭಾಗ್ ಮುಖ್ಯ ದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು–೫೬೦ ೦೨೭	**ಸದಸ್ಯರು**	30.10.2019 ರಿಂದ 29.10.2020
6.	**ಡಾ. ಪಾರ್ವತಿ** ಪ್ರಾಂಶುಪಾಲರು, ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು, ೧೪ ನೇ ಮುಖ್ಯ ರಸ್ತೆ, ೨ನೇ	**ಸದಸ್ಯರು**	

	ಹಂತ, ಜೆ ಪಿ ನಗರ, ಬೆಂಗಳೂರು–೫೬೦ ೦೭೮		
7.	**ಡಾ. ರಾಜೇಶ್ ಈ ಬಿ.** ಪ್ರಾಂಶುಪಾಲರು, ಕಾವೇರಿ ಬಿಇಡಿ ಕಾಲೇಜು ನಂ.೩/೧, ಕೊಡಿಗೆಹಳ್ಳಿ ಮುಖ್ಯ ರಸ್ತೆ, ಸಹಕಾರ ನಗರ, ಬೆಂಗಳೂರು–೫೬೦ ೦೯೨	**ಸದಸ್ಯರು**	
8.	**ಪ್ರೊ. ಡಿ. ಜಿ ಶ್ರೀನಿವಾಸಮೂರ್ತಿ** ಪ್ರಾಂಶುಲಪಾಲರು, ವಿವೇಕಾನಂದ ಶಿಕ್ಷಣ ಕಾಲೇಜು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ೨ನೇ ಹಂತ, ಬೆಂಗಳೂರು – ೫೬೦ ೦೫೫	**ಸದಸ್ಯರು**	
	ಕೆಎಸ್‌ಯು ಕಾಯಿದೆ 2000 ೨೮(೧)(ಜಿ) ರ ಪ್ರಕಾರ ಮೂರು ವರ್ಷಗಳ ಅವಧಿ ಮೀರದಂತೆ ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶನಗೊಂಡ ಆರು ಗಣ್ಯವ್ಯಕ್ತಿಗಳ ಈ ಮುಂದಿನ ಅಂಶಗಳಿಗೆ ಅನ್ವಯಿಸಿದವರಾಗಿರಬೇಕು. **ಅ) ಒಬ್ಬರು ಪ. ಜಾತಿ ಅಥವಾ ಪ. ಪಂಗಡಕ್ಕೆ ಸೇರಿದ ವ್ಯಕ್ತಿಯಾಗಿರಬೇಕು** **ಆ) ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಯಾಗಿರಬೇಕು.** **ಇ) ಒಬ್ಬರು ಮಹಿಳೆಯಾಗಿರಬೇಕು** **ಈ) ಒಬ್ಬರು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರದ ವ್ಯಕ್ತಿಯಾಗಿರಬೇಕು** **ಉ) ಇಬ್ಬರು ಇತರೆಯವರಾಗಿರಬೇಕು.**		
1.	**ಶ್ರೀ ಕರಣ್ ಕುಮಾರ್** # ೫೦೯, ೩೦ನೇ ಮುಖ್ಯರಸ್ತೆ, ಅತ್ತಿಮಬ್ಬೆ, ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ, ಬಿಎಸ್‌ಕೆ ೩ನೇ ಹಂತ, ಬೆಂಗಳೂರು– ೫೬೦ ೦೮೫	**ಸದಸ್ಯರು**	12.12.2019 ರಿಂದ 11.12.2022
2.	**ಶ್ರೀ ಹೆಚ್ ಎನ್ ಹರಿಪ್ರಸಾದ್** ನಂ. ೨೬೩, ಹಲುಬಾವಿ ರಸ್ತೆ, ಪಂಚಮುಖಿ ವಿನಾಯಕ ದೇವಸ್ಥಾನದ ಹತ್ತಿರ, ವರ್ತೂರು, ಬೆಂಗಳೂರು–೫೬೦ ೦೭೮	**ಸದಸ್ಯರು**	

3.	**ಶ್ರೀಮತಿ ಜ್ಯೋತಿ ವಿಜಯ್** ನಂ–೧೬, ೧ನೇ ಅಡ್ಡ ರಸ್ತೆ, ೨೪ನೇ ಮುಖ್ಯ ರಸ್ತೆ, ೨ನೇ ಹಂತ, ಜೆ.ಪಿ ನಗರ, ಬೆಂಗಳೂರು–೫೬೦ ೦೭೮.	**ಸದಸ್ಯರು**	
4.	**ಶ್ರೀ ಟಿ ಹೆಚ್ ಶ್ರೀನಿವಾಸಯ್ಯ,** ನಂ–೩೫/೯, ೨ನೇ ಅಡ್ಡ ರಸ್ತೆ, ಮೈಕೋ ಲೇಔಟ್, ಅತ್ತಿಗುಪ್ಪೆ, ವಿಜಯ ನಗರ ಬೆಂಗಳೂರು–೫೬೦ ೦೪೦.	**ಸದಸ್ಯರು**	
5.	**ಡಾ. ಆರ್ ಕೆ ಚಂದ್ರನಾಥ್** ನಂ೨೦೨೯, ೨೬ನೇ ಅಡ್ಡ ರಸ್ತೆ, ಬಿಎಸ್‌ಕೆ ೨ನೇ ಹಂತ, ಬೆಂಗಳೂರು–೫೬೦ ೦೭೦.	**ಸದಸ್ಯರು**	
6.	**ಶ್ರೀ ಥಾಮಸ್ ನೀಲಿಯಾರ ಬಿನ್ ಚೆರಿಯಾನ್ ನೀಲಿಯಾರ** ನಂ–೧೪೫, ಜಲ ವಾಯು ವಿಹಾರ, ಕಮ್ಮನಹಳ್ಳಿ, ಬೆಂಗಳೂರು– ೫೬೦ ೦೪೩.	**ಸದಸ್ಯರು**	
	ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ ೨೮(೧)(ಹೆಚ್) ರ ಪ್ರಕಾರ ಸೇವಾ ಹಿರಿತನದ ಆಧಾರದಲ್ಲಿ ರೊಟೇಷನ್ ಮಾದರಿಯಲ್ಲಿ ಉಪಕುಲಪತಿಗಳಿಂದ ಒಂದು ವರ್ಷ ಕಾಲಾವದಿಗೆ ನಾಮನಿರ್ದೇಶನ ಗೊಂಡು ರಾಜ್ಯ ಸರ್ಕಾರದಿಂದ ಅನುಮೋದನೆಯಾದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಒಬ್ಬರು ಪ್ರಾಧ್ಯಾಪಕರು.		
1.	**ಡಾ. ವಿ ಆರ್ ದೇವರಾಜ್** ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಜೀವ ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧	**ಸದಸ್ಯರು**	30.10.2019 ರಿಂದ 29.10.2020
2.	**ನಿರ್ದೇಶಕರು** ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು – ೫೬೦ ೦೦೯	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 28(1)(ಐ) ಪ್ರಕಾರ ಖಾಯಂ ಸದಸ್ಯರು**

3.	**ಆಯುಕ್ತರು ಸಾರ್ವಜನಿಕ** ಸಲಹಾ ಸೂಚನಾ ಇಲಾಖೆ, ನೃಪತುಂಗಾ ರಸ್ತೆ, ಬೆಂಗಳೂರು – ೫೬೦ ೦೦೧	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 28(1)(ಜೆ) ರ ಪ್ರಕಾರ ಖಾಯಂ ಸದಸ್ಯರು**
4.	**ನಿರ್ದೇಶಕರು** ಪದವಿ ಪೂರ್ವ ಶಿಕ್ಷಣ ಮಂಡಳಿ ೧೮ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬೆಂಗಳೂರು – ೫೬೦ ೦೦೩	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 28(1)(ಕೆ) ರ ಪ್ರಕಾರ ಖಾಯಂ ಸದಸ್ಯರು**
5.	**ಕುಲಸಚಿವರು(ಮೌಲ್ಯಮಾಪನ)** ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯರು**	**ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 28(1)(ಎಲ್) ರ ಪ್ರಕಾರ ಖಾಯಂ ಸದಸ್ಯರು**
6.	**ಕುಲಸಚಿವರು** ಸಿಂಡಿಕೇಟ್ ಸದಸ್ಯ ಕಾರ್ಯದರ್ಶಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ೫೬೦ ೦೦೧.	**ಸದಸ್ಯ ಕಾರ್ಯದರ್ಶಿ**	**ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 28(1)(ಎಂ) ರ ಪ್ರಕಾರ ಖಾಯಂ ಸದಸ್ಯರು**

ಎ. ಶಕ್ತಿ ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಮತ್ತು ಸವಾಲುಗಳ (ಎಸ್‌ಡಬ್ಲ್ಯೂಓಸಿ) ವಿಶ್ಲೇಷಣೆ ಮತ್ತು ಕೈಗೊಂಡ ಕ್ರಮಗಳು:

ಶಕ್ತಿ ಸಾಮರ್ಥ್ಯಗಳು:

- ವಿಶ್ವವಿದ್ಯಾನಿಲಯವು ಬೆಂಗಳೂರು ನಗರದ ಹೃದಯ ಭಾಗದಲ್ಲಿದೆ.
- ಬದ್ಧತೆಯಿರುವ ಪ್ರಾಧ್ಯಾಪಕ ಹಾಗೂ ಆಡಳಿತ ವರ್ಗ.
- ಯಾಂತ್ರೀಕೃತ ಪರೀಕ್ಷಾ ವ್ಯವಸ್ಥೆ.
- ಶ್ರೇಷ್ಠ ಐತಿಹಾಸಿಕ ಮತ್ತು ಶೈಕ್ಷಣಿಕ ಪರಂಪರೆ
- ನಗರದೆಲ್ಲೆಡೆ ಇರುವ ಅತ್ಯುತ್ತಮ ಶೈಕ್ಷಣಿಕ ಮತ್ತು ಸಂಶೋದನಾ ಸಂಸ್ಥೆಗಳು ಬೋಧಕ ಸಿಬ್ಬಂದಿ ಖ್ಯಾತ ವಿದ್ವಾಂಸರೊಂದಿಗೆ ಚರ್ಚೆ–ಸಂವಾದ ಮಾಡಲು ಅವಕಾಶ ಒದಗಿಸುತ್ತದೆ.
- ವಿಶ್ವ ದರ್ಜೆಯ ಸಾರಿಗೆ ಸೌಲಭ್ಯ.
- ಪ್ರಮುಖ ಪಿಎಸ್‌ಇಗಳು, ಎಂಎನ್‌ಸಿಗಳು ಹಾಗೂ ಖಾಸಗೀ ಕಾರ್ಪೊರೇಟ್ ಸಂಸ್ಥೆಗಳು ಬೆಂಗಳೂರು ನಗರದಲ್ಲಿಯೇ ಇವೆ.

- ಅತ್ಯುತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಲಭ್ಯವಿದೆ.
- ಆಟದ ಮೈದಾನಗಳು, ಹೊರಾಂಗಣ ಕ್ರೀಡಾಂಗಣದಂತಹ ಕ್ರೀಡಾ ಸೌಲಭ್ಯವಿದೆ.
- ವಿಶಾಲವಾದ ಗ್ರಂಥಾಲಯ ಹಾಗೂ ಡಿಜಿಟಲ್ ಸಂಪನ್ಮೂಲದ ಸೌಲಭ್ಯವಿದೆ.

ದೌರ್ಬಲ್ಯಗಳು:

- ಬೋಧಕ ಮತ್ತು ಬೋಧಕೇತರ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲದ ಕೊರತೆ.
- ಶಿಥಿಲಾವಸ್ಥೆಯಲ್ಲಿರುವ ಭೌತಿಕ ಕಟ್ಟಡಗಳು.
- ಪರಿಣಾಮಕಾರಿಯಾದ ಸಂಶೋಧನೆಗೆ ಹಣಕಾಸಿನ ಕೊರತೆ.
- ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಕೋರ್ಸ್‌ಗಳು ಕಡಿಮೆಯಿರುವುದು.
- ಮಹತ್ವಾಕಾಂಕ್ಷೆಯ ಶೈಕ್ಷಣಿಕ ಕೋರ್ಸ್‌ಗಳನ್ನು ಶುರುಮಾಡುವಲ್ಲಿ ಅಸಮರ್ಪಕ ಮೂಲಭೂತ ಸೌಕರ್ಯಗಳು.
- ವಿವಿಯಿಂದ ಮಾನ್ಯತೆ ಪಡೆದಿರುವ ಹಾಗೂ ಸ್ವಾಯತ್ತ ಕಾಲೇಜುಗಳ ನಡುವಿನ ಸಂಬಂಧಗಳು ದುರ್ಬಲವಾಗಿರುವುದು ಹಾಗೂ ಅಸಮಾನವಾಗಿರುವುದು.
- ವಿದ್ಯಾರ್ಥಿ ಸಾಮರ್ಥ್ಯಗಳಲ್ಲಿ ಅಸಮಾನವಾಗಿರುವುದು.
- ಮುಂದೆ ವಿಶ್ವವಿದ್ಯಾನಿಲಯವನ್ನು ಇನ್ನಷ್ಟು ವಿಸ್ತರಣೆ ಮಾಡಲು ಭೂಪ್ರದೇಶದ ಕೊರತೆ.

ಅವಕಾಶಗಳು:

- ರಾಜ್ಯದ ಶ್ರೇಷ್ಠ ಮತ್ತು ಹೊಸ ಸ್ವರೂಪದ ಸಾರ್ವಜನಿಕ ವಿಶ್ವವಿದ್ಯಾನಿಲಯವನ್ನಾಗಿ ರೂಪಿಸುವ ನಿರೀಕ್ಷೆ ಇದೆ.
- ಬೆಂಗಳೂರು ಎಂಬ ಚಿತ್ರಣಕ್ಕೆ ಕಳಶಪ್ರಾಯವಾಗಲಿದೆ.
- 2020 ರ ಹೊಸ ಶಿಕ್ಷಣ ಕಾಯಿದೆಯ ಅಗತ್ಯಗಳಿಗೆ ಪೂರಕವಾಗಿ ಹೊಸ ಶೈಕ್ಷಣಿಕ ಸ್ವರೂಪಗಳನ್ನು ಒಟ್ಟುಗೂಡಿಸುತ್ತದೆ.
- ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಹಾಗೂ ಸ್ವಾಯತ್ತ ಕಾಲೇಜುಗಳಲ್ಲಿ ಉತ್ಕೃಷ್ಠ ಸಂಸ್ಥೆಗಳ ಸಮೂಹಗಳಿಗೆ ಉತ್ತೇಜಿಸುವುದು.
- ಹಳೆ ವಿದ್ಯಾರ್ಥಿ ಸಂಘ ಮತ್ತು ವಿಶ್ವವಿದ್ಯಾನಿಲಯದ ನಡುವೆ ಪ್ರಬಲವಾದ ಸಂಪರ್ಕ ಜಾಲ ರೂಪಿಸುವುದು.
- ಜೀವನಪರ್ಯಂತ ಕಲಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ಉದ್ಯೋಗವಕಾಶಗಳನ್ನು ವೃದ್ಧಿಸುವುದು.

- ಸಾರ್ವಜನಿಕ ಏಜೆನ್ಸಿಗಳು, ಸರ್ಕಾರಿ ಇಲಾಖೆಗಳು, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಹಾಗೂ ಕೈಗಾರಿಕೆಗಳೊಂದಿಗೆ ಸಹಕರಿಸುವುದು.
- ಸಾರ್ವಜನಿಕವಾಗಿ ಚರ್ಚೆ ನಡೆಯುವ ಮತ್ತು ನಾಗರೀಕರು ಮಧ್ಯೆ ಪ್ರವೇಶ ಮಾಡುವಂತಹ ಪೂರಕ ಪರಿಸರವನ್ನು ರೂಪಿಸುವುದು.
- ಸಾಂಸ್ಕೃತಿಕ, ಕ್ರೀಡಾ ಹಾಗೂ ಸಹ ಪಠ್ಯ ಚಟುವಟಿಕೆಗಳಲ್ಲಿ ಅಂತರ್‌ಸಂಸ್ಥೆಗಳ ನಡುವೆ ಸಹಯೋಗ ಮತ್ತು ಸಹಕಾರವನ್ನು ಬೆಳೆಸುವುದು.
- ವಿಶ್ವವಿದ್ಯಾನಿಲಯ–ಕೈಗಾರಿಕೆಗಳ ನಡುವೆ ಸಂಪರ್ಕವೇರ್ಪಡಿಸುವ ಕಾರ್ಯಕ್ರಮಗಳನ್ನು ರೂಪಿಸುವುದು.
- ವಿದ್ವಾಂಸರೊಂದಿಗೆ ಸಮಾಲೋಚಿಸಿ ಹೊಸ ಪೀಳಿಗೆಗೆ ಅನುಗುಣವಾಗಿ ಪಠ್ಯಕ್ರಮವನ್ನು ಉನ್ನತೀಕರಿಸುವುದು.
- ಪೂರಕ ಬೋಧನೆ ಮತ್ತು ಸಂಶೋಧನೆಗೆ ಸ್ಥಳೀಯವಾಗಿ ಲಭ್ಯವಾಗುವ ಮಾನವ ಸಂಪನ್ಮೂಲ ವ್ಯಕ್ತಿಗಳನ್ನು ಗುರ್ತಿಸುವುದು ಮತ್ತು ಅವರ ಸೇವೆ ಪಡೆಯುವುದು.
- ಸಮಾಲೋಚನಾ ಕಾರ್ಯತಂತ್ರಗಳ ಮೂಲಕ ಆದಾಯವನ್ನು ವೃದ್ಧಿಸಲು ಸಂಶೋಧನಾ ಅವಕಾಶಗಳನ್ನು ಹೆಚ್ಚು ಬಳಸಿಕೊಳ್ಳುವುದು.
- ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು.
- ಉದ್ಯೋಗವಕಾಶಗಳನ್ನು ಒದಗಿಸಲು ಸಮಾಲೋಚನಾ ಸೇವೆಗಳನ್ನು ವಿಸ್ತರಿಸುವ ಅವಕಾಶವಿದೆ.
- ಉತ್ಕೃಷ್ಠ ಸಂಶೋಧನೆ ಕೈಗೊಳ್ಳಲು ಮತ್ತು ಬೋಧನಾ ಗುಣಮಟ್ಟ ಬೆಳೆಸಿಕೊಳ್ಳಲು ಸ್ಥಳೀಯವಾಗಿ ಲಭ್ಯವಿರುವ ಅಂತರ್‌ರಾಷ್ಟ್ರೀಯ ಪ್ರಯೋಗಾಲಯ/ಸಂಸ್ಥೆಗಳ ಹಾಗೂ ವಿವಿಯ ಸಿಬ್ಬಂದಿ ನಡುವೆ ಸಂಪರ್ಕವೇರ್ಪಡಲು ಅವಕಾಶಗಳನ್ನು ಒದಗಿಸಿವುದು.
- ನ್ಯಾಯ–ನೀತಿಯ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸುವುದು.

ಸವಾಲುಗಳು:

- ಕ್ಯಾಂಪಸ್ ಸುತ್ತಲೂ ಖಾಸಗಿ ಹಾಗೂ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಿರುವುದರಿಂದ ಸ್ಪರ್ಧೆ ಹೆಚ್ಚಾಗಿದೆ.
- ರಾಜ್ಯ ಸರ್ಕಾರದಿಂದ ಹಣಕಾಸಿನ ಬೆಂಬಲ ಕಡಿಮೆ ಇದೆ.
- ಉನ್ನತ ಶಿಕ್ಷಣದ ಖಾಸಗೀಕರಣ ಹೆಚ್ಚಾಗುತ್ತಿರುವುದು.
- ದಾಖಲಾತಿ ಹೆಚ್ಚಿಸಲು ಸಮಾಜದ ಅಂಚಿನ ಸಮುದಾಯಗಳಲ್ಲಿ ಅಸರ್ಮಪಕ ಸೌಕರ್ಯಗಳು.

- ವಿಶ್ವವಿದ್ಯಾನಿಲಯವನ್ನು ಮೂರು ಭಾಗಗಳಾಗಿ ವಿಭಜಿಸಿರುವುದರಿಂದ ಉಲ್ಬಣಗೊಂಡ ಸಿಬ್ಬಂಧಿ ಹಾಗೂ ಸಂಸ್ಥೆಯ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುವುದು.
- ವೇಗವಾದ ವಿಸ್ತರಣೆ ಮತ್ತು ಬೆಳವಣಿಗೆ ಸಾಧಿಸಲು ದಕ್ಷ ಮತ್ತು ಅರ್ಹ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಿಸುವುದು.
- ಅಗತ್ಯಕ್ಕೆ ತಕ್ಕಂತೆ ಕಡಿಮೆ ಸಮಯದಲ್ಲಿಯೇ ಹೆಚ್ಚು ಗುಣಟ್ಟದ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸುವುದು.
- ರಾಜ್ಯದ ಹಣಕಾಸು ಸಹಾಯದ ಮೇಲೆ ಅವಲಂಬನೆಯಾಗದೆ, ಸ್ವಾವಲಂಬನೆ ಸಾಧಿಸುವುದು.
- ನಾಯಕತ್ವದ ಹಂಚಿಕೆ ಹಾಗೂ ಸಾಮೂಹಿಕ ಜವಾಬ್ದಾರಿಯ ಆಡಳಿತ ವ್ಯವಸ್ಥೆಯ ನಿರ್ಮಾಣ.
- ಸಾಮರ್ಥ್ಯದ ಕೊರತೆಯಿರುವ ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು.
- ಬೆಳವಣಿಗೆಯ ಅಗತ್ಯತೆಗಳನ್ನು ಪೂರೈಸಲು ಕಾಲಕಾಲಕ್ಕೆ ಸಮರ್ಪಕ ಹಣಕಾಸು ಸೌಲಭ್ಯ ಪಡೆಯವುದು.
- ವಿಶ್ವದರ್ಜೆಯ ಮತ್ತು ಶ್ರೇಷ್ಟ ಗುಣಮಟ್ಟದ ಸಂಶೋಧನೆ ಮತ್ತು ಪಬ್ಲಿಕೇಷನ್‌ಗಳನ್ನು ರೂಪಿಸುವುದು.

೨. ಅಲ್ಪಾವಧಿ ಮತ್ತು ದೀರ್ಘಾವಧಿ ದೃಷ್ಟಿಕೋನದ ಯೋಜನೆಗಳು– ಕೈಗೊಂಡ ಆಡಳಿತಾತ್ಮಕ ಕ್ರಮಗಳು, ಬೋಧಕೇತರ ಸಿಬ್ಬಂದಿಯ ತರಬೇತಿ:

- ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಸಂಸ್ಥೆಗಳ ಜೊತೆ ಸ್ಪರ್ಧೆ ಮಾಡುವಷ್ಟು ಸಮರ್ಥವಾಗಿ ವಿಶ್ವವಿದ್ಯಾನಿಲಯವನ್ನು ರೂಪಿಸುವುದು.
- ಬೋಧನೆ– ಕಲಿಕಾ ಪ್ರಕ್ರಿಯೆಗಳ ಗುಣಮಟ್ಟವನ್ನು ವೃದ್ಧಿಸುವುದು.
- ಅನುಭವಿ ಬೋಧಕ ವೃಂದವನ್ನು ನೇಮಿಸಿಕೊಳ್ಳುವುದು.
- ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಉನ್ನತ ಶಿಕ್ಷಣ ದೊರೆಯುವಂತೆ ಮಾಡುವುದು.
- ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿಯ ಅನುಪಾತವನ್ನು ಹೆಚ್ಚಿಸುವುದು.
- ವಿಶ್ವವಿದ್ಯಾನಿಲಯದ ಸಂಶೋಧನಾರ್ಥಿಗಳಲ್ಲಿ ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಅತ್ಯಾಧುನಿಕ ತಾಂತ್ರಿಕ ಕೌಶಲ್ಯಗಳು ದೊರೆಯುವಂತೆ, ಪಡೆದುಕೊಳ್ಳುವಂತೆ ಮಾಡುವುದು ಮತ್ತು ಉತ್ತೇಜಿಸುವುದು.
- ಮೌಲ್ಯವರ್ಧಿತ ಶಿಕ್ಷಣ ವ್ಯವಸ್ಥೆಯಿಂದ ವಿದ್ಯಾರ್ಥಿಗಳಲ್ಲಿ ಉದ್ಯೋಗಶೀಲತೆಯನ್ನು ಹೆಚ್ಚಿಸುವುದು.
- ದಾಖಲಾತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈಗಿರುವ ಸೌಲಭ್ಯಗಳ ಜೊತೆಗೆ ಹೆಚ್ಚುವರಿ ಭೌತಿಕ, ಶೈಕ್ಷಣಿಕ ಮತ್ತು ಸಂಶೋಧನೆಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು.

– ಆದಾಯ ವರ್ಧನೆಗೆ ಸಮಾಲೋಚನೆ ಅಥವಾ ಉದ್ಯೋಗ ಮಾಹಿತಿಯಂತಹ ಚಟುವಟಿಕೆಗಳನ್ನು ಹೆಚ್ಚಿಸುವುದು.

ಸಿ. ನ್ಯಾಕ್ ಪೀರ್ ಟೀಮ್ ಮತ್ತು ಅಡ್ಮಿನಿಸ್ಟ್ರೇಟಿವ್ ಅಂಡ್ ಅಕಾಡೆಮಿಕ್ ಆಡಿಟ್ (ಎಎಎ) ಸಮಿತಿಗಳ ಶಿಫಾರಸ್ಸುಗಳು ಮತ್ತು ವರದಿಗಳ ಆಧಾರದಲ್ಲಿ ಕೈಗೊಂಡ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳು (ಶಿಫಾರಸ್ಸು ಮತ್ತು ವರದಿಯ ಪ್ರತಿಗಳನ್ನು ಸೇರಿಸಬಹುದು):

ವಿಶ್ವವಿದ್ಯಾನಿಲಯವು ಇನ್ನೂ ನ್ಯಾಕ್ ಮಾನ್ಯತೆ ಪಡೆಯುವ ಪ್ರಕ್ರಿಯೆಗೆ ಒಳಪಡಬೇಕಿದೆ.

ಡಿ. ಪ್ರಧಾನ ಕ್ಯಾಂಪಸ್‌ನಷ್ಟೇ ಗುಣಮಟ್ಟದಲ್ಲಿ ಸ್ನಾತಕೋತ್ತರ ಕೇಂದ್ರ/ಹೆಚ್ಚುವರಿ ಕ್ಯಾಂಪಸ್‌ಗಳನ್ನು ರೂಪಿಸಲು ಮತ್ತು ಅಭಿವೃದ್ಧಿಗೊಳಿಸಲು ಕೈಗೊಂಡ ಆಡಳಿತಾತ್ಮಕ ಕ್ರಮಗಳು:

ವಿಶ್ವವಿದ್ಯಾನಿಲಯವು ಪ್ರತ್ಯೇಕ ಸ್ನಾತಕೋತ್ತರ ಕೇಂದ್ರ/ಹೆಚ್ಚುವರಿ ಕ್ಯಾಂಪಸ್‌ಗಳನ್ನು ಹೊಂದಿಲ್ಲ.

ಇ. ಪರಿಣಾಮ ಬೀರುವ ಮತ್ತು ಸಮಾಜಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಒತ್ತು ನೀಡುವ (ಪಿಹೆಚ್‌ಡಿ ವಿಷಯಗಳು, ಹಣಕಾಸು ನೆರವು ನೀಡುವ ಏಜೆನ್ಸಿಗಳಿಗೆ ಪ್ರಸ್ತಾಪವಿಟ್ಟ ಪ್ರಾಜೆಕ್ಟ್‌ಗಳು, ಸಂಶೋಧನಾ ಮುದ್ರಣಗಳು, ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ವಿಸ್ತರಣೆ)ಚಟುವಟಿಕೆಗಳು:

ವಿಶ್ವವಿದ್ಯಾನಿಲಯದ ಕಲಾ ನಿಖಾಯದ ವಿಭಾಗಗಳಲ್ಲಿ ಖಾಯಂ ಬೋದಕರು ಇಲ್ಲ ಮತ್ತು ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಬೋದಕರ ಕೊರತೆಯಿದೆ. ಬೆಂಗಳೂರಿಗೆ ನಿರ್ದಿಷ್ಟ ಅದರಲ್ಲಿಯೂ ಮುಖ್ಯವಾಗಿ ಸಾಮಾಜಿಕತೆಗೆ ಸಂಬಂಧಿಸಿದ ಸಂಶೋಧನಾ ವಿಷಯಗಳನ್ನು ಕೈಗೆತ್ತುಕೊಳ್ಳಲು ಕಲಾ ನಿಖಾಯದ ಸಿಬ್ಬಂದಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೇರಪಿಸುವ ಪ್ರಯತ್ನ ಮಾಡಲಾಗುವುದು. ನಾಗರೀಕ ಸಂಸ್ಥೆಗಳಾದ ಬಿಬಿಎಂಪಿ, ಬಿಡಿಎ, ಮೆಟ್ರೋ, ಕೆಎಸ್‌ಅರ್‌ಟಿಸಿ, ಕೆಯುಡಬ್ಲ್ಯೂಎಸ್‌ಎಸ್‌ಬಿ, ಭಾರತೀಯ ರೈಲ್ವೆ, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಇತರೆ ಏಜೆನ್ಸಿಗಳನ್ನು ಆಯಾಯಾ ಏಜೆನ್ಸಿಗಳ ಕ್ಷೇತ್ರಗಳಲ್ಲಿ ಸಮಾಜಕ್ಕೆ ಸಂಬಂಧಿಸಿದ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲು ಹಣಕಾಸಿನ ನೆರವು ನೀಡಲು ಮನವಿ ಮಾಡಲಾಗುವುದು. ಬೆಂಗಳೂರು ನಗರ ಕೇಂದ್ರಿತ ಸಮಸ್ಯೆಗಳು ಹೆಚ್ಚಾಗುತ್ತಿದ್ದು ಹಲವು ಸ್ನಾತಕೋತ್ತರ ವಿಭಾಗಗಳು ಈ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕಿದೆ. ಹಾಗಾಗಿ, ಐಕ್ಯುಎಸಿ ಮತ್ತು ಪಿಎಂಇಬಿ ಮಂಡಳಿಗಳಿಂದ ಉತ್ತಮ ಸಮನ್ವಯತೆಗೆ ಪ್ರಯತ್ನಗಳು ನಡೆಯಬೇಕಿದೆ. ಪರಿಸರ ಮತ್ತು ಪರಿಸರ ವಿಜ್ಞಾನ(ಎನ್ವಿರಾನ್‌ಮೆಂಟ್ ಅಂಡ್ ಎಕಾಲಜಿ), ನಗರ ಅಧ್ಯಯನ ಮತ್ತು ಯೋಜನೆ(ಅರ್ಬನ್ ಸ್ಟಡೀಸ್ ಅಂಡ್ ಪ್ಲಾನಿಂಗ್), ತಂತ್ರಜ್ಞಾನ(ಟೆಕ್ನಾಲಜಿ), ಕಾನೂನು ಮತ್ತು ಸಾರ್ವಜನಿಕ ನೀತಿ(ಲಾ ಅಂಡ್ ಪಬ್ಲಿಕ್ ಪಾಲಿಸಿ)ಯಂತಹ ಪ್ರಸ್ತಾಪಿತ ಸ್ನಾತಕೋತ್ತರ ವಿಭಾಗಗಳು ಅಂತರ್‌ಶಿಸ್ತೀಯ ಸಂಶೋಧನಾ ಸಾಧ್ಯತೆಗಳಿಗೆ ಉತ್ತಮ ಪ್ರವೇಶಿಕೆ ನೀಡಬಲ್ಲವು. ಈಗಿರುವ ವಾಣಿಜ್ಯ, ರಸಾಯನಶಾಸ್ತ್ರ, ಜೀವ ರಸಾಯನಶಾಸ್ತ್ರ, ನಿರ್ವಹಣೆಯಂತಹ ವಿಭಾಗಗಳು 'ವಿಜ್ಞಾನ ಮತ್ತು ಸಮಾಜ'(ಸೈನ್ಸ್ ಅಂಡ್ ಸೊಸೈಟಿ) ವಿಧಾನವನ್ನು ಪರಿಗಣಿಸಿ, ಸಂಶೋಧನಾ ವಿಷಯಗಳನ್ನು ರೂಪಿಸಬಹುದಾಗಿದೆ.

ಕೆಳಗೆ ನೀಡಿದ ಸಂಶೋಧನಾ ಕ್ಷೇತ್ರಗಳು ಬೆಂಗಳೂರು ನಗರಕ್ಕೆ ಸಾಮಾಜಿಕವಾಗಿ ಪ್ರಸ್ತುತವಾಗಿದ್ದು, ವಿಶ್ವವಿದ್ಯಾನಿಲಯವು ಕೂಡ ಅಂತರ್‌ಶಿಸ್ತೀಯ ಸಂಶೋಧನಾ ಕಾರ್ಯಗಳನ್ನು ಉತ್ತೇಜಿಸುತ್ತದೆ. ಕೆಳಗೆ ನೀಡಿದ ಸಂಶೋಧನಾ ಕ್ಷೇತ್ರಗಳಲ್ಲಿ ಅಂತರ್‌ರಾಷ್ಟ್ರೀಯ ಗುಣಮಟ್ಟದ ಸಂಶೋಧನೆಯನ್ನು ರಾಜ್ಯ ಮತ್ತು

ರಾಷ್ಟ್ರದ ನಿರ್ದಿಷ್ಟ ನಗರವಾಗಿರುವ ಬೆಂಗಳೂರಿನ ನಗರ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳಬೇಕು.

- ಕೆರೆಗಳ ನೀರಿನ ಗುಣಮಟ್ಟ, ಮರುಪೂರಣದ ಕಾಯಕಲ್ಪಗಳ ಅಧ್ಯಯನಗಳು.
- ಕೊಳಚೆ ನೀರಿನ ಶುದ್ಧೀಕರಣ ಮತ್ತು ನಿರ್ವಹಣೆಯ ಅಧ್ಯಯನಗಳು.
- ಬೆಂಗಳೂರು ನಗರದ ವಾಯುಮಾಲಿನ್ಯ.
- ನಗರ ಪ್ರದೇಶದ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳು.
- ಮೂಲೆಗುಂಪಾದ ನಗರ ಜನಸಂಖ್ಯೆಗೆ ಸಂಬಂಧಿಸಿದ ಅಧ್ಯಯನ.
- ಲಿಂಗಾಧಾರಿತ ವಿಷಯಗಳು(ಎಲ್‌ಜಿಬಿಟಿಕ್ಯೂ)
- ವಲಸೆ ಕಾರ್ಮಿಕರು, ಗಾರ್ಮೆಂಟ್ ನೌಕರರು, ಇತ್ಯಾದಿ.
- ಐತಿಹಾಸಿಕ ಅಧ್ಯಯನಗಳು.

– **ಸ್ಥಳೀಯ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಿರುವ ಅವಕಾಶ**: ಬೆಂಗಳೂರು ನಗರವು ಎಲ್ಲಾ ಧರ್ಮಗಳು ಮತ್ತು ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿರುವ ಸ್ಥಳವಾಗಿದೆ. ಬೆಂಗಳೂರು ವಿದೇಶದ, ಭಾರತದ ಮತ್ತು ಕರ್ನಾಟಕದ ವಿವಿಧ ಪ್ರದೇಶಗಳ ಜನರು ಬಯಸಿ ಬರುವ ನಗರವಾಗಿದೆ. ವೈವಿಧ್ಯಮಯ ಸಂಸ್ಕೃತಿ, ಭಾಷೆ, ಸಾಹಿತ್ಯ ಮತ್ತು ಕಲೆಯಂತಹ ವಿಷಯಗಳು ಸಂಶೋಧನೆ ಮತ್ತು ಅಧ್ಯಯನಕ್ಕೆ ಪೂರಕ ಅವಕಾಶಗಳನ್ನು ತೆರೆದಿಟ್ಟಿವೆ. ಪ್ರಸ್ತಾವನೆಯಲ್ಲಿರುವ ಕಲೆ ಮತ್ತು ಸೌಂದರ್ಯಶಾಸ್ತ್ರ (ಆರ್ಟ್ ಅಂಡ್ ಏಸ್ತಟಿಕ್ಸ್) ದಂತಹ ಸ್ನಾತಕೋತ್ತರ ವಿಭಾಗವು ಅಂತರ್‌ಶಿಸ್ತೀಯ ಸಂಶೋಧನೆಯನ್ನು ಸಮನ್ವಯಗೊಳಿಸಬಲ್ಲದು ಮತ್ತು ವಿವಿಧ ಅಂತರ್‌ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಜೊತೆ ಸಾಂಸ್ಕೃತಿಕ ವಿನಿಮಯದ ಕಾರ್ಯಕ್ರಮಗಳನ್ನು ಆಯೋಜಿಸಲು ವೇದಿಕೆ ರೂಪಿಸಬಲ್ಲದು.

– **ಸಮುದಾಯ ಅಧ್ಯಯನಗಳು**: ಬೆಂಗಳೂರು ವೈವಿಧ್ಯತೆಯ ಸಾಮಾಜಿಕ ಜೀವನವನ್ನು ಹೊಂದಿದೆ. ತಮ್ಮದೇ ಆದ ಸಾಂಸ್ಕೃತಿಕ ಸಂಪ್ರದಾಯಗಳ ವಿವಿಧ ಸಮುದಾಯಗಳು ಮತ್ತು ಅವರ ಅಧ್ಯಯನವು ಅತ್ಯುತ್ತಮ ಸಂಶೋಧನಾ ಕ್ಷೇತ್ರವಾಗಿದೆ. ಉದಾಹರಣೆಗೆ ಈಶಾನ್ಯಾ ಭಾಗದ ಸಮುದಾಯ, ಗುಜರಾತ್, ಮಾರ್ವಾಡಿ, ಸಿಂಧಿ, ಪಂಜಾಬಿ, ಬೆಂಗಲಿ, ನೇಪಾಳಿ, ಕಾಶ್ಮೀರಿ, ಮರಾಠಿ, ತೆಲುಗು, ತಮಿಳು, ಮಲೆಯಾಳಿ ಸಮುದಾಯಗಳ ಜೊತೆಗೆ ಅಂತರ್‌ರಾಷ್ಟ್ರೀಯ ಜನಸಂಖ್ಯೆಯೂ ಸಹ ಇದೆ. ಈ ಸಾಮುದಾಯಿಕ ಅಧ್ಯಯನಗಳು ಜಾಗತಿಕ ಮಟ್ಟದಲ್ಲಿ ಉತ್ತಮ ಸಹಭಾಗಿತ್ವದ ಸಂಶೋಧನೆಗೆ ಅನುವು ಮಾಡಿಕೊಡುತ್ತವೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭೌಗೋಳಿಕ ಅಂಶಗಳು, ಸಾಮಾಜಿಕ ಅವಶ್ಯಕತೆಗಳು ಮತ್ತು ಇತರೆ ಲಾಜಿಸ್ಟಿಕ್ಸ್ ಒಳಗೊಂಡ ಕ್ಷೇತ್ರಗಳು ಹೆಚ್ಚು ಮುನ್ನೆಲೆಗೆ ಬಂದ ಸಂಶೋಧನಾ ಕಾರ್ಯಗಳಾಗಿವೆ.

ಎಫ್. ಸರ್ವೋತ್ತಮ ಉನ್ನತ ಶಿಕ್ಷಣವನ್ನು ಉತ್ತೇಜಿಸುವುದು:

–ಕಾರ್ಯಗಾರ, ವಿಶೇಷ ಉಪನ್ಯಾಸಗಳನ್ನು ಆಯೋಜಿಸುವ ಮೂಲಕ ಯುವ ವಿದ್ಯಾರ್ಥಿಗಳಿಗೆ ಪ್ರೇರೇಪಣೆ ನೀಡುವುದು.

– ವಿವಿಧ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಜಿ. ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು:

– ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯವು ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಿದೆ.

– ವಿಶ್ವವಿದ್ಯಾನಿಲಯವು ಜಾಗತಿಕ ಭಾಷೆಗಳ ಕೇಂದ್ರದ ಅಡಿಯಲ್ಲಿ ಸಂಜೆ ಸರ್ಟಿಫಿಕೇಟ್/ಡಿಪ್ಲೊಮಾ/ಅಡ್ವಾನ್ಸ್‌ಡ್ ಡಿಪ್ಲೋಮೊ ಕೋರ್ಸ್‌ಗಳನ್ನು ಆರಂಭಿಸಿದೆ.

– ಕಲಾ ನಿಖಾಯದ ವಿಭಾಗಗಳನ್ನು ನಡೆಸಲು ಹಳೆಯ ಭೌತಶಾಸ್ತ್ರ ಬ್ಲಾಕ್‌ಅನ್ನು ನವೀಕರಿಸಲಾಗಿದೆ.

– ಇದೇ ರೀತಿಯಲ್ಲಿ ಹೊಸ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸಲು ದೂರ ಶಿಕ್ಷಣದ ಹಳೆಯ ಕಟ್ಟಡವನ್ನು ಹಾಗೂ ನೈಸರ್ಗಿಕ ವಿಜ್ಞಾನಗಳ ಬ್ಲಾಕ್‌ನ ಒಂದು ಭಾಗವನ್ನು ದುರಸ್ಥಿಗೊಳಿಸಲಾಗಿದೆ.

ಹೆಚ್. ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗ/ಮಹಿಳೆ/ಅಂಗವಿಕಲರು ಹಾಗೂ ಇತರರ ಕಲ್ಯಾಣ ಕಾರ್ಯಕ್ರಮಗಳು:

ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಂತಹ ಇಲಾಖೆಗಳಿಂದ ದೊರೆಯುವ ಹಣಕಾಸು ನೆರವಿನ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುತ್ತದೆ. ಹಿಂದುಳಿದ ವರ್ಗ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳು ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ದೊರೆಯುವ ಸಹಾಯವನ್ನು ಪಡೆಯುವ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಸಿಗುವ ವಿದ್ಯಾರ್ಥಿ ವೇತನದಂತಹ ಈ ಎಲ್ಲಾ ಪ್ರಕ್ರಿಯೆಗಳನ್ನು ನಿರ್ವಹಿಸಲು ವಿಶೇಷ ಅಧಿಕಾರಿಯ ನೇತೃತ್ವದಲ್ಲಿ ಪ್ರತ್ಯೇಕ ಘಟಕವನ್ನು ಆರಂಭಿಸಲಾಗಿದೆ.

ಐ. ವಿಶ್ವವಿದ್ಯಾನಿಲಯದಲ್ಲಿ ಸಾಧ್ಯತೆಯಿರುವ ಎಲ್ಲಾ ರೂಪಗಳಲ್ಲಿ ಕನ್ನಡದ ಪ್ರೋತ್ಸಾಹ.

– ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಲಾಗಿದೆ.

– ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಹಾಗೂ ಇತರೆ ಎಲ್ಲಾ ಸಮಿತಿಗಳ ಸಭೆ, ಚರ್ಚೆ, ತೀರ್ಮಾನಗಳ ನಡಾವಳಿಗಳನ್ನು ಕನ್ನಡದಲ್ಲಿಯೇ ಸಿದ್ದಪಡಿಸಲಾಗುತ್ತಿದೆ.

– ಸ್ನಾತಕ ಪದವಿ ಕೋರ್ಸ್‌ಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸಬೇಕೆಂದು ಅಕ್ಯಾಡೆಮಿಕ್ ಕೌನ್ಸಿಲ್ ತೀರ್ಮಾನಿಸಿದೆ.

– ಕಲಾ ನಿಖಾಯದ ಬಹುತೇಕ ವಿದ್ಯಾರ್ಥಿಗಳು ಪರೀಕ್ಷೆಗಳನ್ನ ಕನ್ನಡ ಮಾಧ್ಯಮದಲ್ಲಿ ಬರೆಯುವುದರಿಂದ ಅವರಿಗೆ ಕನ್ನಡದಲ್ಲಿಯೇ ಬೋಧನೆ ಮಾಡಲು ಸೂಚಿಸಲಾಗಿದೆ.

ಜೆ. ಸಾರ್ವಜನಿಕ ಖಾಸಗೀ ಸಹಭಾಗಿತ್ವ (ಪಿಪಿಪಿ), ಹಳೆ ವಿದ್ಯಾರ್ಥಿ ಸಂಘ ಇತರೆಗಳ ಮೂಲಕ ಹಣಕಾಸು ಕ್ರೂಢೀಕರಣಕ್ಕೆ ಕೈಗೊಂಡ ಕ್ರಮಗಳು:

ಹಳೆ ವಿದ್ಯಾರ್ಥಿ ಸಂಘವನ್ನು ರಚಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಾರ್ವಜನಿಕ ಖಾಸಗೀ ಸಹಭಾಗಿತ್ವ (ಪಿಪಿಪಿ)ದ ಮೂಲಕ ಹಣಕಾಸು ಕ್ರೂಢೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಕೆ. ಮುಂದಿನ ಸ್ನಾತಕ ಪದವಿ/ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಪ್ರಾರಂಭವಾಗುವುದಕ್ಕೂ ಮೊದಲೇ ಪರೀಕ್ಷಾ ಫಲಿತಾಂಶ ಪ್ರಕಟಣೆಗೆ ಸಾಧ್ಯವಾಗುವ ನೂತನ ಕ್ರಮಗಳು

ಕಡಿಮೆ ಸಂಖ್ಯೆಯ ಸಿಬ್ಬಂದಿ ಹೊಂದಿರುವ ಪರೀಕ್ಷಾಂಗ ವಿಭಾಗವು ಲಭ್ಯವಿರುವ ಆಧುನಿಕ ತಂತ್ರಜ್ಞಾನ ಮತ್ತು ಉತ್ತಮ ಪ್ರಯೋಗಗಳನ್ನು ಅಳವಡಿಸಿಕೊಳ್ಳುವ ಮೂಲಕ ನಿರಂತರವಾಗಿ ಪ್ರಗತಿಯನ್ನು ಸಾಧಿಸುತ್ತಿದೆ. ಈ ಕೆಳಗಿನ ವಿನೂತನ ಕ್ರಮಗಳನ್ನು ಅಳವಡಿಸಿಕೊಂಡಿದೆ.

- ವಿದ್ಯಾರ್ಥಿಗಳ ಎಲ್ಲಾ ಮಾಹಿತಿಯನ್ನು ಆನ್‌ಲೈನ್ ಅಡ್ಮೀಷನ್ ಡಾಟಾದಿಂದ ನೇರವಾಗಿ ತೆಗೆದುಕೊಂಡಿದೆ.
- ಪರೀಕ್ಷಾ ನೋಂದಣಿ ಹಾಗೂ ಆಂತರಿಕ ಅಂಕ(ಇಂಟರ್ನಲ್ ಮಾರ್ಕ್ಸ್)ಗಳ ಸೇರ್ಪಡೆಯು ಆನಲೈನ್‌ನಲ್ಲಿಯೇ ಮಾಡಲಾಗುತ್ತದೆ.
- ಪರೀಕ್ಷಾ ಪೂರ್ವ ಮತ್ತು ನಂತರದ ಎಲ್ಲಾ ಕಾರ್ಯ ಚಟುವಟಿಕೆಗಳು ಸ್ವಯಂಚಾಲಿತವಾಗಿ ನಡೆಯುತ್ತವೆ.
- ಪರೀಕ್ಷಾ ಪ್ರವೇಶ ಪತ್ರಗಳನ್ನು ಆನ್‌ಲೈನ್ ಮೂಲಕವೇ ನೇರವಾಗಿ ವಿತರಿಸಲಾಗುತ್ತದೆ.
- ಎಲ್ಲಾ ಕೋರ್ಸ್‌ಗಳ ಪರೀಕ್ಷಾ ಉತ್ತರ ಪತ್ರಿಕೆಗಳ ಕೋಡಿಂಗ್‌ನಲ್ಲಿ ಸ್ವಯಂಚಾಲಿತ ವ್ಯವಸ್ಥೆ ಇರುವುದರಿಂದ ತಪ್ಪಾಗುವುದನ್ನು ಮತ್ತು ಸಮಯವನ್ನು ಉಳಿತಾಯ ಮಾಡಲಾಗುತ್ತಿದೆ.
- ಮೌಲ್ಯಮಾಪಕ/ಪರೀಕ್ಷಕರು ನೀಡುವ ಅಂಕಗಳಿಂದ ದೊರೆಯುವ ಫಲಿತಾಂಶದಲ್ಲಿ ತಪ್ಪಾಗುವುದನ್ನು ಬಹುತೇಕ ನಿಯಂತ್ರಿಸಲಾಗಿದೆ.
- ಮೊದಲೇ ನಿಗದಿಯಾದ ವಾರ್ಷಿಕ ಚಟುವಟಿಕೆಗಳ ಆಧಾರದಲ್ಲಿಯೇ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಮತ್ತು ಕೊನೆಯ ಪರೀಕ್ಷೆ ಮುಗಿದ ದಿನಾಂಕದಿಂದ 30 ದಿನಗಳೊಳಗೆ ಫಲಿತಾಂಶವನ್ನು ಸಹ ಪ್ರಕಟಿಸಲಾಗುತ್ತದೆ.

ಎಲ್. ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ವಿದ್ಯಾರ್ಥಿ ಪ್ರತಿನಿಧ್ಯ (ಕೆಎಸ್‌ಯು ಕಾಯಿದೆ 2000 ರ ಸೆಕ್ಷನ್ 30 ರ ಪ್ರಕಾರ).

ವಿಶ್ವವಿದ್ಯಾನಿಲಯವು ಅಕಾಡೆಮಿಕ್ ಕೌನ್ಸಿಲ್‌ಗೆ ವಿದ್ಯಾರ್ಥಿಗಳನ್ನು ನಾಮನಿರ್ದೇಶನ ಮಾಡುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ವಿದ್ಯಾರ್ಥಿಗಳನ್ನು ನಾಮ ನಿರ್ದೇಶನ ಮಾಡಲು ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸಲಾಗುತ್ತಿದೆ.

೩. ಕಣ್ಣೋಟ ಮತ್ತು ಧ್ಯೇಯ

ಕಣ್ಣೋಟ

ಬೆಂಗಳೂರು ನಗರ ವಿಶ್ವವಿದ್ಯಾಲಯವು ಬೆಂಗಳೂರು ನಗರದ ಸಹನಶೀಲ ಹೃದಯ, ಸ್ಪಂದನ ಮನಸ್ಸು ಮತ್ತು ಪರಿವರ್ತನ ಶಕ್ತಿಯಾಗುವ, ಸ್ಥಳೀಯ ಹಾಗೂ ಜಾಗತಿಕ ಮಟ್ಟದಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸುವ, ತನ್ನ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಜನತೆಯ ಸೃಜನಶೀಲತೆ, ಶಕ್ತಿ ಮತ್ತು ಸಂಪನ್ಮೂಲಗಳ ಸದ್ಬಳಕೆಯ ಕಣ್ಣೋಟವನ್ನು ಹೊಂದಿದೆ.

ಧ್ಯೇಯ

ಬೆಂಗಳೂರು ನಗರ ವಿಶ್ವವಿದ್ಯಾಲಯವು ಜ್ಞಾನ ಸೃಷ್ಟಿ, ಪ್ರಸರಣ ಮತ್ತು ಅನ್ವಯದ ರೂಪುರೇಷೆಯನ್ನು ಹೊಂದಿದ್ದು ಆ ನಿಟ್ಟಿನಲ್ಲಿ ಪೂರಕವಾದ ಸಾಮಾಜಿಕ ಪರಿಸರವನ್ನು ಬೆಳೆಸುವುದು ಇದರ ಧ್ಯೇಯವಾಗಿದೆ. ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯವಾಗಿ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯದ ಗುರಿ–

೧. ಪ್ರವೇಶ, ಸುಲಭವಾಗಿ ದೊರೆಯುವ, ಸಮತೆ ಮತ್ತು ಒಳಗೊಳ್ಳುವಿಕೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವ ಮೂಲಕ ಎಲ್ಲರಿಗೂ ಜ್ಞಾನದ ಹೆಬ್ಬಾಗಿಲಾಗುವ ಗುರಿ.

೨. ಜ್ಞಾನ ಮತ್ತು ವಿಚಾರಗಳ ಮುಕ್ತ ವಿನಿಮಯವನ್ನು ಸುಗಮಗೊಳಿಸುವ ಮೂಲಕ ಶಿಕ್ಷಣ ಸಂಸ್ಥೆಗಳ, ಸರ್ಕಾರ, ಉದ್ಯಮ, ಸಮುದಾಯ ಮತ್ತು ಸಮಾಜದ ನಡುವೆ ಸ್ಪಂದನಶೀಲ ಸಂಸ್ಕೃತಿಯನ್ನು ಬೆಳೆಸುವುದು.

೩. ನಗರದ ಮತ್ತು ಸ್ಥಳೀಯ ಮಾನವ ಬಂಡವಾಳ ಮತ್ತು ಸಂಪನ್ಮೂಲಗಳ ಮೇಲೆ ಪ್ರಭಾವ ಬೀರುವ ಮೂಲಕ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಂಪರೆಯನ್ನು ಉತ್ಕೃಷ್ಟಗೊಳಿಸುವುದು.

೪. ಒಂದು ಪ್ರಮುಖ ಜಾಗತಿಕ ಮಹಾನಗರವಾಗಿ ಬೆಂಗಳೂರಿನ ಖ್ಯಾತಿ, ಬೆಳವಣಿಗೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದು.

೫. ಸ್ಥಳೀಯ ಮತ್ತು ಜಾಗತಿಕ ಸಂದರ್ಭಗಳಲ್ಲಿ ಪ್ರಸ್ತುತ ಸಮಸ್ಯೆಗಳೊಂದಿಗೆ ಮುಖಾಮುಖಿಯಾಗುವುದರ ಮೂಲಕ ಬೋಧನೆ, ಸಂಶೋಧನೆ ಮತ್ತು ಸೇವೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದು.

೬. ವೈಜ್ಞಾನಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಭವಿಷ್ಯದ ನಾಯಕರುಗಳನ್ನು ರೂಪಿಸುವುದು.

೭. ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವ, ಶ್ರಮ ಮತ್ತು ಸಾಮಾಜಿಕ ಆತ್ಮಸಾಕ್ಷಿಯ ಬಗ್ಗೆ ಗೌರವವನ್ನು ಬೆಳೆಸುವುದು.

೮. ತನ್ನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳಲ್ಲಿ ವಿನೂತನ ಮತ್ತು ಉತ್ತಮ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮತ್ತು ತನ್ನ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟವಾದ ಸೇವೆಯಿಂದ ವಿಶಿಷ್ಟ ಸಾರ್ವಜನಿಕ ವಿಶ್ವವಿದ್ಯಾಲಯವಾಗಿ ಹೊರಹೊಮ್ಮುವುದು.

೪. ಸಂಘಟನೆ ಮತ್ತು ಆಡಳಿತ:

ಎ. ವಿಶ್ವವಿದ್ಯಾನಿಲಯದ ಕ್ಯಾಂಪಸ್ ಒಳಗಿನ ಮತ್ತು ಹೊರಗಿನ ಆಡಳಿತಾತ್ಮಕ ವಿಧಾನಗಳು.

- ದಿನನಿತ್ಯದ ಆಡಳಿತ ಮತ್ತು ಉಸ್ತುವಾರಿಯಲ್ಲಿ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.
- ವಿಭಾಗಗಳ ಮುಖ್ಯಸ್ಥರುಗಳು, ಅಧಿಕಾರಿಗಳು ಮತ್ತು ಪ್ರಾಂಶುಪಾಲರೊಂದಿಗೆ ನಿರಂತರ ಸಭೆಗಳು.
- ಅಗತ್ಯವಿದ್ದಾಗೆಲ್ಲಾ ವಿಭಾಗಗಳು ಮತ್ತು ಕಾಲೇಜುಗಳಿಗೆ ಭೇಟಿ ನೀಡುವುದು.
- ವಿಭಾಗಗಳ ಸುಗಮ ಕಾರ್ಯನಿರ್ವಹಣೆಗೆ ಆಡಳಿತ ವ್ಯವಸ್ಥೆಯೊಂದಿಗೆ ಅಂತರ್‌ಸಂಪರ್ಕದ ಕೊಂಡಿಯಾಗಿ ಕಾರ್ಯನಿರ್ವಹಿಸಲು ವಿಭಾಗಗಳ ಮುಖ್ಯಸ್ಥರುಗಳಿಗೆ ಜವಾಬ್ದಾರಿಗಳನ್ನು ವಹಿಸುವುದು.
- ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ನಂತಹ ಉನ್ನತ ಆಡಳಿತ ಮಂಡಳಿಗಳ ಸಭೆಗಳಲ್ಲಿ ಚರ್ಚೆಯಾದ, ತೆಗೆದುಕೊಂಡ ತೀರ್ಮಾನಗಳ ಅನುಷ್ಠಾನದ ವರದಿ ಮತ್ತು ಮೇಲ್ವಿಚಾರಣೆಗೊಳಪಟ್ಟ ಚಟುವಟಿಕೆಗಳ ಬಗ್ಗೆ ಗಮನ ಹರಿಸುವುದು.

ಬಿ. ಖಾಲಿಯಿರುವ ಆಡಳಿತಾತ್ಮಕ/ತಾಂತ್ರಿಕ/ಸಹಾಯಕ ಸಿಬ್ಬಂದಿ ಹುದ್ದೆಗಳ ಭರ್ತಿಗೆ ಕೈಗೊಂಡ ಕ್ರಮಗಳು:

